rising of prices: Now there is no difficulty. The Government will take a decision as early as possible on the cost of the operation of the Auto-rickshaw. The Home Secretary was also not in the Head-quarters and he had been to Calcutta so far To umorrow I have fixed up a meeting and it may take a weak for the Government to go into detail and arriving at a decision. A decision will be taken immediately.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಒಂದು ವಾರ ಆಗುತ್ತದೆ ಎಂದು ಹೇಳುತ್ತಿದ್ದಾರೆ, ಏಕೋ ನನಗೆ ಅರ್ಥವಾಗುತ್ತಿಲ್ಲ.

SRI MOHAMMED ALI.—What I have to say is for all practicas purpose, the drivers of auto rickshaw are collecting 90 paise as minimum. There is no reason why they should strike and all that. On the other hand the public should have agitated for the increase in the minimum and for the higher rates for every mile. The publie is not doing because they are not organised.

SRI T, R. SHAMANNA.—Let the interests of the computers also be taken into account while arriving at a decision. The Government will have to take ieto account the rates they are demanding and also the cost of operation.

SRI MOHAMMED ALI —Both have got to be taken into account. Operation of the Auto-rickshaw and the conveninoe of the public will be taken into consideration. The convenience of the public should not be overlooked, Both these aspects will have to be considered by the Government. It will take 2 or 3 days to arrive at a conclusion. There are various reasons for Dharna. I do not want to tell now.

Budget Estimates for 1975-76 Demailer for grants Demand No. 43 Food and Civil Suppies.

SMT. E. E. VAZ.—I beg to move :

"That a sum not exceeding Rs. 74,49,28,000 be granted to the Government to defray the charges which will come in course of payment during the financial year ending 31st day of March 1976 in respect of Demand No. 43 Food and Civil Supplies.

MADAM SPEAKER,— The motion moved.

"That a sum not exceeding Rs. 74,49,28,000 be granted to the Government to defray the charges which will come in course of payment during the financial year ending 31st day March 1971 in respect of Demand No. 43 Food and Civil Supplies.

† ಶ್ರೀ ಟಿ. ಆರ್. ಶಾಮಣ್ಣ.—(ಕೋಟೆ) ಮಾನ್ಯ ಸಭಾಧ್ಯಕ್ಷಿಣಿಯರೇ, ಇಂದು ನಮ್ಮ ಮುಂದೆ ಆಹಾರ ಸಚಿವರು ಮಂಡಿಸಿರತಕ್ಕ ೭೪ ಕೋಟಿ ರೂಪಾಯಿನ ಆಹಾರದ ಬೇಡಿಕೆಯನ್ನು ಪೂರ್ಣವಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೇಡಿಕೆಗಳ ಬಗ್ಗೆ ನಮ್ಮ ವಿರೋಧವಾದರೂ ಇಷ್ಟೆ. ಸರ್ಕಾರದ ಆಹಾರದ ನೀತಿಯಿಂದ ಒಂದು ಕಡೆ ರೈತರೂ ಉದ್ಧಾರವಾಗುವ ಹಾಗಿಲ್ಲ. ಮತ್ತೊಂದು ಕಡೆ ಬಳಕೆದಾರರು ಕೂಡ ಬಹಳ ಕಷ್ಟಕ್ಕೆ ಸಿಕ್ಕಿ ತೊಂದರೆ ಪಡುತ್ತಿರುವುದರಿಂದ ಇದನ್ನು ಪೂರ್ಣವಾಗಿ ವಿರೋಧಿಸಬೇಕಾಗಿದೆ.

ಮೊದಲನೆಯದಾಗಿ ಒಂದು ಕಡೆ ರೈತರ ಶೋಷಣೆಯಾಗುತ್ತಿದೆ. ಮತ್ತೊಂದು ಕಡೆ ಬಳಕೆದಾರರಿಗೆ ಅಕ್ಕಿಯ ಗುಣಮಟ್ಟ ಹಾಗೂ ಬೆಲೆ ಏರಿಕೆ ಮತ್ತು ಬೇರೆ ತೊಡಕುಗಳು ಆಗುತ್ತಿವೆ. ಈಗ ಅಕ್ಕಿಗೆ ಇಟ್ಟಿರತಕ್ಕ ರೇಟನ್ನು ತೆಗೆದುಕೊಂಡರೆ, ಕೋರ್ಸ್, ಫೈನ್ ಸೂಪರ್ ಫೈನ್‌ಗೆ ೧-೬೦, ೧-೫೫ ೧-೯೦ ಪೈಸೆ ಇತ್ತು. ನನ್ನ ಒಂದು ಹೇಳಿಕೆಯಾದರೂ ಇಷ್ಟೆ; ಒಂದು ಕಡೆ ಕನ್‌ಸೂಮರ್ ಅತೀ ಹೆಚ್ಚಿನ ಬೆಲೆಯನ್ನು ಕೊಡಬೇಕಾಗಿದೆ. ಮತ್ತೊಂದು ಕಡೆ ರೈತನಿಗೆ ನ್ಯಾಯವಾದಂಥ ಬೆಲೆ ಏನು ಸಿಕ್ಕಬೇಕೋ ಅದು ಸಿಕ್ಕುತ್ತಾ ಇಲ್ಲ. ರೈಸ್ ಮೀಡಿಯಂ ಫೈನ್ ಸೂಪರ್‌ಫೈನ್ ಕೋರ್ಸ್ ವರೈಟಿ ಇದೆ. ಮೀಡಿಯಂ ರೈಸ್ ತೆಗೆದುಕೊಂಡರೆ ಭತ್ತ ಲೆವಿ ಮುಖಾಂತರ ಕೊಳ್ಳತಕ್ಕ ಬೆಲೆ ಕ್ವಿಂಟಾಲ್‌ಗೆ ೮೦ ರೂಪಾಯಿ. ೩ ಕ್ವಿಂಟಾಲ್ ಭತ್ತಕ್ಕೆ ೨ ಕ್ವಿಂಟಾಲ್ ಅಕ್ಕಿ ಆಗುತ್ತದೆ. ಭತ್ತ ಕ್ವಿಂಟಾಲ್‌ಗೆ ೮೦ ರೂಪಾಯಿನ ಪ್ರಕಾರ ೩ ಕ್ವಿಂಟಾಲ್ ತೆಗೆದುಕೊಂಡರೆ ೨೪೦ ರೂಪಾಯಿ ಆಗುತ್ತದೆ. ಮತ್ತೆ ಮಿಲ್ ಚಾರ್ಜಸ್ ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಎಲ್ಲಾ ಸೇರಿಸಿದರೆ ಸುಮಾರು ೧೨ ರೂಪಾಯಿ ಆಗಬಹುದು ಇದು ಅಂದಾಜಿವಲ್ಲಿ, ಇದರ ಖರ್ಚು ಒಂದು ಕೆ. ಜಿ. ಗೆ ೧-೪೫ ಆದರೆ ನಿಮಗೆ ಮಾರತಕ್ಕದು ಕೋರ್ಸ್‌ಗೆ ೧-೬೦ ಪೈಸೆ. ಮತ್ತು ಮೀಡಿಯಂ ರೈಸ್ ತೆಗೆದುಕೊಂಡರೆ ೧-೭೪ ೧-೭೫ಗೆ ಹೋಗುತ್ತಿದೆ. ಆದುದರಿಂದ ಭತ್ತವನ್ನು ಕೊಂಡು ಅದನ್ನು ಅಕ್ಕಿಯಾಗಿ ಮಾಡಿ ಬಳಕೆದಾರರಿಗೆ ಕೊಡುವ ಕಾಲದಲ್ಲಿ ಸಾಕಾದಷ್ಟು ಬಡವರ ಲೂಟಿಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈಗ ಕೊಡುತ್ತಾ ಇರತಕ್ಕ ಅಕ್ಕಿ ಗುಣಮಟ್ಟದಲ್ಲಿ ಬಹಳ ಹೀನವಾಗಿರುತ್ತದೆ, ಈಗ ನಮಗೆ ತಿಂಗಳಿಗೆ ರೇಷನ್‌ನಲ್ಲಿ ೨೭ ಕೆ. ಜಿ. ಅಕ್ಕಿ ಬರುತ್ತದೆ. ಕಳೆದ ೩ ತಿಂಗಳಿನದು ತೆಗೆದುಕೊಂಡರೆ ಸುಮಾರು ೮೦ ಕೆ. ಜಿ. ಆಯಿತು. ಅದನ್ನು ಪಾಲಿಷ್ ಮಾಡಿಸಿ, ಅದು ಸರಿಯಾದ ಉಪಯೋಗಿಸುವ ಪ್ರಯತ್ನ ಪಟ್ಟರೆ ನಮಗೆ ೧-೬೫ ಪೈಸೆ ಹಾಗೆ ಒಂದು ಕೆ.ಜಿ.ಗೆ ನಿಮ್ಮ ಲೆಕ್ಕ ತೆಗೆದುಕೊಂಡರೂ ಅದನ್ನು ಪಾಲೀಸ್ ಮಾಡಿಸಿದ ಮೇಲೆ ನಮಗೆ ೮೦ ಕೆ. ಜಿ. ಯಲ್ಲಿ ೬೦ ಕೆ. ಜಿ. ಬಂದಿದೆ. ಆದುದರಿಂದ ಇದಕ್ಕೆ ಕೆ. ಜಿ. ಅಕ್ಕಿಗೆ ೨-೩೫ ಇದ್ದ ಹಾಗೆ ಆಯಿತು. ೧-೬೫ ಪೈಸೆಗೆ ತೆಗೆದುಕೊಂಡರೂ ಕೂಡ ಬಳಸುವ ಹೊತ್ತಿಗೆ ಅದು ರೂಪಾಯಿ ೨-೩೫ ಆಗುತ್ತದೆ. ಮತ್ತು ಕಾರ್ಡಿಗೆ ಕೊಡತಕ್ಕ ಅಕ್ಕಿ ನಿಜವಾಗಿ ನೋಡಿದರೆ ಹೊಟ್ಟನ್ನು ತೆಗೆದುಬಿಟ್ಟರೆ ಅಕ್ಕಿ ನೋಡುವುದಕ್ಕೆ ಒಳ್ಳೆ ಮಂತ್ರಾಕ್ಷತೆ ಇದ್ದ ಹಾಗೆ ಇರುತ್ತದೆ. ಆದರೆ ಅದರಲ್ಲಿ ನುಚ್ಚು ಕಲ್ಲು ಇರುತ್ತದೆ. ನಾನು ಅಕ್ಕಿಯನ್ನು ತೆಗೆದುಕೊಂಡು ಬಂದಿದ್ದೇನೆ. ಉತ್ಪ್ರೇಕ್ಷೆಯಿಲ್ಲ ಅಕ್ಕಿಯನ್ನು ಮಿಲ್‌ಗೆ ಕೊಟ್ಟು ಪಾಲಿಶ್ ಮಾಡಿಸಿ, ಜರಡಿ ಹಿಡಿದು ತೆಗೆದುಕೊಂಡು ಬಂದಿದ್ದೇನೆ. ಅದನ್ನು ಉಪಯೋಗಿಸುವುದಕ್ಕೆ ಆಗುತ್ತದೆಯೇ ನೋಡಿ, ಇದನ್ನು ತಮ್ಮ ಮುಖಾಂತರ ಮಾನ್ಯ ಆಹಾರ ಸಚಿವರಿಗೆ ಕಳಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ, ಒಂದು ಕಡೆ ಕಚಡ ಅಕ್ಕಿಯನ್ನು ಜನಗಳಿಗೆ ಕೊಡುತ್ತಿದ್ದಾರೆ. ಇನ್ನೊಂದು ಕಡೆ ರೈತನ ಶೋಷಣೆಯಾಗುತ್ತಿದೆ. ಇದರಿಂದ ಯಾವ ಉದ್ಧಾರವಾಯಿತು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಈಗ ಏನಾಗಿದೆ ಎಂದರೆ, ಭತ್ತ ಕೊಂಡು ಅದನ್ನು ಅಕ್ಕಿ ಮಾಡುವುದಕ್ಕೆ ೨೦ ರಿಂದ ೨೫ರ ವರೆಗೂ ಕೂಡ ಹೋಗುತ್ತಿದೆ. ಇದು ಬಹಳ ಜಾಸ್ತಿ ಎಂದು ತೋರುತ್ತಿದೆ. ಅಕ್ಕಿಯನ್ನು ತೆಗೆದುಕೊಳ್ಳುವಾಗ ಸಾಧಾರಣವಾಗಿ ಬಹಳ ರೀತಿ ಮೋಸಗಳು ನಡೆಯುತ್ತಾ ಇವೆ. ಒಂದನೆಯದಾಗಿ ರೈತ ಒಳ್ಳೆಯ ಭತ್ತ ಇದ್ದರೂ ಕೂಡ ಸಾಧಾರಣವಾಗಿ ಲೆವಿಗೆ ಕೊಡತಕ್ಕ ಭತ್ತ ಬೇರೆ. ಇದು ಹೇಗಾದರೂ ಇರಲಿ, ನಾನು ಇದರ ಬಗ್ಗೆ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ರೈತನಿಂದ ಸರ್ಕಾರದವರು ೧೦ ಪರ್ಸೆಂಟ್ ತೆಗೆದುಕೊಳ್ಳುತ್ತಾರೆ ಮತ್ತು ಸಾಗಾಣಿಕೆ ಮಾಡತಕ್ಕ ಮಿಲ್‌ನವರು ತೆಗೆದುಕೊಳ್ಳುವಾಗ ೩೭½ ತೆಗೆದುಕೊಳ್ಳುತ್ತಾರೆ. ಶ್ರೀ ಟಿ. ಆರ್. ಶಾಮಣ್ಣ. ಇವೆರಡೂ ಸೇರಿಸಿದರೆ ಒಟ್ಟು ೪೭½ ಪರ್ಸೆಂಟ್ ಆಗುತ್ತದೆ. ಅಕ್ಕಿಯನ್ನು ತರಿಸಿಕೊಂಡಂಥ ವರ್ತಕರು ಇದನ್ನು ಸೇರಿಸಬೇಕಾಗುತ್ತದೆ. ಆದುದರಿಂದ ಅನಾವಶ್ಯಕವಾಗಿ ಒಂದು ಕಡೆ ರೈತನ ಶೋಷಣೆ ಆಗುತ್ತಿದೆ ಮತ್ತೊಂದು ಕಡೆ ಬೆಲೆಯನ್ನು ಹೆಚ್ಚಿಸುವುದಕ್ಕೆ ನಾನಾ ಕಾರಣಗಳಿಂದ ಆಗುತ್ತಿದೆ. ಈ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಇಲ್ಲದೇ ಇರುವುದರಿಂದ ಸಾಧಾರಣವಾಗಿ ಏನಾಗಿದೆ ಅನೇಕರು ಕಳ್ಳತನದಿಂದ ಅಕ್ಕಿಯನ್ನು ಸಾಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಒಂದು ಕಡೆ ಫುಡ್ ಇಲಾಖೆಯ ಸಿಬ್ಬಂದಿಯವರು ಲೂಟಿ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಪೋಲೀಸಿನವರ ಲೂಟಿ ಮಾಡುತ್ತಿದ್ದಾರೆ, ಪೋಲೀಸರು ಆಹಾರ ಇಲಾಖೆಯವರೂ ಮತ್ತು ಕೆಲವು ಮಿಲ್‌ನವರೂ ಇದರಲ್ಲಿ ಭಾಗಿಗಳಾಗಿದ್ದಾರೆ. ಈ ಮೂವರಲ್ಲಿ ಒಂದು ಹೊಂದಾಣಿಕೆ ಇರುವುದರಿಂದ ರೈತರಿಗೂ ಮತ್ತು

ಬಳಕೆದಾರರಿಗೂ ಒಂದು ಶೋಷಣೆಯಾಗುತ್ತಿದೆಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ಈ ಮಿಲ್‌ಗಳಿಗೆ ಬತ್ತವನ್ನು ಅಕ್ಕಿ ಮಾಡುವುದಕ್ಕೆ ಕೊಡುತ್ತೇವೆ, ಕೊಟ್ಟಾಗ ಅವರು ಏನು ಮಾಡುತ್ತಾರೆ. ೭೫ ಪರ್ಸೆಂಟ್ ಇರಬೇಕೆಂದು ಹೇಳಿದಾಗ ಅವರು ಹೊಟ್ಟನ್ನು ಮಾತ್ರ ತೆಗೆದು ಆದಷ್ಟು ಕಡಿಮೆ ಪಾಲಿಶ್ ಮಾಡಿ ೭೦ ಪರ್ಸೆಂಟ್ ಮಾತ್ರ ಮಾಡುತ್ತಾರೆ. ೫ ಪರ್ಸೆಂಟ್‌ನ್ನು ಉಳಿಸಿಕೊಳ್ಳುತ್ತಾರೆ. ಮೊದಲನೆಯದಾಗಿ ಮಿಲ್‌ನವರು ಈ ರೀತಿ ಲೂಟಿ ಮಾಡುತ್ತಾರೆ. ಅನಂತರ ಪೋಲೀಸಿನವರಿಗೆ ಹಂತ ಹಂತದಲ್ಲೂ ದುಡ್ಡು ಕೊಡಬೇಕಾಗುತ್ತದೆ. ಹೀಗಾಗುವುದರಿಂದ ಹೆಚ್ಚಿನ ರೇಟನ್ನು ಕನ್‌ಸ್ಯೂಮರ್ಸ್ ಮೇಲೆ ಹಾಕುತ್ತೀರಿ ಆದುದರಿಂದ ನಾನಾದರೂ ಹೇಳುತ್ತೇನೆ ನೀವು ಈ ರೀತಿ ರೈತರಿಗೂ ಶೋಷಣೆ ಮಾಡಿ ಕನ್‌ಸ್ಯೂಮರ್ಸ್‌ಗೂ ಶೋಷಣೆ ಮಾಡುವುದಕ್ಕಿಂತ ಇದರ ಜೊತೆಗೆ ನೀವು ಕೊಡತಕ್ಕಂಥ ೧–೬೫ ರ ಅಕ್ಕಿ ಏನಿದೆ ಅದನ್ನು ಪಾಲಿಶ್ ಮಾಡಿ ಅವರು ಉಪಯೋಗ ಮಾಡುವ ಹೊತ್ತಿಗೆ ಹೆಚ್ಚು ಕಡಿಮೆ ಅವರಿಗೆ ಎರಡು ಚಿಲ್ಲರೆ ಆಗುತ್ತದೆ ತಾವು ಕೊಟ್ಟಂಥ ಅಕ್ಕಿಯಿಂದ ಯಾವ ರೀತಿ ಉಪಯೋಗವಾಯಿತೆಂದು ಪ್ರಶ್ನೆ ಮಾಡಬೇಕಾಗಿದೆ. ಇದರಲ್ಲಿ ಏನಾಗಿದೆ ಎಂದರೆ ರೈತನಿಗೆ ಯಾವುದೇ ವಿಧವಾದಂಥ ಸಹಾಯ, ಉಪಯೋಗವಾಗದಿದ್ದ ಮೇಲೆ ಅವರು ೮೦ ರೂಪಾಯಿಗಳಿಗೆ ಏತಕ್ಕೆ ಕೊಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನೀವು ರೈತನಿಂದ ಅಕ್ಕಿಯನ್ನು ನೇರವಾಗಿ ಕೊಂಡುಕೊಂಡು ಸರಿಯಾದ ರೀತಿಯಲ್ಲಿ ಅಕ್ಕಿಯನ್ನು ಹಂಚಿದರೆ ಸರಿಹೋಗುತ್ತದೆ. ಈಗ ಸುಗ್ಗಿ ಕಾಲದಲ್ಲಿ ಅಕ್ಕಿ ಬೆಲೆ ೩–೦೦, ೩–೨೫ರ ವರೆಗೆ ಆಗಿರುವುದನ್ನು ನನ್ನ ಚರಿತ್ರೆಯಲ್ಲಿಯೇ ನನ್ನ ಜೀವನದಲ್ಲಿಯೇ ನೋಡಿಲ್ಲ. ಈ ರೀತಿ ಕಾರಣ ಎಂಬುದನ್ನು ಯೋಚನೆ ಮಾಡಿ. ಇದನ್ನು ತಾವು ಬಗೆಹರಿಸುವುದಕ್ಕೆ ಆಗದೇ ಹೋದರೆ ಬೇರೆ ಮಂತ್ರಿ ಪದವಿಯನ್ನು ತೆಗೆದುಕೊಳ್ಳಿ. ಈ ಆಹಾರದ ಇಲಾಖೆಯನ್ನು ಬಿಟ್ಟು ಬಿಡಿ ಎಂದು ಕೇಳಿಕೊಳ್ಳುತ್ತೇನೆ, ಕಳೆದ ೫ ವರ್ಷಗಳ ಕೆಳಗೆ ಮಾನ್ಯ ಕೆ. ಎಂ. ನಾಗಣ್ಣನವರು ಒಂದು ಚಳುವಳಿಯನ್ನು ಹೂಡಿದ, ಆಗ ಅಕ್ಕಿ ಬೆಲೆ ೧–೯೫ ಇತ್ತು, ಆಗ ಮಂಡಿ ವರ್ತಕರು ೧–೮೦ ೧-೧೫ಕ್ಕೆ ಮಾರುತ್ತೇವೆಂದು ಒಪ್ಪಿಕೊಂಡರು ಆದುದರಿಂದ ಸುಗ್ಗಿ, ಕಾಲದಲ್ಲಿಯೇ ಅಕ್ಕಿಯ ಬೆಲೆ ಇಷ್ಟು ಏರಿ ಹೋಗಿರುವುದರಿಂದ ಮುಂದೆ ಅಕ್ಕಿಯ ಬೆಲೆ ಯಾವ ರೀತಿಯಾಗಿರುತ್ತದೆಯೋ ಎನ್ನುವ ಬಗ್ಗೆ ನಾವು ಚೆನ್ನಾಗಿ ಪರಿಶೀಲನೆ ಮಾಡಬೇಕಾಗಿದೆ. ಏತಕ್ಕೆಂದರೆ ಪಕ್ಕದ ರಾಜ್ಯವಾದ ತಮಿಳು ನಾಡಿನಲ್ಲಿ ಇದ್ದಕ್ಕಿದಂತೆ ೬ ರೂಪಾಯಿಗಳು, ಆರೂವರೆ ರೂಪಾಯಿಗಳವರೆಗೆ ಏರತಕ್ಕಂತ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ತಾವು ರೈತರಿಗೆ ಯಾವುದಾದರೂ ಸಬ್ಸೀಡಿ ಕೊಟ್ಟು ಬೆಲೆ ಏರಿಕೆಯನ್ನು ಕಡಿಮೆ ಮಾಡಲೇ ಬೇಕು, ರೈತರು ಹೆಚ್ಚು ವಾಟರ್ ರೇಟನ್ನು ಕೂಡ ಕೊಡಬೇಕಾಗಿದೆ, ಜೊತೆಗೆ ೫ ರೂಪಾಯಿಗಳಿಂದ ೬ ರೂಪಾಯಿಗಳಿಗಿಂತ ಕಡಿಮೆ ಕೂಲಿ ಬರುವುದಿಲ್ಲ. ಮತ್ತು ರೈತನು ಬೆಳೆಯನ್ನು ಬೆಳೆಯಬೇಕಾದರೆ ಇನ್ನು ಅನೇಕ ತರಹದ ಕಷ್ಟಗಳು ಇವೆ. ಪಟ್ಟಣದಲ್ಲಿರುವವರಿಗೆ ಉಪಕಾರವನ್ನು ಮಾಡಬೇಕೆನ್ನುವ ಉದ್ದೇಶದಿಂದ ರೈತರನ್ನು ಶೋಷಣೆ ಮಾಡಿ ಪಟ್ಟಣಿಗರಿಗೆ ಅಕ್ಕಿಯನ್ನು ಒದಗಿಸಬೇಕೆಂದು ಹೇಳುವುದಿಲ್ಲ, ರೈತ ಬಹಳ ಕಷ್ಟಪಟ್ಟುಕೊಂಡು ಲೆವಿಯನ್ನು ಕೊಡುತ್ತಿದ್ದಾನೆ. ಮತ್ತೆ ಕನ್‌ಸ್ಯೂಮರ್ಸ್‌ಗೆ ಒಂದು ತಿಂಗಳಿಗೆ ಕೊಡ ತಕ್ಕಂಥ ೩ ಕೇಜಿ ಅಕ್ಕಿ ಏನೂ ಸಾಕಾಗುವುದಿಲ್ಲ, ಮತ್ತು ನೀವು ಕೊಡತಕ್ಕಂಥ ಅಕ್ಕಿಗೆ ಆವರೇಜ್ ಲೆಕ್ಕಹಾಕಿದರೆ ಎರಡೂವರೆ ರೂ ಆಗುತ್ತದೆ ಮತ್ತು ಹೆಚ್ಚಿನ ಅಕ್ಕಿಯನ್ನು ಅವರು ಕೊಂಡುಕೊಳ್ಳಬೇಕಾದರೆ ೩–೩½ ರೂ. ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ತಾವು ಇವತ್ತಿನ ದಿವಸ ಫುಡ್ ಡಿಪಾರ್ಟ್‌ಮೆಂಟಿನಲ್ಲಿ ಇಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡು, ಇಷ್ಟು ಹಣವನ್ನು ಇದರ ಮೇಲೆ ಹಾಕಿ, ಕಡೆಗೆ ಕನ್‌ಸ್ಯೂಮರ್ಸ್ ಅತಿ ಹೆಚ್ಚಿನ ಬೆಲೆ ಕೂಡ ಬೇಕಾದ ಪಕ್ಷದಲ್ಲಿ ಖಂಡಿತವಾಗಿ ಕನ್‌ಸ್ಯೂಮರ್ಸ್‌ಗೆ ಉಪಕಾರ ಮಾಡುತ್ತಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ನನ್ನ ಸಲಹೆಯಾದರೂ ಇಷ್ಟೆ ಗಡಿ ಪ್ರದೇಶಗಳು ಏನಿವೆಯೋ ಅಲ್ಲೆಲ್ಲಾ ನೀವು ಸರಿಯಾದಂಥ ಕಾವಲು ಹಾಕಿ, ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ಅಕ್ರಮವಾಗಿ ಸಾಗಾಣಿಕೆ ಆಗುವಂಥದ್ದನ್ನು ತಪ್ಪಿಸಿ.

ಇನ್ನು ಹಸಿ ಭತ್ತವನ್ನು ತೆಗೆದುಕೊಂಡು ಹೋಗಿ ಗೋಡೌನ್‌ಗಳಲ್ಲಿ ತುಂಬಿ ಬಿಟ್ಟಿರುತ್ತಾರೆ, ಅದು ಏನಾಗುತ್ತದೆ, ಎಂದರೆ ಅದೆಲ್ಲಾ ಭೂಸ್ಟು ಬಂದು ಬಿಟ್ಟಿರುತ್ತದೆ. ಇಲ್ಲಾ ಅದನ್ನು ಉಪಯೋಗಿಸುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿಗೆ ಬಂದು ಬಿಟ್ಟಿರುತ್ತದೆ. ಹೀಗಾಗಿ ಹಸಿ ಭತ್ತ ವರ್ತಕರಿಂದ ಆರ್ ವಾಸಿಯಾಗಿ ಬರುವ ಹೊತ್ತಿಗೆ ಇಳುವರಿಯೇ ಕಡಿಮೆಯಾಗುತ್ತದೆ. ಇನ್ನು ಮಿಲ್‌ಗಳಲ್ಲಿರತಕ್ಕಂಥವರ ಕೈಗೆ ಬೆಚ್ಚಗೆ ಮಾಡಿದರೆ ಫೈನ್ ಮಾಡು ಎಂದರೆ ಮೀಡಿಯಂ ಮಾಡುತ್ತಾನೆ, ಈ ರೀತಿಯ ಅಕ್ರಮಗಳು ಆಗತಕ್ಕಂಥದ್ದು ಇದೆ. ಎಲ್ಲಾ ವಿಧದಲ್ಲೂ ಕೂಡ ಈ ಲಂಚದ ಹಾವಳಿ ಬೇಕಾದಷ್ಟು ಹಾಗಿದೆ ಲಂಚದ ಹಾವಳಿ ಮತ್ತು ಈ ಮಧ್ಯಸ್ಥರಾಗಿರತಕ್ಕಂಥವರ ಲೂಟಿ ಇದನ್ನೆಲ್ಲಾ ಅಕ್ಕಿಯನ್ನು ಉಪಯೋಗಿಸುವವರ ಮೇಲೆ ಹಾಕತಕ್ಕಂಥದ್ದು ತಪ್ಪು. ಇದನ್ನು ಸರಿಯಾದ ರೀತಿಯಲ್ಲಿ ಮಾಡದೇ ಹೋದರೆ ಯಾವ ಸಂಸಾರವೇ ಆಗಲಿ ೩–೩½ ರೂ ಗಳ ಹಾಗೆ ಅಕ್ಕಿಯನ್ನು ಕೊಂಡುಕೊಂಡು, ಒಂದು ಸಂಸಾರದಲ್ಲಿ ೭–೮

ಜನ ಇರತಕ್ಕಂಥವರು, ಮುನ್ನೂರು ನಾನ್ನೂರು ರೂಪಾಯಿಗಳ ಸಂಬಳ ಬರತಕ್ಕಂಥವರು ಜೀವನ ಮಾಡುವುದು ಕಷ್ಟವಿದೆ. ಮನುಷ್ಯನ ಜೀವನಕ್ಕೆ ಆಹಾರವೇ ಅತಿಮುಖ್ಯವಾದದ್ದು ನೀವು ಅವರಿಗೆ ಎಷ್ಟೇ ಡಿ ಎ. ಕೊಟ್ಟರೂ ಸರಿಹೋಗುವುದಿಲ್ಲ, ಎಲ್ಲಿಯವರೆಗೆ ಆಹಾರದ ಬೆಲೆ ಇಳಿಯುವುದಿಲ್ಲವೋ ಅಲ್ಲಿಯ ವರೆಗೂ ಅವರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ನೀವು ಒಂದು ತಿಂಗಳಿಗೆ ೩ ಕೇಜಿ ಯಂತೆ ಕೊಟ್ಟರೂ ಅವರು ಹೆಚ್ಚಿನ ಭಾಗವನ್ನು ಹೊರಗಡೆಯಿಂದ ಕೊಂಡು ಕೊಳ್ಳಬೇಕಾಗುತ್ತದೆ. ೩ ಕೇಜಿ ಗೋಧಿ, ೩ ಕೇಜಿ ಅಕ್ಕಿ, ಮೈಲೋ ಕೊಡುತ್ತೇವೆಂದು ಹೇಳುತ್ತೀರಿ ಆದರೆ ಬೆಂಗಳೂರು ಪಟ್ಟಣದಲ್ಲಿ ಎಲ್ಲಿಯೂ ಮೈಲೋ ಸಿಕುವುದಿಲ್ಲ. ೩ ಕೆ. ಜಿ. ಅಕ್ಕಿಯನ್ನು ಕೊಡುತ್ತೀರಿ ಅದೂ ರೈತನಿಗೆ ಇಲ್ಲವೇ ಇಲ್ಲ, ಇನ್ನು ಗೋಧಿಯನ್ನು ಕೇಂದ್ರ ಸರ್ಕಾರದವರಿಂದ ತರಿಸಿಕೊಂಡು ಕೊಡುತ್ತೀರಿ, ಅನೇಕ ಸಾರಿ ಗುಣಮಟ್ಟ ಕೂಡ ಹೆಚ್ಚು ಕಡಿಮೆಯಾಗಿರುತ್ತದೆ ಕೆಲವು ವೇಳೆ ಅಕ್ಕಿ ರುಚಿಯಾಗಿಯೇ ಇರುವುದಿಲ್ಲ, ಗೋಧಿಯನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಆಗುವುದಿಲ್ಲ, ಆದುದರಿಂದ ಇವತ್ತು ಎಲ್ಲಿಯವರೆಗೆ ಅಕ್ಕಿಯ ಬೆಲೆ ಇಳಿ ಯುವುದಿಲ್ಲ ಅಲ್ಲಿಯವರೆಗೆ ಯಾವ ಸಮಸ್ಯೆಯನ್ನೂ ಬಗೆಹರಿಸುವುದಕ್ಕೆ ಆಗುವುದಿಲ್ಲ ಆದುದರಿಂದ ವಾರ್ ಫುಟ್ಟಿಂಗ್‌ನಂತೆ ತೆಗೆದುಕೊಂಡರು ರೈತರಿಗೆ ಏನು ಬೇಕೋ ಆ ಸೌಲಭ್ಯಗಳನ್ನೆಲ್ಲಾ ಕೊಡಿ, ಅವರಿಗೆ ಸಬ್ಸಿಡಿ ಕೊಡಿ; ಇಲ್ಲದಿದ್ದರೆ ರೈತರು ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ ತಾವು ಕೂಡಲೇ ಆಹಾರದ ನೀತಿಯನ್ನು ಸರಿಪಡಿಸಬೇಕು ಇಲ್ಲದೆ ಹೋದರೆ ಜನ ಸಾಯುತ್ತಾರೆಂದು ಈ ಸಂದರ್ಭದಲ್ಲಿ ಹೇಳ ಬೇಕಾ ಗುತ್ತದೆ ಮತ್ತು ನಾನು ಈಗಾಗಲೇ ಹೇಳಿದ ಹಾಗೆ ಭತ್ತಕ್ಕೆ ಕೊಡತಕ್ಕಂಥ ರೇಟಿಗೂ ಮತ್ತು ನೀವು ಅಕ್ಕಿ ಮಾಡಿ ಮಾರತಕ್ಕಂತ ರೇಟಿಗೂ ಬಹಳ ವ್ಯತ್ಯಾಸವಿದೆ. ಭತ್ತವನ್ನು ಕೊಂಡುಕೊಳ್ಳತಕ್ಕಂಥ ರೇಟ್ ೮೩ ರಿಂದ ೮೯ ರೂಪಾಯಿಗಳವರೆಗೆ ಕೂಡ ಭತ್ತದ ರೇಟಿದೆ. ಇವತ್ತಿನ ದಿವಸ ನೀವು ಕೊಡತಕ್ಕಂಥ ಕೋರ್ಸ್ ಅಕ್ಕಿ ರೇಟ್ ೧–೫೯ ಇದೆ, ಸೂಪರ್‌ಫೈನ್ ೧–೯೫ರವರೆಗೆ ಇದೆ. ಆದುದರಿದ ಏನಾಗುತ್ತಿದೆ ಎಂದರೆ ಮಧ್ಯವರ್ತಿಗಳಿಂದ ಬೇಕಾದಷ್ಟು ಅನ್ಯಾಯವಾಗುತ್ತಿದೆ ಇದನ್ನು ತಡೆಗಟ್ಟದೇ ಹೋದರೆ ಖಂಡಿತ ವಾಗಿ ಇದನ್ನು ಸರಿಯಾದಂಥ ರೀತಿಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲ. ನಿಮ್ಮ ಕ್ರಾಸ್ಟ್ ಪ್ರೈಜ್ ೧–೪೫ ರಿಂದ ೧–೫೦ಕ್ಕಿಂತ ಜಾಸ್ತಿಯಾಗುವುದಿಲ್ಲ. ಇವತ್ತು ರೈತ ಕಷ್ಟಪಟ್ಟು ಬೆಳೆಯನ್ನು ಬೆಳೆದು ಲೆವಿಯನ್ನು ಕೊಡಬೇಕಾಗುತ್ತದೆ. ಮತ್ತು ತಾನು ಶ್ರಮವಹಿಸಿ ಬೆಳೆದಿದ್ದನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ.

೩–೦೦ ಪಿ.ಎಂ.

ಏಕೆಂದರೆ ಅನೇಕರು ಲೆವಿ ಕೊಡಬೇಕು. ಕಷ್ಟಪಟ್ಟು ಬೆಳೆದು ಶ್ರಮವಹಿಸಿದವರನ್ನು ಹೆಚು ಕಡಿಮೆ ಕೊಡಿ ಎಂದರೆ ಯಾವ ಕಾರಣಕ್ಕೆ ಲೆವಿಯನ್ನು ಕೊಡಬೇಕೆಂದು ಕೇಳುತ್ತಾರೆ. ಪಟ್ಟಣದವರನ್ನು ಸಾಕುವುದಕ್ಕೋಸ್ಕರ ಎಲ್ಲ ರೈತರನ್ನೂ ಕೂಡ ಶೋಷಣೆ ಮಾಡಿ ಎಂದು ಹೇಳುವುದಕ್ಕೆ ನಾನು ಹೋಗು ವುದಿಲ್ಲ. ಇಷ್ಟೊಂದು ಕಿರುಕುಳ, ಇಷ್ಟೊಂದು ಲೂಟಿ ಆದಮೇಲೆ ಬೆಂಗಳೂರು, ಮಂಗಳೂರು, ಕೆ. ಜಿ, ಎಫ್. ಮೈಸೂರು ಹುಬ್ಬಳ್ಳಿ ಇಷ್ಟು ಕಡೆಗೆ ಮಾತ್ರ ಶಾಸ್ತ್ರಕ್ಕೆ ಅಕ್ಕಿಯನ್ನು ಹಂಚುತ್ತಿದ್ದೀರಿ. ಪಟ್ಟಣದಲ್ಲಿ ದುಡ್ಡು ಕೊಟ್ಟರೆ ಅಕ್ಕಿ ಸಿಕ್ಕುತ್ತದೆ, ರಾಗಿ ಸಿಕ್ಕುತ್ತದೆ ಏನು ಬೇಕಾದರೂ ಸಿಕ್ಕುತ್ತದೆ. ಆದರೆ ಅದೇ ಹಳ್ಳಿಯಲ್ಲಿ ಅಕ್ಕಿಯೂ ಸಿಕ್ಕುವುದಿಲ್ಲ, ರಾಗಿಯೂ ಸಿಕ್ಕುವುದಿಲ ಇಂಥಾದ್ದರಲ್ಲಿ ಅವರು ಹೇಗೆ ಜೀವನ ಮಾಡುತ್ತಾರೆ ಎಂಬುದು ಒಂದು ಸಮಸ್ಯೆಯಾಗಿದೆ. ನಾನೂ ಕೂಡ ಒಂದಾನೊಂದು ಕಾಲದಲ್ಲಿ ಹಳ್ಳಿಗನೇ ಆಗಿದ್ದೆ, ಆದುದರಿಂದ ನನಗೆ ಹಳ್ಳಿಯ ಪರಿಸ್ಥಿತಿ ಗೊತ್ತಿದೆ. ಇಂಥ ಶೋಷಣೆಗಳು ನಡೆಯು ತ್ತಿರುವುದನ್ನು ತೀವ್ರವಾಗಿ ಪರಿಶೀಲನೆ ಮಾಡಿ ನಾಗರೀಕರಿಗೆ ಮತ್ತು ರೈತರಿಗೆ ಸರಿಹೋಗತಕ್ಕ ರೀತಿಯಲ್ಲಿ ಯಾವುದಾದರೊಂದು ಕ್ರಮವನ್ನು ತೆಗೆದುಕೊಳ್ಳಬೇಕು, ಇಲ್ಲದೇ ಹೋದ ಪಕ್ಷದಲ್ಲಿ ಈ ರೀತಿ ಬಹಳ ಕಾಲ ನಡೆಯುವುದಕ್ಕೆ ಆಗುವುದಿಲ್ಲವೆಂದು ಹೇಳಬಯಸುತ್ತೇನೆ ಈ ವರ್ಷ ಅಕ್ಕಿ ಬೆಲೆ ಮೂರೂವರೆ ರೂಪಾಯಿ ಇಳಿವುದು ಬರುಬರುತ್ತಾ ೫ ರೂಪಾಯಿ ೬ ರೂಪಾಯಿಗೆ ಏರುತ್ತಾ ಹೋಗುತ್ತದೆಯೇ ಹೊರತು ಯಾವತ್ತೂ ಕೂಡ ಬೆಲೆ ಕಡಿಮೆಯಾಗುವುದಿಲ್ಲ ಈಗ ಇರತಕ್ಕ ಬೆಲೆಯನ್ನು ನೋಡಿದರೆ ದಿನೇ ದಿನೇ ಗಗನಕ್ಕೆ ಹೋಗುತ್ತಿದೆ, ಇದರಿಂದ ಬಡವರು ಬದುಕುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ತಾವು ತೀವ್ರವಾಗಿ ಗಮನಕೊಟ್ಟು ರೈತರಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು. ಹಾಗೆ ತಾವು ನೋಡಿ ಕೊಳ್ಳದೇ ಹೋದ ಪಕ್ಷದಲ್ಲಿ ಜನರಿಗೆ ನೀವು ಉಪಕಾರ ಮಾಡುತ್ತೀರೆಂದು ಖಂಡಿತವಾಗಿ ಹೇಳು ವುದಕ್ಕಾಗುವುದಿಲ್ಲ. ಸರ್ಕಾರದವರು ಭತ್ತವನ್ನು ಕೊಂಡುಕೊಂಡು ಶೇಖರಣೆ ಮಾಡಿ ಅದನ್ನು ಮಿಲ್ ಮಾಡಿಸುವಾಗ ಅನೇಕ ಕಡೆ ಲೋಪದೋಷಗಳಿರುತ್ತವೆ. ಸ್ಟೋರೇಜ್ ಸರಿಯಲ್ಲ ಅಲ್ಲಿ ಇಲಿಗಳು, ಹೆಗ್ಗಣಗಳು ತಿಂದು ಹಾಕುತ್ತದೆ ಅದರ ಜೊತೆಗೆ ೨ ಕಾಲಿನ ಹೆಗ್ಗಣಗಳೂ ಸೇರಿಕೊಂಡು ತಿಂದು ಹಾಕಿ ಹೆಚ್ಚಿನ ರೀತಿಯಲ್ಲಿ ಲಾಸ್ ತೋರಿಸುತ್ತವೆ. ಭತ್ತವನ್ನು ಕೊಂಡುಕೊಳ್ಳುವಾಗ, ಹೆಚ್ಚಿನ ನಷ್ಟವಾಗುತ್ತದೆ ಅಲ್ಲದೆ ಪ್ರೊಕ್ಯೂರ್ ಮಾಡುವಾಗ, ಸ್ಟೋರ್ ಮಾಡುವಾಗ, ಮಿಲ್ ಮಾಡುವಾಗ ಏನೇನು ಲೋಪ

ದೋಷಗಳಿವೆ ಎಂಬುದನ್ನು ಯೋಚನೆ ಮಾಡಿ. ನಿಮಗೆ ಆಗತಕ್ಕಂಥ ಓವರ್ ಹೆಡ್ ಛಾರ್ಜಸ್ ೨೫ ರೂಪಾಯಿ ಆಗುವುದಕ್ಕೆ ಸಾಧ್ಯವಿಲ್ಲ, ಇದನ್ನು ಆದಷ್ಟೂ ಕಡಿಮೆ ಮಾಡಬೇಕು. ನಿಮಗೆ ಓವರ್ ಹೆಡ್ ಛಾರ್ಜಸ್ ೧೨ ರೂಪಾಯಿಗಿಂತ ಹೆಚ್ಚಿಗೆ ಒಂದು ಕ್ವಿಂಟಾಲ್‌ಗೆ ಆಗುವುದಿಲ್ಲವೆಂದು ಖಚಿತವಾಗಿ ಹೇಳಬಹುದು. ನೀವು ಭತ್ತವನ್ನು ಕೊಂಡುಕೊಂಡು ಅಕ್ಕಿಯನ್ನು ಮಾಡಿಸಿದರೆ ೧೨-೧೩ ರೂಪಾಯಿಗಿಂತ ಹೆಚ್ಚಿಗೆ ಆಗುವುದಕ್ಕೆ ಸಾಧ್ಯವೇ ಇಲ್ಲ. ಈಗ ೨೦-೨೫ ರೂಪಾಯಿ ಆಗತಕ್ಕ ಓವರ್ ಹೆಡ್ ಛಾರ್ಜಸನ್ನು ತಾವು ಹೆಚ್ಚಿನ ರೀತಿಯಲ್ಲಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಚಾರವನ್ನು ಸರ್ಕಾರದವರು ಯೋಚನೆ ಮಾಡಬೇಕು. ಅದೇನೆಂದರೆ ಲೆವಿಯನ್ನು ಕಲೆಕ್ಟ್ ಮಾಡಿ ರೈತನಿಗೆ ತೊಂದರೆ ಕೊಡುವುದಕ್ಕೆ ಬದಲು ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟನ್ನು ಕಂಪ್ಲೀಟ್ ಆಗಿ ತೆಗೆದು ಬಾರ್ಡರ್‌ನಲ್ಲಿ ಭದ್ರಮಾಡಿ, ವರ್ತಕರ ಮೇಲೆ ಸರಿಯಾದಂಥ ಹಿಡಿತವನ್ನು ಇಟ್ಟುಕೊಂಡು, ಸರಿಯಾದ ಬೆಲೆಗೆ ಮಾರುವುದಕ್ಕೆ ಸಾಧ್ಯ ಇದೆಯೋ ಎಂಬುದನ್ನು ನೋಡಬೇಕು. ನೀವು ಬಳಕೆದಾರನಿಗೆ ಕೊಡತಕ್ಕ ಅಕ್ಕಿ ಮೂರನೇ ಒಂದು ಭಾಗ ಅದು ಅವನಿಗೆ ಸಾಕಾಗುವುದಿಲ್ಲ, ಇನ್ನೂ ಅವನು ಮೂರನೇ ಎರಡು ಭಾಗ ಅಕ್ಕಿಯನ್ನು ಹೊರಗಡೆಯಿಂದ ಕೊಂಡುಕೊಳ್ಳಬೇಕಾಗುತ್ತದೆ. ಸಿಟಿಯಲ್ಲಿ ಪೂರ್ಣವಾಗಿ ರೇಷನಿಂಗ್ ಪದ್ಧತಿ ಇಲ್ಲ, ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ಇರುವುದರಿಂದ ಓಪನ್ ಮಾರ್ಕೆಟ್‌ನಲ್ಲಿ ಹೆಚ್ಚಿನ ಆಹಾರಧಾನ್ಯವನ್ನು ತೆಗೆದುಕೊಳ್ಳಬೇಕಾಗಿದೆ ಆದುದರಿಂದ ಈ ಬಗ್ಗೆ ಯಾರಾದರೂ ಪರಿಣತರನ್ನೋ ಅಥವಾ ಅನುಭವ ಇರುವವರನ್ನೋ ಬರಮಾಡಿಕೊಂಡು ಅವರೊಡನೆ ಸಮಾಲೋಚನೆ ಮಾಡಿ ಯಾವುದಾದರೂ ಒಂದು ನಿರ್ಧಾರಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಈಗ ರೇಷನ್ ಷಾಪ್‌ಗಳಲ್ಲಿ ಕೊಡತಕ್ಕ ಅಕ್ಕಿಯನ್ನು ನಿಜವಾಗಿಯೂ ಕೂಡ ಹಿಂದಿನ ಕಾಲದಲ್ಲಿ ಆನೆಗಳಿಗೂ ಸಹ ಹಾಕುತ್ತಿದ್ದರೋ ಏನೋ ಗೊತ್ತಿಲ್ಲ, ಆ ರೀತಿಯಲ್ಲಿ ಈ ಅಕ್ಕಿ ಇದೆ. ಅದರಲ್ಲಿ ಭತ್ತ ಬೇಕಾದಷ್ಟು ಇರುತ್ತದೆ, ಅದರ ಜೊತೆಗೆ ಕಲ್ಲೂ ಕೂಡ ಇರುತ್ತದೆ. ಬಹುಶಃ ತೂಕ ಬರಲಿ ಎಂದು ಸೇರಿಸಿ ಕೊಡುತ್ತಾರೋ ಏನೋ ಗೊತ್ತಿಲ್ಲ. ಒಮ್ಮೆ ಆ ಅಕ್ಕಿಯನ್ನು ಮಿಲ್ ಮಾಡಿಸಿ ಜರಡಿ ಹಿಡಿದಾಗ ಸ್ಯಾಂಪಲ್‌ಗಾಗಿ ಅದನ್ನು ಸ್ವಲ್ಪ ತಂದಿದ್ದೆ. ಕಲ್ಲು, ಭತ್ತ ಇರತಕ್ಕಂಥ ಅಕ್ಕಿಯನ್ನು ಮನುಷ್ಯ ಉಪಯೋಗಿಸಿದರೆ ಅವನಿಗೆ ಬಹಳ ಕಷ್ಟವಾಗುತ್ತದೆ. ನೀವು ಲೆವಿಯಿಂದ ತೆಗೆದುಕೊಂಡು ಬಂದ ಭತ್ತದಲ್ಲಿ ಅಕ್ಕಿಯನ್ನು ಮಾಡಿಸಿ ಒಂದು ಕೆ.ಜಿ.ಗೆ ೧.೬೫ ಅಥವಾ ೧.೮೦ ಪೈಸೆಗೆ ಕೊಡಬಹುದು. ಆದರೆ, ಅದನ್ನು ಸರಿಯಾಗಿ ಉಪಯೋಗಿಸಲು ಹೋದರೆ ಅದಕ್ಕೆ ಖರ್ಚು ಜಾಸ್ತಿ ಬೀಳುತ್ತದೆ ಅದನ್ನು ಒಪ್ಪ ಕೂಡ ಮಾಡಿ ಒದಗಿಸುತ್ತಿಲ್ಲ. ಈ ರೇಷನ್ ಅಕ್ಕಿಯನ್ನು ತೆಗೆದುಕೊಂಡು ಬಂದು ಒಪ್ಪ ಮಾಡಿದರೆ ಅದರಲ್ಲಿ ಮೂರನೇ ಒಂದು ಭಾಗ ಹೋಗುತ್ತದೆ. ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ ನೀವು ಇಷ್ಟು ಕಡಿಮೆ ಬೆಲೆಗೆ ಅಕ್ಕಿಯನ್ನು ಕೊಡುತ್ತಿದ್ದರೂ ಕೂಡ ಕನ್‌ಸ್ಯೂಮರ್ಸ್‌ಗೆ ಬಹಳ ತೊಂದರೆಯಾಗುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ನಾನು ಹೇಳತಕ್ಕಂಥಾದ್ದು ಏನೆಂದರೆ ಹೊರಗಡೆ ಐದು ಪೈಸೆ-ಹತ್ತು ಪೈಸೆ ಜಾಸ್ತಿ ಕೊಟ್ಟರೂ ಪರವಾ ಇಲ್ಲ, ಈ ಅಕ್ಕಿಯನ್ನು ಮಾತ್ರ ತಂದು ಒಪ್ಪ ಮಾಡುವುದಕ್ಕಾಗುವುದಿಲ್ಲ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಉತ್ತಮವಾದ ಅಕ್ಕಿಯನ್ನು ಕೊಡುವುದಕ್ಕೆ ತಮಗೆ ಶಕ್ಯ ಇದೆಯೋ ಎಂಬುದನ್ನು ನೋಡಿಕೊಳ್ಳಿ. ಮನುಷ್ಯನಿಗೆ ಅಕ್ಕಿ ಸಿಕ್ಕದೆ ಕಷ್ಟ ಬಂದಿರಬಹುದು. ಆದರೆ ದನಗಳು ತಿನ್ನುವಂತಹ ಬೂಸಾಕ್ಕೂ ಕೂಡ ಇವತ್ತು ಕಷ್ಟ ಬಂದಿದೆ. ಮೊದಲು ೧೩ ರೂಪಾಯಿಗೆ ಸಿಕ್ಕುತ್ತಿದ್ದ ಬೂಸಾ ಇವತ್ತಿನ ದಿವಸ ೫೫-೫೬ ರೂಪಾಯಿ ಆಗಿದೆ. ಜನಗಳು ತಿನ್ನುವ ಅಕ್ಕಿಗೆ ಬೆಲೆ ಏನೋ ಏರಿದೆ ಅಂದರೆ ದನಗಳಿಗೆ ಹಾಕತಕ್ಕ ಬೂಸಾ ಬೆಲೆ ಯದ್ವಾ ತದ್ವಾ ಏರಿದೆ. ಈ ರೇಟನ್ನು ನೋಡಿದರೆ ಹಸುಗಳನ್ನು ಇಟ್ಟುಕೊಂಡು ಹಾಲು ಮಾರುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ ಹಸುಗಳನ್ನು ಇಟ್ಟುಕೊಂಡಿರುವವರನ್ನು ಯಾರನ್ನೂ ನೋಡಿದರೂ ಕೂಡ ನಾವು ಹಸುಗಳನ್ನು ಮಾರಿಬಿಡುತ್ತೇವೆಂದು ಹೇಳುತ್ತಾರೆ. ಹಾಲು ಮಾರುವವರು ಹಾಲಿಗೆ ನೀರು ಸೇರಿಸಿ ಕೊಡುತ್ತಾರೆ. ಡೈರಿಯವರೂ ಕೂಡ ಹಾಲಿನ ಬೆಲೆಯನ್ನು ಏರಿಸಿದ್ದಾರೆ.

ಶ್ರೀ ಎಸ್. ಹಮೀದ್ ಷಾ.—ಬೂಸಾ ಬೆಲೆ ಜಾಸ್ತಿಯಾಗಿದೆ ಎಂದು ಹೇಳುತ್ತೀರಿ, ಒಂದು ಮೂಟೆಗೆ ಎಷ್ಟು ಜಾಸ್ತಿಯಾಗಿದೆ ಸ್ವಾಮಿ ?

ಶ್ರೀ ಟಿ. ಆರ್. ಶಾಮಣ್ಣ.—ಅದರಲ್ಲಿ ಬೇರೆ ಬೇರೆ ತೂಕದ ಮೂಟೆಗಳಿರುತ್ತವೆ. ೫೦ ಕೆ.ಜಿ. ಮೂಟೆ ಕೂಡ ಇದೆ. ಈ ಬೂಸಾ ಬೆಲೆ ವಿಪರೀತವಾಗಿ ಏರಿರುವುದರಿಂದ ಹಾಲು ಮಾರುವವರು ಹಾಲಿನ ವ್ಯಾಪಾರವನ್ನೇ ಬಿಡುವ ಹಂತಕ್ಕೆ ಬಂದಿದ್ದಾರೆ ಹಾಲಿನ ಬೆಲೆಯ ಮೇಲೆ ಹೆಚ್ಚಿನ ಪರಿಣಾಮವಾಗುತ್ತಿರುವುದರಿಂದ ಅದನ್ನೂ ಕೂಡ ತಾವು ಯೋಚನೆ ಮಾಡಬೇಕು, ಅನೇಕ ಸಂದರ್ಭಗಳಲ್ಲಿ ಈ

ಅಕ್ಕಿಯ ಬೆಲೆ ಏರುವುದಕ್ಕೆ ಕಾರಣ ಏನೆಂದರೆ ನಮ್ಮ ನೆರೆ ರಾಜ್ಯಗಳಿಗೆ ಈ ಅಕ್ಕಿ ಕಳ್ಳ ಸಾಗಾಣಿಕೆಯಲ್ಲಿ ಹೋಗುತ್ತಿರುವುದೇ ಆಗಿದೆ. ಉದಾಹರಣೆಗೆ ಒಂದು ಲಾರಿ ಅಕ್ಕಿಯನ್ನು ಬಾರ್ಡರ್‌ನಿಂದ ಆಚೆಗೆ ದಾಟಿಸಿದರೆ ೨ ಸಾವಿರ ರೂಪಾಯಿ ಕೊಡುತ್ತಾರೆ. ಅದರಲ್ಲಿ ಅರ್ಧ ಖರ್ಚಾದರೂ ಕೂಡ ಒಂದು ಲಾರಿಗೆ ಒಂದು ಸಾವಿರ ರೂಪಾಯಿ ಬರುತ್ತದೆ. ಅನೇಕರು ಹೆಚ್ಚಿನ ಲಾಭವನ್ನು ಪಡೆಯುವ ಉದ್ದೇಶದಿಂದ ಈ ಕಳ್ಳ ಸಾಗಾಣಿಕೆ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ. ಒಂದು ಕಡೆ ಕೇರಳ, ಇನ್ನೊಂದು ಕಡೆ ತಮಿಳ್ನಾಡು ಮತ್ತೊಂದು ಕಡೆ ಮಹಾರಾಷ್ಟ್ರಕ್ಕೆ ದಿನೇ ದಿನೇ ಹೆಚ್ಚು ಹೆಚ್ಚು ಅಕ್ಕಿ ಹೋಗುತ್ತಿದೆ. ನಮ್ಮಲ್ಲಿ ೩ ರೂಪಾಯಿ ಚಿಲ್ಲರೆ ಇದ್ದರೆ ಮದ್ರಾಸ್‌ನಲ್ಲಿ ೬ ರೂಪಾಯಿ ಚಿಲ್ಲರೆ ಇರುತ್ತದೆ. ಒಳ್ಳೆಯ ಬೆಲೆ ಸಿಕ್ಕುತ್ತಿರುವುದರಿಂದ ಪೋಲೀಸರನ್ನು ಸರಿಮಾಡಿಕೊಂಡು ಕಳ್ಳಸಾಗಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತಾರೆ. ಇದು ಏನಾಗಿದೆ ಎಂದರೆ "ಕುರಿ ಕಾಯುತ್ತೀಯ ತೋಳ ಎಂದರೆ ಸಂಬಳ ಇಲ್ಲದೇ ಕಾಯುತ್ತೇನೆ" ಎಂದು ಹೇಳಿದಂತೆ ಆ ರೀತಿಯ ಜನರಿದ್ದಾರೆ. ಅವರು ಚೆನ್ನಾಗಿ ಜಮೀನನ್ನು ಸಂಪಾದನೆ ಮಾಡುತ್ತಾರೆ, ಕೆಲಸವನ್ನು ಬಿಟ್ಟರೂ ಕೂಡ ಜೀವನ ಮಾಡುತ್ತೇವೆಂಬ ಧೈರ್ಯ ಇರುತ್ತದೆ. ಅವರಿಗೆ ಸಂಬಳಕ್ಕಿಂತ ಹೆಚ್ಚಿಗೆ ಬೇರೆ ರೀತಿಯಲ್ಲಿ ವರಮಾನ ಬರುತ್ತಾ ಇರುವುದರಿಂದ ಅನೇಕ ರೀತಿಯಲ್ಲಿ ಈ ಬೆಲೆಗಳು ಹೆಚ್ಚಾಗುವುದಕ್ಕೆ ಮುಖ್ಯ ಕಾರಣವಾಗಿದೆ. ಆದುದರಿಂದ ಬಾಕಿ ರಾಜ್ಯಗಳಿಗೆ ಹೋಗುತ್ತಿರುವ ಅಕ್ಕಿ ಕಳ್ಳಸಾಗಾಣಿಕೆಯನ್ನು ತಪ್ಪಿಸುವವರೆಗೂ ಈ ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಪೋಲಿಸ್ ಸಬ್ ಇನ್‌ಸ್ಪೆಕ್ಟರ್‌ಗೆ ಇಷ್ಟು, ಕಾನ್‌ಸ್ಟೇಬಲ್‌ಗೆ ಇಷ್ಟು, ಸ್ಟೇಷನ್‌ಗೆ ಇಷ್ಟು ಎಂದು ಮಾಮೂಲು ಆಗಿದೆ. ಅದರ ಪ್ರಕಾರ ನಡೆಯುತ್ತಿದೆ. ದುಡ್ಡು ಕೊಟ್ಟರೆ ಏನು ಬೇಕಾದರೂ ಮಾಡುವುದಕ್ಕೆ ಸಾಧ್ಯವಿದೆ ಎಂದು ತಿಳಿದುಕೊಂಡಿದ್ದಾರೆ. ಮತ್ತೆ ಕೆಲವು ಕಡೆಗಳಲ್ಲಿ ತೌಡು ಎಂದು ತೋರಿಸಿ ಚೀಲದ ಸುತ್ತಲೂ ೨ ಲೇಯರ್ ತೌಡು ಹಾಕಿ ಒಳಗಡೆ ಅಕ್ಕಿಯನ್ನು ತುಂಬಿ ತೆಗೆದುಕೊಂಡು ಹೋಗತಕ್ಕಂತ ಸಂದರ್ಭಗಳೂ ಇವೆ. ಹೀಗೆ ನಾನಾ ರೀತಿಯಾದಂಥ ಉಪಾಯಗಳನ್ನು ಅನುಸರಿಸಿ ಪೋಲೀಸರು ಮತ್ತು ಆಹಾರ ಇಲಾಖೆಯವರನ್ನೂ ಕೈಯೊಳಗೆ ಹಾಕಿಕೊಂಡು ಕಳ್ಳ ಸಾಗಾಣಿಕೆ ವ್ಯಾಪಾರವನ್ನು ನಡೆಸುತ್ತಿದ್ದಾರೆ. ಕಳ್ಳಸಾಗಾಣಿಕೆ ವ್ಯಾಪಾರವನ್ನು ಮಾಡುತ್ತಿದ್ದ ಕೆಲವರನ್ನು ಹಿಡಿದಿದ್ದೇವೆಂದು ಹೇಳುತ್ತೀರಿ, ಮುಖ್ಯಸ್ಥರನ್ನು ಹಿಡಿದಿದ್ದರೂ ಕೂಡ ಇನ್ನೂ ಕಳ್ಳ ಸಾಗಾಣಿಕೆ ಆಗುತ್ತಲೇ ಇದೆ. ಆದುದರಿಂದ ನಾನು ಹೇಳುವುದೇನೆಂದರೆ, ನೀವು ಎಲ್ಲಿಯತನಕ ಇದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಲಂಚರುಷುವತ್ತುಗಳನ್ನು ನಿಲ್ಲಿಸಿ ಕಳ್ಳ ವ್ಯಾಪಾರವನ್ನು ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೂ ಈ ಏರುತ್ತಿರುವ ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದುಕೊಂಡಿದ್ದೇವೆ. ಬೆಂಗಳೂರಿನಲ್ಲಿ ರೇಷನ್ ಡಿಪೋಗಳಿವೆ, ಕೆಲವು ಡಿಪೋಗಳಿಗೆ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಅಕ್ಕಿಯನ್ನು ಕೊಡುತ್ತಾರೆ. ಸಕ್ಕರೆ ಮುಂತಾದುವುಗಳನ್ನು ಹಳ್ಳಿಗಳಲ್ಲಿ ಸ್ಟೋರ್ಸ್ ಮುಖಾಂತರ ಕೊಡುತ್ತಾರೆ. ಸಕ್ಕರೆ, ಅಕ್ಕಿ ಇವುಗಳನ್ನು ಕೊಳ್ಳಲು ಬೇಕಾದಷ್ಟು ದುಡ್ಡನ್ನು ಕೊಡಬೇಕಾಗುತ್ತದೆ. ಹೋಲ್‌ಸೇಲರ್ಸ್ ಹತ್ತಿರ ಕೆಲವು ಸಂದರ್ಭಗಳಲ್ಲಿ ದುಡ್ಡು ಇರುವುದಿಲ್ಲ. ಆದಕ್ಕೋಸ್ಕರ ಅವರು ಅನೇಕ ಸಂದರ್ಭದಲ್ಲಿ ಲಿಫ್ಟ್ ಮಾಡುವುದಕ್ಕೆ ಪರ್ಮಿಶನ್ ಕೊಟ್ಟರೂ ದುಡ್ಡಿಲ್ಲದ ಕಾರಣ ಲಿಫ್ಟ್ ಮಾಡುವುದಕ್ಕಾಗುವುದಿಲ್ಲ. ಹಾಗೆಯೇ ರೇಷನ್ ಡಿಪೋಗಳಲ್ಲಿ ದುಡ್ಡು ಇದ್ದಾಗ ಸಾಮಾನುಗಳು ಇರುವುದಿಲ್ಲ. ಸಾಮಾನುಗಳು ರೇಷನ್ ಡಿಪೋಗಳಿಗೆ ಬಂದಾಗ ದುಡ್ಡು ಇರುವುದಿಲ್ಲ. ಆದ್ದರಿಂದ ಅನೇಕ ರೇಷನ್ ಡಿಪೋಗಳಲ್ಲಿ ಒಂದು ಸಾರಿ ಸಕ್ಕರೆನೇ ಇರುವುದಿಲ್ಲ ಮತ್ತೊಂದು ಕಡೆ ಅಕ್ಕಿನೇ ಇರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ರೇಷನ್ ಡಿಪೋಗಳು ಸರಿಯಾದ ಕಾಲದಲ್ಲಿ ಸಾಮಾನುಗಳು ಸಿಗುವ ಹಾಗೆ ಮಾಡಬೇಕು. ಹೋಲ್ ಸೇಲರ್ಸ್ ಲಿಫ್ಟ್ ಮಾಡಬೇಕಾದರೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು. ಅಕ್ಕಿ, ಸಕ್ಕರೆ ಬಡವರಿಗೆ ಯಾವ ತೊಡಕು ಇಲ್ಲದ ಹಾಗೆ ರೇಷನ್ ಡಿಪೋಗಳಲ್ಲಿ ದೊರಕುವಂತೆ ರೇಷನ್ ಡಿಪೋಗಳಿಗೆ, ರೇಷನ್ ಒದಗಿಸುವುದಕ್ಕೆ ಸರಿಯಾದ ಕ್ರಮ ಹಾಕಿಕೊಂಡರೆ ಉತ್ತಮವೆಂದೆನಿಸುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಸಕ್ಕರೆ ಬಗ್ಗೆ ಹೇಳುವುದಾದರೆ ಬೆಂಗಳೂರು ನಗರದಲ್ಲಿ ಮಂಡಿಪೇಟೆಗೆ ಹೋಗಿ ಕೇಳಿದರೆ ಬಿಲ್ ಕೊಟ್ಟರೆ ಒಂದು ರೇಟ್ ಹಾಕುತ್ತಾರೆ ಬಿಲ್ ಇಲ್ಲದೆ ತೆಗೆದುಕೊಂಡರು ಮತ್ತೊಂದು ರೇಟಿಗೆ ಕೊಡುತ್ತಾರೆ. ಬಿಲ್ ರೇಟ್ ಎಂದರೆ ೩ ೭೫ ಪೈಸೆ ಹೇಳುತ್ತಾರೆ. ಬಿಲ್ ಇಲ್ಲದೆ ಕೊಡುವುದಾದರೆ ೩-೨೫ ಪೈಸೆ ಇಂದ ೩-೭೫ ಪೈಸೆವರೆಗೆ ಹೇಳುತ್ತಾರೆ. ಇದು ಏತಕ್ಕೆಂದರೆ ರೇಷನ್ ಡಿಪೋದಿಂದ ಬಂದ ಸಕ್ಕರೆ, ಇದಕ್ಕೆ ಬಿಲ್ ಕೊಡುವುದಕ್ಕಾಗುವುದಿಲ್ಲ. ಬಿಲ್ ಬೇಕಾದರೆ ಬೇರೆ ಸಕ್ಕರೆ ಕೊಡುತ್ತೇವೆಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ೨ ಲಕ್ಷ ೩ ಲಕ್ಷ ಜನರಷ್ಟು ಸ್ಲಮ್ ಏರಿಯಾದಲ್ಲಿ ಬಡವರೇ ಇದ್ದಾರೆ. ಅವರ ಮನೆಯಲ್ಲಿ ಅಷ್ಟಾಗಿ ಸಕ್ಕರೆಯನ್ನು ಉಪಯೋಗಿಸುವುದಿಲ್ಲ. ಸಕ್ಕರೆ ಹೀಗೆ ಉಪಯೋಗಿಸದೆ ಇರುವುದರಿಂದ ಹೆಚ್ಚಿನ ಸಕ್ಕರೆ ರೇಷನ್ ಡಿಪೋಗಳಲ್ಲಿ ಉಳಿತಾಯವಾಗುತ್ತದೆ. ತಮಿಳುನಾಡಿನಲ್ಲಿ ಇನ್‌ಕಂ ಪ್ರಕಾರ ಸಕ್ಕರೆಯನ್ನು ಕೊಡತಕ್ಕ ಅಭಿಪ್ರಾಯ

ವನ್ನು ಇಟ್ಟುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ಸಲಹೆ ಮಾಡುವುದು ಇಷ್ಟೇ, ಗಂಡಿಸಲುಂಗಳಲ್ಲಿ ವಾಸಮಾಡತಕ್ಕವರಿಗೆ ಎಷ್ಟು ಸಕ್ಕರೆಯನ್ನು ಉಪಯೋಗಿಸುತ್ತಾರೋ ಅಷ್ಟು ಸಕ್ಕರೆಯನ್ನು ಕೊಟ್ಟು, ಉಳಿದಷ್ಟು ಸಕ್ಕರೆಯ ಬದಲಾಗಿ ಬೇರೆ ರೇಷನ್ ಅಂದರೆ ಅಕ್ಕಿಯನ್ನೋ, ವಿಲೋ, ಅಥವಾ ಜೋಳವನ್ನು ಕೊಟ್ಟರೆ ಅವರಿಂದ ಅವರಿಗೆ ಹೆಚ್ಚು ಉಪಯೋಗವಾಗುವುದಲ್ಲದೆ ರೇಷನ್ ಡಿಪೋಗಳಿಂದ ಕೊಂಡಂತ ಸಕ್ಕರೆಯನ್ನು ಹೊಟೆಲ್‌ಗಳಿಗೆ, ಮತ್ತು ಕಾಕಾ ಅಂಗಡಿಗಳಿಗೆ ಮಾರಾಟಮಾಡುವುದೂ ಕೂಡ ಕಡಿಮೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸಕ್ಕರೆ ಮೂರು ವರ್ಷದ ಕೆಳಗೆ ಸುಮಾರು ೧-೭೫ ಪೈಸೆ ಇತ್ತು, ಅದು ೨ ರೂಪಾಯಿ ಆಯಿತು. ಎರಡು ರೂಪಾಯಿ ಹತ್ತು ಪೈಸೆವರೆಗೆ ಏರಿದೆ. ಹೀಗೆ ಏರುತ್ತಿರುವುದನ್ನು ನೋಡಿದರೆ ಇದು ಕೇಂದ್ರ ಸರ್ಕಾರದ ನೀತಿಯೋ ಏನೋ ಗೊತ್ತಾಗುವುದಿಲ್ಲ. ಯಾವ ರೀತಿ ವ್ಯವಹಾರ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಸಕ್ಕರೆಯ ಬೆಲೆ ಹೀಗೆ ಏರಿಕೊಂಡೆ ಬರುತ್ತಿದೆ. ಇದು ಕೇಂದ್ರ ಸರ್ಕಾರದ ನೀತಿಯಾಗಿರುವುದರಿಂದ ಇದಕ್ಕೆ ರಾಜ್ಯಸರ್ಕಾರ ಹೊಣೆಯಲ್ಲ. ಆದ ರಿಂದ ಫುಡ್ ಮಿನಿಸ್ಟರು ಕಾನ್‌ಫರೆನ್ಸ್‌ಗೆ ಹೋದಾಗ ಸಕ್ಕರೆ ಬೆಲೆ ಈ ರೀತಿ ಏರುತ್ತಿರುವುದರ ಬಗ್ಗೆ ಸ್ವಲ್ಪ ಚರ್ಚೆ ಮಾಡುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರ ತಪ್ಪು ಮುಖಾಂತರ ಹೇಳ ಬಯಸುತ್ತೇನೆ. ಬೆಂಗಳೂರು ನಗರದ ಪ್ರಜಾಸಂಖ್ಯೆಯನ್ನು ಸೆನ್‌ಸಸ್ ಪ್ರಕಾರ ತೆಗೆದುಕೊಂಡಲೆ ೧೫ ಲಕ್ಷ ಚಿಲ್ಲರೆ ಬರುತ್ತದೆ. ಅದೇ ರೇಷನ್ ಕಾರ್ಡ್ ಹೋಲ್ಡರ್ಸ್‌ನಲ್ಲಿರತಕ್ಕ ಪ್ರಜಾಸಂಖ್ಯೆಯನ್ನು ತೆಗೆದು ಕೊಂಡರೆ ೧೫ ಲಕ್ಷ ಚಿಲ್ಲರೆ ಬರುತ್ತದೆ. ಅದೇ ರೇಷನ್ ಕಾರ್ಡ್ ಹೋಲ್ಡರ್ಸ್‌ನಲ್ಲಿರತಕ್ಕ ಪ್ರಜಾಸಂಖ್ಯೆ ಯನ್ನು ತೆಗೆದುಕೊಂಡರೆ ಕಡೆ ಪಕ್ಷ ೨೨, ೨೩ ಲಕ್ಷ ಚಿಲ್ಲರೆಯಷ್ಟು ಬರುತ್ತದೆ. ರೇಷನ್ ಕಾರ್ಡನ್ನು ಪಡೆಯಲು ಎಂ.ಎಲ್.ಎ.ಗಳಿಂದ ಫುಡ್ ಸರ್ಟಿಫಿಕೇಟ್ ಬೇಕಾಗಿರುವುದರಿಂದ, ಅವರು ನಮ್ಮಲ್ಲಿಗೆ ಬರುತ್ತಾರೆ, ನಾವು ಬರೆದು ಕೊಡಬೇಕಾಗುತ್ತದೆ. ಇದರಿಂದ ಅನೇಕ ಬೋಗಸ್ ರೇಷನ್ ಕಾರ್ಡ್‌ಗಳು ಇರುವುದಕ್ಕೆ ಸಾಧ್ಯ. ಇದಕ್ಕೆ ಮಂತ್ರಿಗಳು ಒಬ್ಬರೇ ಕಾರಣವೆಂದು ಹೇಳುವುದಿಲ್ಲ, ಇದರಲ್ಲಿ ನಾವೂ ಸ್ವಲ್ಪ ಭಾಗಿಯಾಗಿದ್ದೇವೆ. ನಮ್ಮ ಸರ್ಟಿಫಿಕೇಟ್ ಮೇಲೆ ರೇಷನ್ ಕಾರ್ಡ್‌ಗಳನ್ನು ಕೊಡುತ್ತಾರೆ. ಆದ್ದರಿಂದ ಆಹಾರದ ಇಲಾಖೆಯವರು ಸರಿಯಾದ ರೀತಿಯಲ್ಲಿ ಪರಿಶೀಲನೆಮಾಡಿ ಅಕ್ರಮವಾಗಿ ರೇಷನ್ ಕಾರ್ಡ್ ಇಟ್ಟುಕೊಂಡಿರುವುದನ್ನು ತೆಗೆದುಹಾಕುವ ಪ್ರಯತ್ನವನ್ನು ಮಾಡಬೇಕು. ಹಿಂದಿನಿಂದ ಒಂದು ಸಲ ಇದ್ದಕ್ಕಿದ್ದ ಹಾಗೆ ಬೋಗಸ್ ರೇಷನ್ ಕಾರ್ಡುಗಳ ಪತ್ತೆಕಾರ್ಯ ನಡೆಯಿತು. ಅದು ಮತ್ತೆ ಇದ್ದಕ್ಕಿದ್ದ ಹಾಗೆ ನಿಂತುಹೋಯಿತು. ಈ ರೀತಿ ಕಂಡುಹಿಡಿಯುವುದರಿಂದ ಸ್ವಲ್ಪ ಪರಿಸ್ಥಿತಿ ಅನುಕೂಲ ವಾಗಬಹುದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸೀಮೆಎಣ್ಣೆ ವಿಷಯವನ್ನು ತೆಗೆದುಕೊಂಡರೆ, ಕೆಲವು ಕಡೆ ಸಿಕ್ಕುತ್ತದೆ ಕೆಲವು ಕಡೆ ಸಿಕ್ಕುವುದಿಲ್ಲ. ಸೀಮೆಎಣ್ಣೆ ವಿತರಣೆಯಲ್ಲಿ ಆಗಿಂದಾಗ್ಗೆ ತೊಡಕುಗಳು ಇದ್ದೇ ಇರುತ್ತದೆ. ಕಾರಣವೆಂದರೆ ಸರಿಯಾದ ಸಪ್ಲೈ ಇಲ್ಲದ ಕಾರಣ ಅಥವಾ ಯಾವುದೇ ಕಾರಣದಿಂದ ಸೀಮೆಎಣ್ಣೆ ಬರದಿದ್ದರೆ ಡಬ್ಬಗಳನ್ನು ಹಿಡಿದುಕೊಂಡು ಗಂಟೆಗಟ್ಟಲೇ ಸೀಮೆಎಣ್ಣೆಗಾಗಿ ನಿಲ್ಲುವ ಪರಿಸ್ಥಿತಿ ಇದೆ. ಇದ್ದಕ್ಕಿದ್ದ ಹಾಗೆ ಸಪ್ಲೈ ಪೊಜಿಶನ್ ವ್ಯತ್ಯಾಸವಾಗುವುದಕ್ಕೆ ಏನು ಕಾರಣ ಕಂಡುಹಿಡಿದು ಸ್ವಲ್ಪ ಬಫರ್ ಸ್ಟಾಕ್ ಇಟ್ಟುಕೊಂಡು ಸೀಮೆಎಣ್ಣೆ ಅಭಾವವನ್ನು ಪರಿಹರಿಸುವುದಕ್ಕೆ ಸಾಧ್ಯವಿದೆ. ಈ ಸಂಧರ್ಭದಲ್ಲಿ ಒಂದನ್ನು ಯೋಚನೆ ಮಾಡಬೇಕು ಅಭಾವಕಾಲದಲ್ಲೂ ಅನೇಕ ಮನೆಗಳಲ್ಲಿ ಸೀಮೆಎಣ್ಣೆಯನ್ನು ಉಪಯೋಗಿಸುತ್ತಾರೆ. ಅವರು ಇದನ್ನು ಕಡಿಮೆಮಾಡಿ ಕಟ್ಟಿಗೆ ಉಪಯೋಗಿ ಸುವ ಕಡೆ ಲಕ್ಷ್ಯವನ್ನು ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆಎಣ್ಣೆ ಸಿಕ್ಕುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಸೀಮೆಎಣ್ಣೆ ಬೆಲೆಯೂ ಏರುತ್ತಿರುವುದು ಕೂಡ ಕೇಂದ್ರ ಸರ್ಕಾರದ ನೀತಿಯೇ ಆಗಿದೆ. ಒಂದು ವರ್ಷದ ಹಿಂದೆ ಕೇವಲ ೮೫ ಪೈಸೆ ಇದ್ದದ್ದು, ಈ ಇದಕ್ಕಿದ್ದಹಾಗೆ ೧ ರೂಪಾಯಿ ಚಿಲ್ಲರೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಏಳೆಂಟು ತಿಂಗಳಿನಿಂದ ಪೆಟ್ರೋಲಿಯಂ ಸಪ್ಲೈ ಮಾಡತಕ್ಕವರು ರೇಟ್ ಹೆಚ್ಚಿಸಿದಕಾರಣದಿಂದ ಬೆಲೆ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಸರ್ಕಾರದವರು ಇದ್ದಕ್ಕಿದ್ದಹಾಗೆ ಎಕಾನಮಿ ಮೆಷರ್‌ನಿಂದ ವರಮಾನಬರುತ್ತದೆಂದು ಪೆಟ್ರೋಲ್ ಮತ್ತು ಸೀಮೆಎಣ್ಣೆ ಬೆಲೆಯನ್ನು ಏರಿಸಿದ್ದಾರೆ. ಹೀಗೆ ಏರಿಸಿರುವುದರಿಂದ ಜನಗಳು ನಿತ್ಯ ಉಪಯೋಗಿಸತಕ್ಕಂಥ ಸೀಮೆಎಣ್ಣೆಯ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವುದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ. ಇನ್ನು ಸೀಮೆಎಣ್ಣೆ ಮತ್ತು ಸಕ್ಕರೆ ಅಳತೆ ಮಾಡುವ ರೀತಿಯಲ್ಲಿ ಜನಗಳಿಗೆ ಮೋಸವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಸೀಮೆಎಣ್ಣೆ ಅಳತೆ ಮಾಡುವವನು ನೊರೆ ಸಹಿತ ಅಳತೆ ಮಾಡಿಕೊಡುತ್ತಾನೆ. ಅದನ್ನು ತೆಗೆದುಕೊಂಡುಬಂದು ಮನೆಯಲ್ಲಿ ಅಳತೆಮಾಡಿದ ಪಕ್ಷದಲ್ಲಿ ೮ ಲೀಟರ್ ಒಂದು ಭಾಗ ೧೦ ಲೀಟರ್‌ಗೆ ಒಂದು ಭಾಗ ಕಡಿಮೆಯಾಗುತ್ತವೆಂಬ ದೂರುಗಳು ಸಹ ಬಂದಿವೆ.

ಆದ್ದರಿಂದ ಸೀಮೆಎಣ್ಣೆಯ ಅಳತೆಯನ್ನು ಪರಿಶೀಲನೆ ಮಾಡಬೇಕು. ಮಾರಾಟಗಾರರನ್ನು ಕೇಳಿದರೆ ಮೂರು ಕಾಸು ಕೊಡುತ್ತಾರೆ. ಇದರಲ್ಲಿ ಗಾಡಿ, ಎತ್ತು ಎಲ್ಲವನ್ನು ನೋಡಿಕೊಳ್ಳಬೇಕು ಎಂದು ತನ್ನ ಗೋಳನ್ನು ಹೇಳಿಕೊಳ್ಳುತ್ತಾನೆ. ಸಾಮಾನ್ಯ ಬಡಜನತೆ ಕೊಳ್ಳತಕ್ಕ ಒಂದು ಲೀಟರ್ ಎಣ್ಣೆಯಲ್ಲಿ ಸರಿಯಾದ ಅಳತೆ ಸೀಮೆಎಣ್ಣೆ ಸಿಕ್ಕದೆಹೋದ ಪಕ್ಷದಲ್ಲಿ ಅದು ಬಹಳ ಅನ್ಯಾಯವಾಗುತ್ತದೆಂದು ಹೇಳಬೇಕಾಗುತ್ತದೆ. ಆದ್ದರಿಂದ ಸಿವಿಲ್ ಸಪ್ಲೈಯವರು ಈ ವಿಷಯದಲ್ಲಿ ತನಿಖೆ ಮಾಡಿ ಸರಿಯಾದ ರೀತಿಯಲ್ಲಿ ಅಳತೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜನಗಳಿಗೆ ನಿತ್ಯ ಬಳಕೆಗೆ ಬೇಕಾದಂತ ಸೌದೆ, ಅಕ್ಕಿ, ಬಟ್ಟೆ ಮತ್ತಿತರೆ ಸಾಮಾನುಗಳ ಬೆಲೆ ದಿನದಿನಕ್ಕೆ ಏರುತ್ತಾ ಇರುವುದರಿಂದ ಜನ ಬಹಳ ಕಷ್ಟಪಡುತ್ತಿದ್ದಾರೆ. ಜನ ಬಹಳ ತತ್ತರಿಸಿ ಹೋಗಿದ್ದಾರೆ. ಉದಾಹರಣೆಗೆ ಹೇಳುತ್ತೇನೆ ನಮ್ಮ ಮನೆಯಲ್ಲಿ ಎಂಟುಜನರಿದ್ದೇವೆ, ಎಂಟ ಜನರಿರುವ ನಮ್ಮ ಮನೆಗೆ ತಿಂಗಳಿಗೆ ಹಾಲಿಗೇನೇ ೨೪೦ ರೂಪಾಯಿಗಳನ್ನು ಕೊಡುತ್ತೇವೆ. ೮೪೦ ರೂಪಾಯಿ ಸಂಪಾದನೆ ಮಾಡುವ ಮನುಷ್ಯ ಹೇಗೆ ತನ್ನ ಸಂಸಾರವನ್ನು ಮಾಡುತ್ತಾನೆ ಎನ್ನುವ ಪ್ರಶ್ನೆ ಬರುತ್ತದೆ. ೨೪೦ ರೂಪಾಯಿ ಸಂಪಾದನೆ ಮಾಡತಕ್ಕ ಎಂಟುಜನ ಸಂಸಾರ ಇರತಕ್ಕ ಮನುಷ್ಯ ಮನೆಯ ಖರ್ಚಿಗೆ ಏನು ಕೊಡುತ್ತಾನೆ, ಮಕ್ಕಳಿಗೆ ಔಷದಿ ಮತ್ತು ವಿದ್ಯಾಭ್ಯಾಸಕ್ಕೆ ಏನು ಖರ್ಚು ಮಾಡುತ್ತಾನೆ. ಇದನ್ನು ನೋಡಬೇಕು. ಹೆಸರಿಗೆ ಮಾತ್ರ ಡಿ.ಎ. ಮತ್ತು ಸಂಬಳ ಜಾಸ್ತಿಮಾಡಿದ್ದೇವೆಂದು ಹೇಳುತ್ತೀರಾ, ಮಧ್ಯಮ ವರ್ಗದವರು, ಬಡವರು ಕುಸಿದುಹೋಗಿದ್ದಾರೆ. ಬಹಳ ಕಷ್ಟಪಡುತ್ತಿದ್ದಾರೆ. ಅವರಿಗೆ ಹೇಗೆ ಜೀವನ ಮಾಡುವುದು ಎನ್ನುವುದು ಸಮಸ್ಯೆಯಾಗಿ ಕಾಣುತ್ತಿದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡದೆಹೋದರೆ ಹಸಿದ ಮನುಷ್ಯ ಯಾವರೀತಿ ತಿರುಗಿಬೀಳುತ್ತಾನೆ ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಎಚ್ಚರಿಕೆಯಿಂದ ನೋಡಬೇಕು, ಎಲ್ಲಿಯವರೆಗೆ ಮನುಷ್ಯ ಹಸಿದಿರುತ್ತಾನೆ ಅಲ್ಲಿಯವರೆಗೂ ದೇಶ ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ, ಜನಗಳು ಪ್ರಗತಿಯನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ಏನೇ ಕಾರ್ಯಕ್ರಮ ತೆಗೆದುಕೊಂಡರೂ ಜನಗಳು ಹೊಟ್ಟೆಗೆ ಸರಿಯಾಗಿ ಊಟ ಮಾಡಿ, ಸರಿಯಾದ ಬಟ್ಟೆಯನ್ನು ಹಾಕಿಕೊಂಡು ಗುಡಿಸಲಿನಲ್ಲಿ ಯಾದರೂ ಸುಖವಾಗಿ ವಾಸ ಮಾಡುವಂತೆ ಆಗಬೇಕು. ಹೊಟ್ಟೆ, ಬಟ್ಟೆ ಮತ್ತು ಇರುವುದಕ್ಕೆ ಸ್ಥಳ ಇವು ಮೂರು ವಿಚಾರಗಳ ಬಗ್ಗೆ ಸರ್ಕಾರ ಗಮನ ಕೊಡದೆ ಹೋದರೆ, ಬಡವರನ್ನು ಉದ್ಧಾರ ಮಾಡಿ ಸ್ವರ್ಗಕ್ಕೆ ತೆಗೆದುಕೊಂಡು ಹೋಗುತ್ತೇವೆನ್ನುವುದು ಬರೀ ಹೇಳಿಕೆಯಾಗುತ್ತದೆ. ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಂಥ ಸರ್ಕಾರ ಆಹಾರದ ನೀತಿಯನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಜನ ಶಪಿಸತಕ್ಕ ಸಂದರ್ಭ ಬರುತ್ತದೆಂದು ಹೇಳುತ್ತೇನೆ.

ಅಭಾವವಿರತಕ್ಕ ಜಿಲ್ಲೆಗಳಿವೆ. ಅಲ್ಲಿಯೂ ಕೂಡ ಲೆವಿಯನ್ನು ವಸೂಲು ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಇದು ಸರಿಯಲ್ಲ. ರೈತನಿಂದ ೧೦ ಪರ್ಸೆಂಟ್ ತೆಗೆದುಕೊಂಡು, ಸಾಗಾಣಿಕೆ ಮಾಡುವವರಿಂದ ೩೭½ ಪರ್ಸೆಂಟ್ ಒಟ್ಟು ೪೭½ ಪರ್ಸೆಂಟ್ ತೆಗೆದುಕೊಂಡು ಅದರ ಹೊರೆಯನ್ನು ಜನತೆಯ ಮೇಲೆ ಹಾಕುವುದರ ಔಚಿತ್ಯವೇನು ಎಂದು ಯೋಚನೆ ಮಾಡಬೇಕು. ಓಪನ್ ಮಾರ್ಕೆಟ್ ರೇಟಿಗೂ ರೇಷನ್‌ನಲ್ಲಿ ಕೊಡುವ ರೇಟಿಗೆ ಬಹಳ ವ್ಯತ್ಯಾಸವಿದ್ದ ಪಕ್ಷದಲ್ಲಿ ಅನೇಕ ಅಕ್ರಮಗಳು ನಡೆಯುವುದಕ್ಕೆ ಅವಕಾಶ ವಾಗುತ್ತದೆ ಓಪನ್ ಮಾರ್ಕೆಟ್ಟಿನಲ್ಲಿ ಎರಡೂವರೆ ರೂಪಾಯಿ ಪ್ರಕಾರ ಅಕ್ಕಿ ಸಿಕ್ಕುತ್ತಿದ್ದು ರೇಷನ್‌ನಲ್ಲಿ ಎರಡು ರೂಪಾಯಿ ಅಥವಾ ಒಂದೂ ಮುಕ್ಕಾಲು ರೂಪಾಯಿಗೆ ಕೊಡುತ್ತಿದ್ದರೆ ಆವಾಗ ಹೆಚ್ಚು ಕಾಣಿಸುವುದಿಲ್ಲ. ರೇಷನ್‌ನಲ್ಲಿ ಒಂದೂಮುಕ್ಕಾಲು ರೂಪಾಯಿಗೆ ಕೊಡುತ್ತಿದ್ದು ಓಪನ್ ಮಾರ್ಕೆಟ್ಟಿನಲ್ಲಿ ಮೂರೂವರೆ ಮೂರುಮುಕ್ಕಾಲು ರೂಪಾಯಿ ಇದ್ದರೆ ಜನ ಹಿಂದೆ ಮುಂದೆ ನೋಡಬೇಕಾಗುತ್ತದೆ. ಅಕ್ಕಿಯ ಬೆಲೆಯ ಅಕ್ಕಿಯ ಗುಣಮಟ್ಟದ ಬಗ್ಗೆಯೂ ಸ್ವಲ್ಪ ಪರಿಶೀಲನೆ ಮಾಡಬೇಕು. ಇದಕ್ಕೆ ಪರಿಣತರನ್ನು ಮತ್ತು ಅನುಭವವಿರತಕ್ಕ ವರ್ತಕರನ್ನು ಕರೆಸಿ ಯಾವರೀತಿ ಸಮಸ್ಯೆಯನ್ನು ಬಗೆಹರಿಸಿದರೆ ರೈತನಿಗೆ ಹೆಚ್ಚು ತೊಂದರೆಯಾಗದ ಹಾಗೆ ಮತ್ತು ಬಳಕೆದಾರನಿಗೆ ಉಪಕಾರ ಮಾಡುವುದಕ್ಕಾಗುತ್ತದೆ ಎಂದು ಯೋಚನೆ ಮಾಡಬೇಕು.

ಪಟ್ಟಣಗಳಲ್ಲಿರುವ ಜನರಿಗೆ ದುಡ್ಡು ಸಂಪಾದನೆ ಮಾಡುವುದಕ್ಕೆ ಅವಕಾಶಗಳಿದ್ದು ಅವರಿಗೆ ಸ್ವಲ್ಪ ಹೊಟ್ಟೆಗೆ ಆಹಾರವನ್ನೂ ಕೊಡಲಾಗುತ್ತಿದೆ. ಹಳ್ಳಿಗಾಡಿನಲ್ಲಿ ಅನೇಕ ಬಡವರು ಕಷ್ಟಪಡುತ್ತಿದ್ದಾರೆ, ಹೊಲಿಸು ತಿರುಪೆ ಮಾಡಿ ಜೀವನ ಮಾಡಬೇಕಾದ ಪರಿಸ್ಥಿತಿ ಇದೆ. ಹಳ್ಳಿಗಾಡಿನಲ್ಲಿರುವ ನಮ್ಮ ಅಣ್ಣ ತಮ್ಮಂದಿರು ಕಷ್ಟಪಡುತ್ತಿರುವಾಗ ನಾವು ಹೊಟ್ಟೆತುಂಬ ಊಡು ಸುಖವಾಗಿರುವುದು ಒಳ್ಳೆಯದು ಎಂದು ಹೇಳುವುದಿಲ್ಲ. ಅವರ ಬಗ್ಗೆ ಕೂಡ ಪರಿಶೀಲನೆ ನಡೆಯಬೇಕು.

ಕಂಟ್ರೋಲ್ ಬಟ್ಟೆ ಸಾಧಾರಣವಾಗಿ ಕೆಲವು ಸೊಸೈಟಿಗಳಿಗೆ ಕೊಡುತ್ತಾರೆ. ಆ ಬಟ್ಟೆ ಯಾರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಿಲ್ಲ. ಬಟ್ಟೆ ಬಂದ ತಕ್ಷಣ ಎಲ್ಲದಕ್ಕೂ ಬಿಲ್ ಗಳನ್ನು ಹಾಕಿ ವಿಲೇವಾರಿ ಮಾಡಿಬಿಡುತ್ತಾರೆ. ಅದನ್ನು ಬೇರೆ ಕಡೆ ಹೆಚ್ಚು ಬೆಲೆಗೆ ಮಾರತಕ್ಕ ಅವಕಾಶವಿದೆ ಎನ್ನುವುದನ್ನು ಹೇಳುತ್ತೇನೆ. ಪ್ರತಿ ವರ್ಷವೂ ಕೂಡ ಕೇಂದ್ರ ಸರ್ಕಾರದವರು ತೆರಿಗೆಗಳನ್ನು ಹಾಕುವಾಗ ಅವರ ಕಣ್ಣು ಫೈನ್ ಬಟ್ಟೆಯ ಮೇಲೆ ಬೀಳುತ್ತದೆ. ಮತ್ತು ಅದರ ಮೇಲೆಯೇ ಹಾಕಿಕೊಂಡು ಹೋಗುತ್ತಿದ್ದರು. ಈಗ ಒರಟು ಬಟ್ಟೆಯ ಮೇಲೆ ಸಹ ೩೦ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಸರ್ಕಾರ ತನಗೆ ದುಡ್ಡು ಬೇಕಾದಾಗ ತೆರಿಗೆಯನ್ನು ಹಾಕುತ್ತದೆ. ಸಾಮಾನ್ಯವಾಗಿ ಜನಗಳು ಉಪಯೋಗಿಸತಕ್ಕ ಬಟ್ಟೆ ಮತ್ತು ಆಹಾರ ಪದಾರ್ಥಗಳ ಮೇಲೆ ಸ್ವೇಚ್ಛೆಯಾಗಿ ತೆರಿಗೆಯನ್ನು ಹಾಕತಕ್ಕದ್ದು ಸರಿಯಲ್ಲ. ಎಲ್ಲಿಯವರೆಗೆ ಬೆಲೆಗಳು ಇಳಿಯುವುದಿಲ್ಲ ಅಲ್ಲಿಯವರೆಗೆ ತೆರಿಗೆಗಳನ್ನು ಇವುಗಳ ಮೇಲೆ ಹೇರಬಾರದು ಎಂದು ಹೇಳುತ್ತೇನೆ. ಸಾಧಾರಣವಾಗಿ ಈ ಸರ್ಕಾರದ ನೀತಿ ಏನು ಎಂದರೆ ಬೆಲೆಗಳ ಏರಿಕೆಗೆ ಒಂದು ಕಡೆ ವಿರೋಧಪಕ್ಷದವರ ಕಡೆ ಮತ್ತೊಂದು ಕಡೆ ವ್ಯಾಪಾರಸ್ಥರ ಕಡೆ ತೋರಿಸಿ ಯಾರ ಮೇಲೋ ಗೂಬೆಯನ್ನು ಕೂರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸರ್ಕಾರ ಆಗಿಂದಾಗ್ಗೆ ತೆರಿಗೆಗಳನ್ನು ಹೆಚ್ಚು ಮಾಡಿ ಜನರಿಂದ ವಸೂಲು ಮಾಡಿದರೆ ಹೆಚ್ಚಿನ ಅನ್ಯಾಯವಾಗುತ್ತದೆ ಒಂದು ಕಡೆ ಸಾಗಾಣಿಕೆಯ ವೆಚ್ಚ ಜಾಸ್ತಿಯಾಗಿ ಮತ್ತೊಂದು ಕಡೆ ತೆರಿಗೆಗಳನ್ನು ಹೆಚ್ಚು ಮಾಡುತ್ತಿರುವುದರಿಂದ ಬೆಲೆಗಳು ಹೆಚ್ಚು ಏರುವುದಕ್ಕೆ ಅವಕಾಶವಾಗಿದೆ. ಈ ವಿಚಾರವನ್ನು ಹಗುರವಾಗಿ ತೆಗೆದುಕೊಳ್ಳದೆ, ಇರತಕ್ಕ ನಾನಾ ಸಮಸ್ಯೆಗಳನ್ನು ಯೋಚನೆ ಮಾಡಿ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿ ಜನಗಳು ಬಹಳ ನೊಂದುಕೊಳ್ಳುತ್ತಾರೆ, ಕಷ್ಟಪಡುತ್ತಾರೆಂದು ಹೇಳುತ್ತೇನೆ.

ಬೇಬಿ ಫುಡ್ಸ್ ಅಭಾವ ಬಹಳವಿದೆ. ತಾಯಂದಿರಿಗೆ ಹಾಲು ಇರುವುದಿಲ್ಲ. ಬೀದಿಯಲ್ಲಿ ಮಾರುವ ಹಾಲನ್ನು ಕೊಂಡುಕೊಳ್ಳೋಣವೆಂದರೆ ನೀರು ಸೇರಿಸಿರುತ್ತಾರೆಂದು ಅದನ್ನು ಕೊಂಡು ಕೊಳ್ಳುವುದಕ್ಕಾಗುವುದಿಲ್ಲ ಬೇಬಿ ಫುಡ್ ಸಿಕ್ಕುವುದೇ ಕಷ್ಟವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಔಷಧಿಗಳು ಕೆಲವು ರೋಗಗಳಿಗೆ ಅತಿ ಮುಖ್ಯವಾಗಿ ಬೇಕಾಗಿದ್ದರೂ ಸಿಕ್ಕುತ್ತಿಲ್ಲ ಎನ್ನುವ ದೂರುಗಳಿವೆ. ಔಷಧಿಗಳು ಬೇರೆ ಬೇರೆ ಹೆಸರುನಲ್ಲಿ ಸಿಕ್ಕುತ್ತದೆ. ಅತಿ ಮುಖ್ಯವಾಗಿ ಕೆಲವು ರೋಗಗಳಿಗೆ ಬೇಕಾದ ಔಷಧಿ ಹೆಚ್ಚು ದುಡ್ಡು ಕೊಟ್ಟರೆ ಸಿಕ್ಕುತ್ತದೆ, ಇಲ್ಲದೆ ಇದ್ದರೆ ಇಲ್ಲ ಎನ್ನುವ ಕೂಗಿದೆ. ಆ ಕಡೆ ಗಮನ ಕೊಡಬೇಕು.

ಡಾಲ್ಡ ಬೇಕಾದಷ್ಟು ಸಿಕ್ಕುತ್ತಿತ್ತು. ಇದ್ದಕಿದ್ದ ಹಾಗೆ ಅದಕ್ಕೆ ಕ್ಷಾಮ ಬಂದಿದೆ. ಕೆಲವು ಸೊಸೈಟಿಗಳಿಗೆ ಬಂದರೂ ಯಾರಿಗೆ ಸಿಕ್ಕುತ್ತದೆಯೋ ಗೊತ್ತಿಲ್ಲ. ಡಾಲ್ಡ ಸಿಕ್ಕದೆ ಅನೇಕರು ಬೇರೆ ಕುಕಿಂಗ್ ಮೀಡಿಯಂ ತೆಗೆದುಕೊಳ್ಳುತ್ತಾರೆ. ಅದರಲ್ಲಿ ಕೊಬ್ಬು ಸೇರಿರುತ್ತದೆಂದು ಹೇಳುತ್ತಾರೆ. ಜನತಾ ಬಜಾರಿನ ಮುಖಾಂತರ ಸ್ವಲ್ಪ ಡಾಲ್ಡ ಮಾರಾಟ ಮಾಡುತ್ತಿದ್ದಾರೆ. ಎಲ್ಲರಿಗೂ ಜನತಾ ಬಜಾರಿಗೆ ಹೋಗುವುದಕ್ಕಾಗುವುದಿಲ್ಲ. ಫುಡ್ ಅಡ್ವೈಸರಿ ಕಮಿಟಿ ಎಂದಾದರೂ ಮಾಡಿ ಈ ಎಲ್ಲ ಸಮಸ್ಯೆಗಳನ್ನೂ ಸರಿಯಾದ ರೀತಿಯಲ್ಲಿ ಪರಿಹಾರ ಮಾಡುವ ಪ್ರಯತ್ನ ಮಾಡಬೇಕು ಹಾಗೆ ಮಾಡುವಾಗ ಬಳಕೆದಾರನಿಗೆ ಹೆಚ್ಚು ಹೊರೆ ಬೀಳದಂತೆ, ಉತ್ಪತ್ತಿ ಮಾಡುವವನಿಗೆ ನಷ್ಟವಾಗದಂತೆ ಒಂದು ನೀತಿಯನ್ನು ಅನುಸರಿಸಿ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕು ಇಲ್ಲದೆ ಹೋದರೆ ಈ ಆಡಳಿತವನ್ನು ವಹಿಸಿಕೊಂಡಿರುವವರು ತಮ್ಮ ಕಾರ್ಯವನ್ನು ಸರಿಯಾಗಿ ನಡೆಸಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಇಷ್ಟು ಹೇಳಿ, ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ ಕಾಪು (ಕಾಪು).—ಮಾನ್ಯ ಅಧ್ಯಕ್ಷಿಣಿಯರೇ, ಈ ದಿನ ಈ ಮಾನ್ಯಸಭೆ ಮುಂದೆ ಇಟ್ಟಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಬೇಡಿಕೆಗಳನ್ನು ಅನುಮೋದನೆ ಮಾಡಿ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಆಹಾರ ಇಲಾಖೆ ನಮ್ಮ ಸರ್ಕಾರದ ಅತಿ ಪ್ರಾಮುಖ್ಯವಾದ ಇಲಾಖೆ ಎಂದರೆ ತಪ್ಪಾಗಲಾರದು, ಸಮಾಜದ ಸಮೂಹಿಕವಾಗಿ ಜನತೆಯ, ಸಮಾಜದ ದುರ್ಬಲವರ್ಗಕ್ಕೆ ಹೆಚ್ಚಿನ ವರ್ಗಕ್ಕೆ ಸಂಬಂಧಪಟ್ಟಿರುವ ವಿಚಾರ. ಅದರಲ್ಲಿ ಸಂತೋಷದವಿಚಾರ ವೇನೆಂದರೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮಂತ್ರಿಯವರು ಮತ್ತು ಆಹಾರ ಇಲಾಖೆಯ ಡೈರೆಕ್ಟರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಿಂದಲೇ ಬಂದಿರುವವರು. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಆಹಾರ ಸರಬರಾಜು ವ್ಯವಸ್ಥೆಯು ತೊಂದರೆ ಇರಲಾರದು ಎನ್ನುವ ಭಾವನೆ ಬರುವುದು ಸಹಜ. ಆದರೆ ದುರದೃಷ್ಟಕರವಾದ ಸಂಗತಿ ಎಂದರೆ ಈ ಮುಂದೆ ಆಹಾರದ ಅಭಾವ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ, ಜೂನ್ ತಿಂಗಳಿನಿಂದ ಪ್ರಾರಂಭವಾಗಿದ್ದರೆ, ಈ ವರ್ಷ ಫೆಬ್ರುವರಿ ತಿಂಗಳಿನಲ್ಲೇ. ಇನ್ನೂ ಹೆಚ್ಚು ಹೆಚ್ಚುವುದಿದ್ದರೆ ಜನವರಿ ತಿಂಗಳಿನಲ್ಲೇ ಪ್ರಾರಂಭವಾದದು. ಇದು ದಕ್ಷಿಣ ಕನ್ನಡ ಜಿಲ್ಲೆಯ ನತದೃಷ್ಟ ಜನತೆಯ ಒಂದು ಗೋಳಾಟ ಎಂದರೆ ತಪ್ಪಾಗಲಾರದು. ಮಾನ್ಯ ಮಂತ್ರಿಣಿಯವರು ಮತ್ತು ಆಹಾರ ಇಲಾಖೆಯ ಡೈರೆಕ್ಟರವರು ಇಬ್ಬರೂ ದಕ್ಷಿಣ ಕನ್ನಡದ ಆಹಾರ ಪರಿಸ್ಥಿತಿಯನ್ನು ಆಳವಾಗಿ ಅಭ್ಯಾಸ ಮಾಡಿದವರು ಮಾತ್ರವಲ್ಲದ ಮಂತ್ರಿಗಳು ಅಲ್ಲಿಯೇ ಹುಟ್ಟಿ ಬೆಳೆದವರು. ಅವರಿಗೆ ವಿಚಾರವೆಲ್ಲಾ ಗೊತ್ತಿದೆ. ಹಾಗಿದ್ದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ತಾರತಮ್ಯವೇಕೆ ? ದಕ್ಷಿಣ ಕನ್ನಡ ಜಿಲ್ಲೆಯ ಆಹಾರ ವಿತರಣೆಯಲ್ಲಿ ಒಂದು ರೀತಿ, ಬೇರೆ ಜಿಲ್ಲೆಗಳಲ್ಲಿ ಆಹಾರದ ವಿತರಣೆಯಲ್ಲಿ ಒಂದು ರೀತಿ, ಇಂತಹ ಧೋರಣೆಯನ್ನು ಏಕೆ ಅನುಸರಿಸಬೇಕು ಎನ್ನುವುದನ್ನು ಈ ತನಕ ತಿಳಿದುಕೊಳ್ಳಲಿಕ್ಕೆ ನಾನು ಶಕ್ತನಾಗಿಲ್ಲ.

3–30 P. M.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) — ನಮ್ಮ ಜಿಲ್ಲೆಯ ೧೪ ಜನ ಸೇರಿಕೊಂಡು ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಎಲ್ಲ ಸದಸ್ಯರೂ ಒಟ್ಟಾಗಿ ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯ ಬಗ್ಗೆ ಮಾನ್ಯ ಆಹಾರ ಸಚಿವರಿಗೆ ತಿಳಿಸಿದ್ದೇವೆ. ಅದರ ಪ್ರಕಾರ ಅವರೂ ಸಹ ಒಂದೆರಡು ಸಲ ಆ ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿಯ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲನೆ ಮಾಡಿ ನೋಡಿದ್ದಾರೆ. ನಮ್ಮ ಜಿಲ್ಲೆಯಿಂದ ನೆರೆಯ ರಾಜ್ಯಗಳಿಗೆ ಅಕ್ಕಿ ಕಳ್ಳಸಾಗಾಣಿಕೆಯಾಗುತ್ತಿರುವುದರಿಂದ ನಮ್ಮ ಜಿಲ್ಲೆಯಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ ಮತ್ತು ಆಹಾರದ ಅಭಾವ ತಲೆದೋರಿದೆ ಎಂದು ಸರ್ಕಾರದವರು ನಮಗೆ ಉತ್ತರ ಕೊಡುತ್ತಾರೆ. ಇದು ಸತ್ಯ ಸಂಗತಿಯಾದರೂ ಸಹ ಅದಕ್ಕೆ ಬೇಕಾದ ವಿಜಿಲೆನ್ಸ್ ಇಟ್ಟು ಕಳ್ಳಸಾಗಾಣಿಕೆಯಾಗುವುದನ್ನು ತಡೆಗಟ್ಟಬೇಕು. ನೆನ್ನೆ ದಿವಸ ಮಾನ್ಯ ಮಂತ್ರಿಗಳು ಒಂದು ಕಾಲಿಂಗ್ ಅಟೆಂಷನ್ ನೋಟೀಸ್‌ಗೆ ಉತ್ತರ ಕೊಡುವಾಗ ಈಗ ಕಳ್ಳಸಾಗಾಣಿಕೆಯನ್ನು ತಡೆಗಟ್ಟಿದ್ದೇವೆ ಅದು ಈಗ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಇದು ಒಂದು ಸಂತೋಷದ ಸಂಗತಿ ಎಂದು ಹೇಳಬಹುದು, ಆದರೆ ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ಕೆ.ಜಿ. ಒಂದಕ್ಕೆ ೨ ರೂಪಾಯಿ ೬೦ ಪೈಸೆ ಇದ್ದರೆ ನಮ್ಮ ಜಿಲ್ಲೆಯಲ್ಲಿ ೩ ರೂಪಾಯಿ ೩೦ ಪೈಸ್ ಕೊಡಬೇಕಾಗಿದೆ. ಈ ಒಂದು ತಾರತಮ್ಯವನ್ನು ಹೋಗಲಾಡಿಸಲು ಅಂತರ ಜಿಲ್ಲಾ ಸಾಗಾಣಿಕೆಯ ಮೇಲಿರುವ ನಿರ್ಬಂಧವನ್ನು ತೆಗೆದುಹಾಕುವುದು ಒಳ್ಳೆಯದೆಂದು ಜನರು ಹೇಳುತ್ತಿದ್ದಾರೆ. ಈ ರೀತಿ ಮಾಡಿದರೆ ಮುಂದೆ ಏನಾಗಬಹುದೆಂದು ನಾವು ಜನರಿಗೆ ಬಿಡಿಸಿ ಹೇಳಿದರೂ ಸಹ ಜನರು ಅದನ್ನು ನಂಬದ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರದವರು ನಮ್ಮ ಬಗ್ಗೆ ಏತಕ್ಕೆ ಮಲತಾಯಿ ಧೋರಣೆ ತೋರಿಸಬೇಕು ಎಂದು ಕೇಳುತ್ತಿದ್ದಾರೆ. ರಾಜ್ಯದಿಂದ ರಾಜ್ಯಕ್ಕೆ ಅಕ್ಕಿ ಹೋಗಬಾರದೆಂದು ನಿರ್ಬಂಧ ಹಾಕಲಿ, ಆದರೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಕ್ಕಿ ಸಾಗಿಸುವುದಕ್ಕೆ ಏತಕ್ಕೆ ನಿರ್ಬಂಧ ಹಾಕಬೇಕೆಂದು ಜನರು ಕೇಳುತ್ತಿದ್ದಾರೆ. ಇದರಿಂದ ಸರ್ಕಾರದವರು ಒಂದು ರೀತಿಯಿಂದ ತಾರತಮ್ಯ ತೋರಿಸಿದಂತೆ ಜನರು ಆಡಿಕೊಳ್ಳುತ್ತಿದ್ದಾರೆ. ಈ ವಿಚಾರ ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಯವರಿಗೂ ಸಹ ಗೊತ್ತಿದೆ. ಕೆ ಜಿ. ಅಕ್ಕಿಗೆ ೩ ರೂಪಾಯಿ ೩೦ ಪೈಸೆ ದರ ನಮ್ಮಲ್ಲಿರುವುದರಿಂದ ಅಷ್ಟು ಬೆಲೆ ಕೊಟ್ಟು ಕೊಳ್ಳಲು ಬಡವರಿಗೆ ಸಾಧ್ಯವಾಗುತ್ತಿಲ್ಲ, ಅಷ್ಟು ಬೆಲೆ ಕೊಡುವಷ್ಟು ಅವರ ಜೋಬು ತುಂಬಿಲ್ಲ, ಇದರಿಂದ ಅವರು ಅರೆ ಹೊಟ್ಟೆ ಊಟ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿ ಅಕ್ಕಿಯ ಅಭಾವವಿರುವುದರಿಂದ ಶಿವಮೊಗ್ಗದಲ್ಲಿ ಓಪನ್ ಮಾರ್ಕೆಟ್‌ನಲ್ಲಿ ಕೊಂಡು ಕೊಂಡು ಸಾಗಿಸಲು ಕೆಲವು ಸೊಸೈಟಿಗಳಿಗೆ ಅನುಮತಿ ಕೊಟ್ಟಿದ್ದೇವೆಂದು ಸರ್ಕಾರದವರು ಹೇಳುತ್ತಾರೆ ಅದರಂತೆ ಒಂದು ಸಲ ೧೫ ಸಾವಿರ ಕ್ವಿಂಟಾಲ್ ಅಕ್ಕಿ, ಮತ್ತೊಂದು ಸಲ ೨೧ ಸಾವಿರ ಕ್ವಿಂಟಾಲ್ ಅಕ್ಕಿ ಅಲ್ಲಿಗೆ ಹೋಗಿದೆ, ಅದರ ಬೆಲೆ ಕೆ.ಜಿ.ಗೆ ೨ ರೂಪಾಯಿ ೮೦ ಪೈಸೆ ಎಂದು ಹೇಳಿದ್ದಾರೆ. ಆದರೆ ಈ ದರಕ್ಕೆ ಅಲ್ಲಿ ಅಕ್ಕಿ ಸಿಗುತ್ತಿಲ್ಲ, ಅದರ ಬೆಲೆ ಈಗ ೩ ರೂಪಾಯಿ ೨೧ ಪೈಸೆವರೆಗೆ ಹೋಗಿದೆ. ಇದರಲ್ಲಿ ಮತ್ತೊಂದು ವಿಶೇಷವೇನೆಂದರೆ, ಬೆಂಗಳೂರು ನಗರದ ಜನತೆಗೆ ಸರ್ಕಾರದವರು ಪ್ರೊಕ್ಯೂರ್ ಮಾಡಿದ ಅಕ್ಕಿಯನ್ನು ಮಾನ್ಯ ಶಾಮಣ್ಣನವರು ಕೆ. ಜಿ. ಒಂದಕ್ಕೆ ಒಂದು ರೂಪಾಯಿ ಅರವತ್ತು ಪೈಸೆ ಅಥವಾ ಒಂದು ರೂಪಾಯಿ ೮೦ ಪೈಸೆಗೆ ಹಂಚುತ್ತಾರೆ ಆದರೆ ಹಳ್ಳಿಯ ಜನರು ತಮಗೆ ಅಕ್ಕಿ ಬೇಕು ಎಂದರೆ ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಲು ಸೊಸೈಟಿಯವರಿಗೆ ಪರ್ಮಿಟ್ ಕೊಟ್ಟಿದ್ದೇವೆಂದು ಹೇಳುತ್ತಾರೆ, ಈ ದ್ವಿಮುಖ ನೀತಿ, ಈ ದ್ವಿಮುಖ ಧೋರಣೆ ಸರಿಯಲ್ಲವೆಂದು ಹೇಳುತ್ತೇನೆ. ಏಕೆಂದರೆ ಪೇಟೆಯಲ್ಲಿಯಾದರೂ ಕೆಲಸ ಮಾಡಲು ನೌಕರಿ ಸಿಗುತ್ತದೆ, ಆದರೆ ಹಳ್ಳಿಯ ಜನರಿಗೆ ವ್ಯವಸಾಯದ ಸಮಯದಲ್ಲಿ ಬಿಟ್ಟರೆ ಬೇರೆ ಸಮಯದಲ್ಲಿ ಕೆಲಸ ಸಿಗುವುದಿಲ್ಲ, ಆದಕಾರಣ ಅವರ ಬಳಿ ಹಣವೂ ಇರುವುದಿಲ್ಲ, ಇಂತಹ ಸಂದರ್ಭದಲ್ಲಿ ಅವರಿಗೆ ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಿದ ಅಕ್ಕಿಯನ್ನೂ ಮಾರಾಟ ಮಾಡುವುದು ಸರಿಯೇ ಇದು ತಾರತಮ್ಯ ಮಾಡಿದಂತೆ

ಆಗುವುದಿಲ್ಲವೇ ? ಇನ್ನು ಮುಂದೆ ಪಟ್ಟಣ ಪ್ರದೇಶದ ಜನರಿಗೆ ಪ್ರೊಕ್ಯೂರ್ ಮಾಡಿದ ಅಕ್ಕಿಯನ್ನು ಕಡಿಮೆ ಬೆಲೆಗೆ ಒದಗಿಸಿದಂತೆ ಹಳ್ಳಿಯ ಜನರಿಗೂ ಸಹ ಅದೇ ಪ್ರಮಾಣದಲ್ಲಿ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಬೆಂಗಳೂರು ನಗರದಲ್ಲಿ ರೇಷನ್ ಕೊಡುವಾಗ ಒಬ್ಬರಿಗೆ ೩ ಕೆ.ಜಿ, ಅಕ್ಕಿ ೩ ಕೆ.ಜಿ. ಗೋದಿ ಒಂದು ಕೆ.ಜಿ, ಸಕ್ಕರೆ ಕೊಡುತ್ತಾರೆ ಅದೇ ಹಳ್ಳಿಯ ಜನರಿಗೆ ಮುಕ್ಕಾಲು ಕೆ.ಜಿ. ಅಕ್ಕಿ ೨೦೦ ಗ್ರಾಮ್ ಸಕ್ಕರೆ ಕೊಡುತ್ತಾರೆ ಚಿಮಣಿ ಎಣ್ಣೆಯಂತೂ ಹಳ್ಳಿಯ ಜನರಿಗೆ ಸಿಗುವುದೇ ಇಲ್ಲ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಉಪಯೋಗಿಸಿದರು ಎಂಬಂತೆ ತಾವು ಹಳ್ಳಿಯ ಜನರ ಮೇಲೆ ಈ ರೀತಿ ಬ್ರಹ್ಮಾಸ್ತ್ರ ಬಿಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಹಳ್ಳಿಯ ಜನರನ್ನು ತಾವು ಕರುಣೆಯಿಂದ ನೋಡತ್ತಿದ್ದೇವೆ, ಅವರಿಂದಲೇ ನಾವು ಬದುಕಿದ್ದೇವೆ, ಅವರೇ ನಮ್ಮ ಬೆನ್ನೆಲುಬು, ಅವರಿಂದಲೇ ನಾವು ಉದ್ಧಾರವಾಗಿದ್ದೇವೆ ಎಂದು ಭಾಷಣ ಮಾಡುತ್ತಿದ್ದೇವೆ. ಈ ಕಾರಣದಿಂದ ಆ ಜನರ ಮೇಲೆ ಧೃತರಾಷ್ಟ್ರ ದೃಷ್ಟಿಯನ್ನು ಬೀರಬಾರದೆಂದು ಹೇಳುತ್ತೇನೆ. ನಮ್ಮ ಕಡೆ ಮಾರಮ್ಮನ ಪ್ರಸಾದವಾದರೂ ಪಾರಕ್ಕೊಮ್ಮೆ ಸಿಗುತ್ತದೆ. ಆದರೆ ಸರ್ಕಾರದವರು ಅಕ್ಕಿ ಕೊಡುವುದು ತಿಂಗಳಿಗೆ ಒಂದು ಸಲ ಮಾತ್ರ. ಪಾಪದ ಬಡವನಿಗೆ ಸಿಗತಕ್ಕಂಥ ಅಕ್ಕಿ ಮುಕ್ಕಾಲು ಕೆ. ಜಿ. ಮಾತ್ರ, ಅದೇ ಬೆಂಗಳೂರು ನಗರದ ಜನತೆಗೆ ಒಬ್ಬರಿಗೆ ೩ ಕೆ.ಜಿ. ಕೊಡುತ್ತೀರಿ, ಈ ತಾರತಮ್ಯ ಏತಕ್ಕೆ ? ನಮ್ಮ ಜಿಲ್ಲೆಯ ಒಬ್ಬ ಪ್ರತಿಭಾನ್ವಿತ ಮಹಿಳೆಯು ಈ ಒಂದು ಆಹಾರ ಸರಬರಾಜು ಇಲಾಖೆಯ ಅಧಿಕಾರಸ್ಥಾನವನ್ನು ಹೊಂದಿರುವುದು ನಮಗೆ ಒಂದು ಹೆಮ್ಮೆಯ ವಿಚಾರ, ಮತ್ತೊಂದು ಹೆಮ್ಮೆಯ ವಿಚಾರವೆಂದರೆ, ನೆರೆಯ ರಾಜ್ಯಗಳಿಗೆ ನಮ್ಮ ರಾಜ್ಯದ ಆಹಾರಧಾನ್ಯಗಳ ಬೆಲೆಗಳನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಬೆಲೆ ಕಡಿಮೆ ಇರುವುದು. ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ನಮ್ಮ ಮಾನ್ಯ ಮಂತ್ರಿಯವರು ಮಾಡಿದ್ದರೂ ಸಹ ಅವರು ಹುಟ್ಟಿದ ಜಿಲ್ಲೆಯನ್ನೇ ಮರೆತು ನಮ್ಮನ್ನೆಲ್ಲಾ ಏತಕ್ಕೆ ನರಕದ ಹೊಂಡಕ್ಕೆ ದೂಡುತ್ತಿದ್ದೀರಿ ? ಅನ್ನ ದಾನಕ್ಕಿಂತ ಇನ್ನು ದಾನವಿಲ್ಲ ಎಂದು ಪುರಾಣದಲ್ಲಿ ಹೇಳಿದೆ ಅದರಂತೆ ನಮ್ಮ ಮಾನ್ಯ ಮಂತ್ರಿಯವರು ಈ ವಿಚಾರದಲ್ಲಿ ಮಾರಮ್ಮನಾಗದೆ ಅನ್ನಪೂರ್ಣೇಶ್ವರಿಯಾಗಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅನ್ನಪೂರ್ಣೇಶ್ವರಿ ಎಂಬ ಹೆಸರಿನ ದೇವರಿದೆ ಅದು ಬಹಳ ಪ್ರಭಾವಶಾಲಿಯಾದ ದೇವರು, ಅದು ಬೇಕಾದಾಗ ಅನ್ನ ಕೊಡುತ್ತದೆ ಎಂಬ ಹೆಸರಿದೆ ಅದರಂತೆ ನಮ್ಮ ಮಂತ್ರಿಣಿಯವರು ಸಹ ಹಳ್ಳಿಯ ಜನರಿಗೆ ಅನ್ನ ಕೊಟ್ಟು ಅವರ ಹೊಟ್ಟೆ ಉರಿಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಮತ್ತು ನಮ್ಮ ಜಿಲ್ಲೆಯ ಮಟ್ಟಿಗೆ ತಮ್ಮ ವಕ್ರದೃಷ್ಟಿಯನ್ನು ಬೀರದೆ ತಮ್ಮ ದಿವ್ಯದೃಷ್ಟಿಯನ್ನು ಬೀರಬೇಕೆಂದು ಹೇಳುತ್ತೇನೆ. ಈಗ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಧಾರಣೆ ಕೆ ಜಿ.ಗೆ ರೂಪಾಯಿ ೮೦ ಪೈಸೆ ಇದೆ ಎಂದು ಮಾನ್ಯಮಂತ್ರಿಣಿಯವರು ಹೇಳಿದ್ದಾರೆ, ಈ ಬಗ್ಗೆ ನಾನು ಕಠೋರವಾದ ಮಾತನ್ನು ಅವರಿಗೆ ಹೇಳುವುದಿಲ್ಲ. ಏಕೆಂದರೆ ಅವರ ಬಗ್ಗೆ ನನಗೆ ವಿಶ್ವಾಸವಿದೆ. ಆದರೆ ಈ ಮಾತು ಸತ್ಯಕ್ಕೆ ದೂರವಾಗಿದೆ ಎಂದು ಮಾತ್ರ ಹೇಳುತ್ತೇನೆ ಈಗ ಅಲ್ಲಿ ಕೆ. ಜಿ. ಅಕ್ಕಿಯ ಬೆಲೆ ೩ ರೂ. ೨೦ ಪೈಸೆ ಆಗಿದೆ. ಬಾಯಿಲ್ಡ್ ರೈಸ್‌ನ ಬೆಲೆಯೇ ಇಷ್ಟಿದೆ, ನಾವೇನೂ ರಾ-ರೈಸನ್ನು ಉಪಯೋಗ ಮಾಡುವುದಿಲ್ಲ. ಆದುದರಿಂದ ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಕೊ-ಆಪರೇಟೀವ್ ಸಂಸ್ಥೆಗಳಿವೆ ಅವುಗಳ ಮೂಲಕ ಒದಗಿಸುವಂತೆ ನೋಡಬೇಕು; ತಮಗೆ ಗೊತ್ತಿದೆ, ಈ ವರ್ಷದ ಪರಿಸ್ಥಿತಿ ಅತಿ ಗಂಭೀರವಾಗಿದೆ. ಈ ಸಲ ಬಂದ ನೀರಿನ ಪ್ರವಾಹದಿಂದ ಸಾಧಾರಣ ನಮ್ಮಲ್ಲಿ ೨೫ ಪರ್ಸೆಂಟ್ ಬೆಲೆ ಕೊಚ್ಚಿ ಹೋಗಿದೆ. ಇನ್ನು ೨೫ ಪರ್ಸೆಂಟ್ ಬೆಲೆ ಕೊಳೆತು ಹೋಗಿದೆ ಹೀಗಾಗಿ ಎರಡು ಬೆಲೆ ಕೂಡ ಸಿಕ್ಕಿಲ್ಲ. ಆದುದರಿಂದ ದಕ್ಷಿಣ ಜಿಲ್ಲೆ ಗಂತಾಂತರ, ಗಂಭೀರ ಪರಿಸ್ಥಿತಿಯಲ್ಲಿದೆ. ಹೊಟ್ಟೆಯ ಉರಿ ಭುಗಿಲೇಳದ ಹಾಗೆ, ಹಾಹಾಕಾರ ಏಳದ ಹಾಗೆ ನೋಡಿ ಕೊಳ್ಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಮತ್ತೆ ನಮ್ಮಲ್ಲಿ ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವ ಜನ ಬಹಳ ಇದ್ದಾರೆ. ಈಗ ೩ನೇ ಬೆಳೆ ಆಗುತ್ತದೆ. ಅಲ್ಲಿ ಯಾವ ಅಂಗಡಿಗೆ ಹೋದರೂ ಚಿಮಣಿ ಎಣ್ಣೆ ಸಿಕ್ಕುವುದಿಲ್ಲ. ಚಿಮಣಿ ಎಣ್ಣೆ ಸಿಕ್ಕದೇ ಹೋದರೆ ಈಗ ಏನ್ನು ಬೆಳೆ ಬೆಳಸಿದ್ದಾರೆ, ಅದೆಲ್ಲಾ ಸಂಪೂರ್ಣವಾಗಿ ಸುಟ್ಟು ಹೋಗುತ್ತದೆ ಆದುದರಿಂದ ಹೆಚ್ಚು ಹೆಚ್ಚು ಚಿಮಣಿ ಎಣ್ಣೆಯನ್ನು ಈ ಸಮಯದಲ್ಲಿ ಅಂದರೆ ಮೂರನೇ ಬೆಳೆ ಸಮಯದಲ್ಲಿ ಅದರಲ್ಲೂ ಕೂಡ ಪಂಪುಸೆಟ್ಟಿನವರಿಗೆ ಸಪ್ಲೈ ಮಾಡುವಂತೆ ನೋಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಜೊತೆಗೆ ಲೆವಿ ಪ್ರೊಕ್ಯೂರ್‌ಮೆಂಟ್ ವಿಚಾರದಲ್ಲಿ ೧೯೭೩-೭೪ಕ್ಕೆ ಬಜೆಟ್ ಭಾಷಣವನ್ನು ಅವರು ಕೊಟ್ಟಿರುವ ಅಂಕಿಸಂಖ್ಯೆಗಳನ್ನು ನೋಡಿದಾಗ ಲೆವಿಯನ್ನು ಹೆಚ್ಚು ಮಾಡಿದ್ದಾರೆ. ಆದರೆ ಇದು ಅನುಮಾನಾಸ್ಪದ ಅಂಕಿ ಸಂಖ್ಯೆ ಎಂದು ನಾನು ಹೇಳುತ್ತೇನೆ. ಅದನ್ನು ಮಾನ್ಯ ಮಂತ್ರಿಗಳು ಕ್ಲಾರಿಫಿಕೇಷನ್ ಮಾಡಿಕೊಳ್ಳಬೇಕು. ೧೯೭೪-೭೫ಕ್ಕೆ ಮಂಡ್ಯ ಜಿಲ್ಲೆಯಲ್ಲಿ ಅದರ ಟಾರ್ಗೆಟ್ ೩೦,೦೦೦ ಟನ್ ಶಿವಮೊಗ್ಗ ಜಿಲ್ಲೆಯಲ್ಲಿ ೪೫,೦೦೦ ಟನ್, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೬,೦೦೦ ಟನ್. ೧೯೭೪-೭೫ಕ್ಕೆ ಮಂಡ್ಯ ಜಿಲ್ಲೆಯಲ್ಲಿ ೩೦,೦೦೦ ಇದ್ದದ್ದು ೧೫,೦೦೦ಕ್ಕೆ ಬಂತು. ಆ ಮೇಲೆ ಶಿವಮೊಗ್ಗ ಜಿಲ್ಲೆಯಲ್ಲಿ ೪೫,೦೦೦

ಟನ್ ಇದದ್ದು ೩೨,೦೦೦ ಟನ್‌ಗೆ ಬಂತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೬,೦೦೦ ಟನ್ ಇದ್ದದ್ದು ೨೬,೦೦೦ ಟನ್‌ಗೆ ಏರಿ ಹೋಯಿತು. ಶಿವಮೊಗ್ಗ ಮತ್ತು ಮಂಡ್ಯ ಜಿಲ್ಲೆಯಲ್ಲಿ ಲೆವಿ ಕಡಿಮೆ ಟಾರ್ಗೆಟ್ ಇತ್ತು, ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಹೆಚ್ಚಾಗಿ ಏಕೆ ಮಾಡಿದಿರಿ ? ಅದನ್ನು ತಾವು ಹೇಳಬೇಕು. ಇದು ನನಗೆ ಅರ್ಥವಾಗಲಿಲ್ಲ, ತಾವು ಹೇಳಬೇಕು ಎಂದು ಕೇಳಿಕೊಂಡು ಸಮಯದ ಅಭಾವವಿರುವುದರಿಂದ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟ್ವಾಳ್).— ಸನ್ಮಾನ್ಯ ಅಧ್ಯಕ್ಷರವರೇ, ನಮ್ಮ ಆಹಾರ ಹುತ್ತು ನಾಗರೀಕ ಪೂರೈಕೆ ಇಲಾಖೆಯು ಈ ವರ್ಷದ ವರದಿಯಲ್ಲಿ ಅದರ ಕರ್ತವ್ಯಗಳನ್ನು ಅದರಲ್ಲಿ ಹೇಳಿದ್ದಾರೆ. ಆರಂಭದಲ್ಲಿ ಆಹಾರ ಇಲಾಖೆಯಲ್ಲಿ ಆಹಾರ ಸಂಗ್ರಹಣೆ ಮತ್ತು ವಿತರಣೆ—ಇವೆರಡು ಬಹಳ ಮುಖ್ಯವಾದ ತಮ್ಮ ಕರ್ತವ್ಯ ಎಂದು ಇದರಲ್ಲಿ ಹೇಳಿಕೊಂಡಿದ್ದಾರೆ ಆದರೆ ಈ ವರದಿಯನ್ನು ಪೂರ್ತಿಯಾಗಿ ಓದಿದರೆ ಈ ಎರಡು ಕರ್ತವ್ಯಗಳನ್ನು ಕೂಡ ಅವರು ಸಂಪೂರ್ಣವಾಗಿ ಮರೆತು ಕೆಲಸ ಮಾಡಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಮಾನ್ಯ ಆಹಾರ ಸಚಿವೆಯರ ಬಗ್ಗೆ ಮಾನ್ಯ ಭಾಸ್ಕರ ಶೆಟ್ಟರು ಹೇಳಿದಹಾಗೆ ನನಗೆ ಸಂಪೂರ್ಣವಾದ ಅಭಿಮಾನ ಇದೆ. ಅವರು ಅನ್ನಪೂರ್ಣೇಶ್ವರಿಯಾಗಿ ಕೆಲಸ ಮಾಡಲಿಕ್ಕೆ ಬಹುಶಃ ಸರ್ಕಾರದವರು ಅಕ್ಷಯಪಾತ್ರೆಯನ್ನು ಅವರಿಗೆ ಕೊಟ್ಟಿಲ್ಲ ಅಕ್ಷಯ ಪಾತ್ರೆ ಇಟ್ಟುಕೊಳ್ಳದೆ ಕೆಲಸಮಾಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ಸರ್ಕಾರದ ಮತ್ತು ಇಲಾಖೆಯ ಧೋರಣೆಗೆ ಹೊಂದಿಕೊಂಡು ಕೆಲಸಮಾಡುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ "ಡೆವಲಪ್‌ಮೆಂಟ್ ಆಫ್ ಅಗ್ರಿಕಲ್ಚರ್ ಇನ್ ಕರ್ನಾಟಕ" ಎಂದು ಕೃಷಿ ಇಲಾಖೆಯವರು ಒಂದು ವರದಿಯನ್ನು ಮಾಡಿ ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಈ ವರದಿಯಲ್ಲಿ ನೋಡಿದರೆ ಇಡೀ ನಮ್ಮ ರಾಜ್ಯದಲ್ಲಿ ನಮ್ಮ ಜನತೆಗೆ ಬೇಕಾದುದಕ್ಕಿಂತ ಎಷ್ಟೋ ಹೆಚ್ಚು ಉತ್ಪಾದನೆಯಾಗುತ್ತದೆ ಎಂದು ಅವರು ತೋರಿಸಿಕೊಟ್ಟಿದ್ದಾರೆ. ಯಾವರೀತಿ ಎಂದರೆ ನಮ್ಮ ರಾಜ್ಯದಲ್ಲಿ ಉತ್ಪಾದನೆ ಧಾನ್ಯಗಳ ಮಟ್ಟಿಗೆ ೫೫, ೯೫, ೫೮೬ ಟನ್ ಆಹಾರ ಧಾನ್ಯ ಉತ್ಪಾದನೆಯಾಗುಂತದೆ ಎಂದು ಹೇಳಿದ್ದಾರೆ. ಒಬ್ಬ ವ್ಯಕ್ತಿಗೆ ೪೨೫ ಗ್ರಾಂ ಒಂದು ದಿವಸಕ್ಕೆ ಬೇಕಾಗುತ್ತದೆ ಎಂದು ಲೆಕ್ಕ ಹಾಕಿ, ಇದರ ಪ್ರಕಾರ ಇಡೀ ರಾಜ್ಯದಲ್ಲಿ ಎಲ್ಲಾ ಜನರಿಗೂ ಕೂಡ ಕೊಡಲಿಕ್ಕೆ ಎಷ್ಟು ಬೇಕಾಗುತ್ತದೆ ಎನ್ನುವುದನ್ನು ಲೆಕ್ಕಹಾಕಿ ಅವರು ಏನು ಹೇಳಿದ್ದಾರೆ ಎಂದರೆ, ನಮ್ಮಲ್ಲಿ ಹೆಚ್ಚು ಕಡಿಮೆ ಆಹಾರ ಧಾನ್ಯಗಳ ಮಟ್ಟಿಗೆ ಎಸ್ಟಿಮೇಟೆಡ್ ಪ್ರೊಡಕ್ಷನ್ ಸುಮಾರು ೫, ೮೫, ೦೮೬ ಟನ್ ಎಂದು. ರಿಕ್ವೈರ್‌ಮೆಂಟ್ ೪, ೦೯, ೩೬೦ ಟನ್. ಉಳಿದದ್ದು ೧೨, ೯೮, ೯೨೩ ಟನ್, ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿ ನಮ್ಮಲ್ಲಿದೆ. ಒಂದು ದಿವಸಕ್ಕೆ ೪೨೫ ಗ್ರಾಂ ಅಕ್ಕಿ ಕೊಟ್ಟರೆ ಎಷ್ಟು ಆಗುತ್ತದೆ ಎಂದು ಲೆಕ್ಕ ಹಾಕಿ. ಈಗ ರೇಷನ್ ಕೊಡುತ್ತಾ ಇರುವುದು ಸಾಮಾನ್ಯವಾಗಿ ಬೆಂಗಳೂರು ಸಿಟಿ, ಹುಬ್ಬಳ್ಳಿ—ಧಾರವಾರ, ಬೆಳಗಾಂ ಮತ್ತು ಮಂಗಳೂರು ಹಾಗೂ ಕೋಲಾರ ಟೌನ್‌ನಲ್ಲಿ ಇದನ್ನು ತೆಗೆದುಕೊಂಡರೆ ನಮ್ಮ ಕರ್ನಾಟಕದ ಜನಸಂಖ್ಯೆಯ ನೂರಾರಲ್ಲಿ ಒಂದು ಭಾಗ ಕೂಡ ಆಗಲಿಕ್ಕಿಲ್ಲ. ಎಷ್ಟು ಜನರಿಗೆ ತಿಂಗಳಿಗೆ ೩ ಕಿಲೋ ಆಹಾರಧಾನ್ಯ ಕೊಡುವ ಲೆಕ್ಕ ಇಟ್ಟುಕೊಂಡರೂ ಕೂಡ ಅಷ್ಟು ಪೂರೈಸುವುದಕ್ಕೆ ಸಾಧ್ಯವಿಲ್ಲ ನಮ್ಮಲ್ಲಿ ಸಾಕಷ್ಟು ಆಹಾರ ಧಾನ್ಯ ಇದೆ ಇರುವಂಥ ಆಹಾರ ಧಾನ್ಯವನ್ನು ಇವತ್ತು ಸರಿಯಾಗಿ ಜನರಿಗೆ ಏಕೆ ಒದಗಿಸಲಿಕ್ಕೆ ಆಗುವುದಿಲ್ಲ ಎನ್ನುವುದನ್ನು ತಾವು ಪರಿಶೀಲನೆ ಮಾಡಬೇಕು. ಒಂದನೆಯದಾಗಿ ಉತ್ಪಾದನೆಯಲ್ಲಿ ಮಾರ್ಕೆಟಬಲ್ ಸರ್ಪ್ಲಸ್‌ನ್ನು ಬಿಟ್ಟಿದ್ದೀರಿ, ಮಾರ್ಕೆಟೆಡ್ ಸರ್ಪ್ಲಸ್ ತೆಗೆದುಕೊಂಡರೂ ಕೂಡ ಹಿಂದಿನ ವರ್ಷ ಮಾರ್ಕೆಟ್‌ಗೆ ಎಷ್ಟು ಬಂತು, ಮುಂದಿನ ವರ್ಷ ಎಷ್ಟು ಬರುತ್ತದೆ ಎನ್ನುವುದನ್ನು ಪೂರ್ತಿಯಾಗಿ ಸರ್ಕಾರದ ಆಡಳಿತದಲ್ಲಿರತಕ್ಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್‌ನವರು ನಿರ್ಧಾರ ಮಾಡಿದ್ದಾರೆಯೋ ಎಂದು ನೋಡಿದರೆ ಯಾವುದೂ ಮಾಡಿಲ್ಲ. ಪ್ರೊಕ್ಯೂರ್‌ಮೆಂಟ್ ಟಾರ್ಗೆಟ್ ೧೯೬೩-೬೪ರಲ್ಲಿ ೨,೫೦,೦೦೦ ಟನ್ ಎಂದು ಗುರಿ ಇತ್ತು. ಸಂಗ್ರಹ ಮಾಡಿರುವುದು ೧,೬೮,೮೫೩ ಟನ್. ೧೯೬೪-೬೫ ರಲ್ಲಿ ಗುರಿ ೨೫,೮೬, ೬೫೦ ಟನ್ ಜಾಸ್ತಿ ಹಾಕಿಕೊಂಡಿರಿ. ಸಂಗ್ರಹ ೧, ೨೩, ೦೧೭ ಟನ್. ಆದರೂ ಕೂಡ ಇಡೀ ರಾಜ್ಯದ ಉತ್ಪಾದನೆಯಲ್ಲಿ ೬೦ ರಲ್ಲಿ ೧ ಭಾಗ ಮಾರ್ಕೆಟೆಡ್ ಸರ್ಪ್ಲಸ್ ಕೂಡ ಸಂಗ್ರಹವಾಗಿಲ್ಲ. ಅಖಿಲ ಭಾರತ ಮಟ್ಟದಲ್ಲಿ ಹೇಳುವುದಾದರೆ, ಇಡೀ ದೇಶದಲ್ಲಿ ಉತ್ಪಾದನೆ ೧೯೬೩ರಲ್ಲಿ ೯೨.೨೬ ಪರ್ಸೆಂಟ್. ಆದರೆ ೭.೭೫೦ ಸಂಗ್ರಹ ಕಡಿಮೆ ಆಗಿದೆ ೧೯೬೩ರಲ್ಲಿ ೭.೭೯ ಪರ್ಸೆಂಟ್ ಸಂಗ್ರಹ ಮಾಡಿದ್ದಾರೆ. ೧೯೬೪ರಲ್ಲಿ ೫.೯೫ ಪರ್ಸೆಂಟ್ ಮಾರ್ಕೆಟೆಡ್ ಸರ್ಪ್ಲಸ್ ಸಂಗ್ರಹ ಮಾಡಿದ್ದಾರೆ ತಮ್ಮದು ೧.೬, ೧.೭ ಗಿಂತ ಹೆಚ್ಚಿಗೆ ಬರುವುದಿಲ್ಲ. ರಾಜ್ಯದ ಆಹಾರ ಧಾನ್ಯಗಳನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದಕ್ಕೆ, ಬೇರೆ ರಾಜ್ಯಗಳಿಗೆ ಸಾಗಿಸುವುದಕ್ಕೆ ಸ್ಮಗಲಿಂಗ್ ಮಾಡುವುದಕ್ಕೆ, ಕಾಳಸಂತೆಯಲ್ಲಿ ಮಾರಲಿಕ್ಕೆ, ಬೆಲೆ ಏರಿಸುವುದಕ್ಕೆ ತಮ್ಮ ಧೋರಣೆಯನ್ನು ಅನುಸರಿಸಲಾಗಿದೆ. ಆದರೆ ತಾವು ಅಧಿಕಾರಿಗಳ ಮೇಲೆ ಅವರ ಲಂಚರುಷುವತ್ತಿನ ಮೇಲೆ ಎಷ್ಟೋ ಮಾತನಾಡಿದರೂ ಕೂಡ ತಮ್ಮ ಧೋರಣೆಯನ್ನು ಬದಲಾವಣೆ ಮಾಡದೇ ಹೋದರೆ ಖಂಡಿತ ನಮ್ಮ ಜನಗಳಿಗೆ ಆಹಾರವನ್ನು ನ್ಯಾಯವಾಗಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು

ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ ಇವೊತ್ತು ನಮ್ಮಲ್ಲಿ ಏನಾಗಿದೆ ಎಂದರೆ ನಿಮ್ಮ ವಿತರಣೆ ಬಗ್ಗೆ ಹೋದ ಸಲ ನಮ್ಮ ಅರ್ಥಸಚಿವರು ಬಡ್ಜೆಟ್ ಸಂದರ್ಭದಲ್ಲಿ ಹೇಳಿದರು, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ನಾವು ನಾಲ್ಕು ಲಕ್ಷ ಟನ್ ಆಹಾರ ಸಂಗ್ರಹ ಮಾಡುತ್ತೇವೆ ಎಂದು, ಆದರೆ ಈಗ ಒಂದು ಲಕ್ಷ ಅರವತ್ತೆಂಟು ಸಾವಿರ ಟನ್ ಸಂಗ್ರಹ ಮಾಡಿದ್ದಾರೆ. ಇವೊತ್ತು ಆಹಾರ ಧಾನ್ಯ ರಖಂ ವ್ಯಾಪಾರ ವಹಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿ ಕೇಂದ್ರ ಸರ್ಕಾರದವರು ಅದನ್ನು ಕೈ ಬಿಟ್ಟರು. ನಮ್ಮ ಮುಖ್ಯಮಂತ್ರಿಗಳು ಆಹಾರಧಾನ್ಯ ರಖಂ ವಹಿಸಿಕೊಳ್ಳುವುದಕ್ಕೆ ಸಿಬ್ಬಂದಿ ಇಲ್ಲ, ಸಾಮರ್ಥ್ಯ ಇಲ್ಲ, ಎಂದು ಹೋದ ಸಾರಿ ಗಂಟಾ ಘೋಷವಾಗಿ ಹೇಳಿದರು. ಆಹಾರಧಾನ್ಯ ರಖಂ ವ್ಯಾಪಾರ ಬಿಡಿ, ಒಂದು ಸರಿಯಾದ ರೀತಿಯಲ್ಲಿ ಮಾರ್ಕೆಟ್ಟಿಗೆ ಬರುವ ಸರ್‌ಪ್ಲಸ್ ಹೆಚ್ಚಿನ ಅಂಶ ಸರ್ಕಾರ ತೆಗೆದುಕೊಳ್ಳುವ ಒಂದು ವ್ಯವಸ್ಥೆ ಕೂಡ ನಿಮ್ಮ ಲೆವಿ ಪದ್ಧತಿಯಲ್ಲಿ ಇಲ್ಲ. ಲೆವಿ ಪದ್ಧತಿಯಲ್ಲಿ ಕೊಟ್ಟಿರುವ ಅಂಕಿಅಂಶ ನೋಡಿದರೆ ಗೊತ್ತಾಗುತ್ತದೆ. ತಮ್ಮ ಲೆವಿ ಧೋರಣೆ ನೋಡಿದರೆ ಏನು ಅರ್ಥವಾಗುತ್ತದೆ ಎಂದರೆ ಸಣ್ಣ ಹಿಡುವಳಿದಾರರಿಂದ ಎಷ್ಟು ಸಾಧ್ಯವಾಗುತ್ತದೆ ಅಷ್ಟು ಸಂಗ್ರಹ ಮಾಡುತ್ತೀರಿ, ಅವರಿಗೆ ಊಟಕ್ಕೆ ಕೂಡ ಸಾಕಾಗುವುದಿಲ್ಲ, ಮಳೆಗಾಲದಲ್ಲಿ ಬೆಳೆ ಬರದೇ ಇರುವಂತ ಸಂದರ್ಭದಲ್ಲಿ ಅವರು ಕ್ರಯ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ಅಂತಹವರ ಕೈಯಲ್ಲಿ ಒಂದು ಕಾಳು ಕೂಡ ಬಿಡುವುದಿಲ್ಲ. ಆದರೆ ಹೆಚ್ಚು ಹೆಚ್ಚು ಜಮೀನು ಇರುವವರು ತಮಗೆ ಅವಕಾಶವಾದಂತೆ ಹೆಚ್ಚು ಮಾರಾಟ ಮಾಡುತ್ತಾರೆ. ಅವರು ಹೆಚ್ಚು ಉತ್ಪಾದನೆ ಮಾಡಿರುವುದರಿಂದ ಅದನ್ನು ಮಾರ್ಕೆಟ್ಟಿನಲ್ಲಿ ಇಟ್ಟು ಹೆಚ್ಚು ಕ್ರಯಕ್ಕೆ ರಖಂ ವ್ಯಾಪಾರ ಮಾಡುತ್ತಾರೆ, ಅಂತಹವರ ಕೈಯಿಂದ ಸಂಗ್ರಹಮಾಡುವುದು ಬಹಳ ಕಡಿಮೆ ಇದೆ ಇವೊತ್ತು ಹಳ್ಳಿಗಾಡಿನಲ್ಲಿ ಒಂದು ಸಮಾಜ ಪದ್ಧತಿಯಲ್ಲಿ ವ್ಯತ್ಯಾಸ ಬಂದಿದೆ ಹಿಂದೆ ಕೂಲಿ ಕೆಲಸಗಾರರಿಗೆ ಧಾನ್ಯದ ರೂಪದಲ್ಲಿ ಕೂಲಿ ಕೊಡುತ್ತಿದ್ದರು, ಧಾನ್ಯದ ರೂಪದಲ್ಲಿ ವ್ಯವಸಾಯಗಾರರಿಗೆ ಸಣ್ಣ ವ್ಯವಸಾಯಗಾರರಿಗೆ ಒಂದೆರಡು ತಿಂಗಳಿಗೆ ಸ್ವಲ್ಪ ಕಡಿಮೆ ಬಡ್ಡಿಯಲ್ಲಿ ಆಹಾರ ಕೊಡುತ್ತಿದ್ದರು, ಇವೊತ್ತು ಏನಾಗಿದೆ ಈಕ್ರಮ ಸಂಪೂರ್ಣವಾಗಿ ಬದಲಾವಣೆಯಾಗಿದೆ. ನಿಮ್ಮ ಬಂಡವಾಳಶಾಹಿ ಪದ್ಧತಿ ಏನಿದೆ ಈಗ ಅಲ್ಲಿ ಅದು ನಿಂತು ಈಗ ಕ್ಯಾಷ್ ವ್ಯವಹಾರ ನಿಗದಿಯಾಗಿ ನಡೆಯುತ್ತಿದೆ. ಅಲ್ಲಿರತಕ್ಕ ಸಣ್ಣ ಹಿಡುವಳಿದಾರರು ಅವರಿಗೆ ಬೇಕಾದ ಧಾನ್ಯವನ್ನು ಕ್ರಯಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಅಲ್ಲದೆ ಅವನ ಉತ್ಪಾದನೆ ಸಾಕಾಗುವುದಿಲ್ಲ, ಸಣ್ಣ ಹಿಡುವಳಿದಾರರು ಮಳೆಗಾಲಕ್ಕೆ ಬೇಕಾಗುತ್ತದೆ ಎಂದು ಇಟ್ಟುಕೊಳ್ಳದೆ ಎಷ್ಟೋ ಸಂದರ್ಭದಲ್ಲಿ ಮಾರಾಟಮಾಡಬೇಕಾಗುತ್ತದೆ. ಇವೊತ್ತು ನಮ್ಮ ಲೆವಿ ಪದ್ಧತಿ ಏನಾಗುತ್ತಿದೆ ಸಣ್ಣ ಹಿಡುವಳಿದಾರರಿಗೆ ಹೆಚ್ಚಿನ ವಿನಾಯಿತಿ ಕೊಟ್ಟು ದೊಡ್ಡ ದೊಡ್ಡ ಹಿಡುವಳಿದಾರರ ಕೈಯಿಂದ ಹೆಚ್ಚಿನ ಅಂಶವನ್ನು ಪೂರ್ತಿಯಾಗಿ ಸಂಗ್ರಹ ಮಾಡುವುದಕ್ಕೆ ಒಂದು ಲೆವಿ ಪದ್ಧತಿಯನ್ನು ಪರಿಶೀಲನೆ ಮಾಡಿ, ಆಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು ಇದು ಒಳ್ಳೆಯ ಮುಖ್ಯ ಅಂಶ. ಇನ್ನೊಂದು ಅಂಶ ಏನು ಎಂದರೆ ಇದರ ವಿತರಣೆ ಬಗ್ಗೆ ಕೂಡ ಮಾನ್ಯ ಭಾಸ್ಕರ್‌ಶೆಟ್ಟಿಯವರು ಈಗಾಗಲೇ ದಕ್ಷಿಣಕನ್ನಡ ಜಿಲ್ಲೆ ಬಗ್ಗೆ ಹೇಳಿದರು ಬರೀ ದಕ್ಷಿಣ ಕನ್ನಡ ಜಿಲ್ಲೆ ಒಂದೇ ಅಲ್ಲ ಎಲ್ಲಾ ಇಡೀ ಮೈಸೂರು ರಾಜ್ಯ ತೆಗೆದುಕೊಂಡರೆ ಹೋದವರ್ಷ ೧೪ ಸಾವಿರ ಫೇರ್‌ಪ್ರೈಸ್ ಡಿಪೋಗಳನ್ನು ನಡೆಸುತ್ತಿದ್ದಿರಿ, ಕಳೆದ ವರ್ಷ ಮತ್ತು ಈ ವರ್ಷದಲ್ಲಿ ಏಷ್ಟು ಹೆಚ್ಚಿಗೆ ೧೪,೯೮೧ ಫೇರ್‌ಪ್ರೈಸ್ ಡಿಪೋಗಳು, ಇದ್ದು, ಕಳೆದ ವರ್ಷ ೧೪,೨೭೮ ಫೇರ್ ಪ್ರೈಸ್ ಡಿಪೋಗಳು ಕೆಲವು ಫೇರ್‌ಪ್ರೈಸ್ ಡಿಪೋಗಳನ್ನು ಜಾಸ್ತಿ ಮಾಡಿದಿರಿ, ಅದನ್ನು ಎಲ್ಲಿ ಮಾಡಿದಿರಿ ಬೆಂಗಳೂರು ಡಿಸ್ಟ್ರಿಕ್‌ನಲ್ಲಿ ಹೋದವರ್ಷ ನಿಜವಾಗಿ ರೇಷನ್ ಕೊಡದೆ ಇದ್ದಂಥ ಪ್ರದೇಶಗಳಲ್ಲಿ ಮಾಡಿದ್ದೀರಿ, ನಿಜವಾಗಿ ನೋಡಬೇಕಾಗಿರುವುದು ಕರ್ನಾಟಕ ರಾಜ್ಯದಲ್ಲಿ ಎಲ್ಲಿ ಬೆಳೆ ವಿಪರೀತವಾಗಿ ಜಾಸ್ತಿಯಾಗಿದೆ, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ, ಅಂತಹ ಪ್ರದೇಶ ನಮ್ಮ ರಾಜ್ಯದಲ್ಲಿ ೧೯ ಜಿಲ್ಲೆಗಳ ಪೈಕಿ ೫ ಜಿಲ್ಲೆಗಳ ಕಡಿಮೆ ಬರುವ ಪ್ರದೇಶ, ಇನ್ನು ಉಳಿದ ೧೪ ಜಿಲ್ಲೆಗಳು ಹೆಚ್ಚು ಇರುವಂತ ಪ್ರದೇಶ. ಈಗ ಎಲ್ಲಾ ಜಿಲ್ಲೆಗಳಿಗೂ ಕೂಡ ರೇಷನ್ ಒದಗಿಸುವ ಕ್ರಮ ಕೈಗೊಳ್ಳಬೇಕು ನಾನು ಬರೀ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳುತ್ತಿಲ್ಲ, ಹೆಚ್ಚು ಉತ್ಪಾದನೆ ಆಗುತ್ತಾ ಇರತಕ್ಕ ಉಳಿದ ೧೪ ಜಿಲ್ಲೆಗಳಲ್ಲಿ ಸ್ಮಗಲ್ ಆಗುವುದರಿಂದ ತಾವು ಅಂತರ್ ಜಿಲ್ಲಾ ನಿರ್ಬಂಧ ಹಾಕಿದಿರಿ. ಈಗ ೧೪ ಜಿಲ್ಲೆಯಿಂದ ಯಾವ ಭಾಗದಲ್ಲೂ ಹೋಗುವುದಕ್ಕೂ ಅವಕಾಶ ಇಲ್ಲ. ಕಡಿಮೆ ಪ್ರದೇಶದಲ್ಲಿರತಕ್ಕ ಎಲ್ಲಾ ನಗರಸಭೆಗಳುಕೂಡ ಇವೊತ್ತು ಹೊಸದಾಗಿ ಪಂಚಾಯಿತಿಗಳು ಏನು ನಗರಸಭೆ ಮಾಡಿದ್ದಾರೆ ಅಂತಹ ಸಣ್ಣ ನಗರಗಳಿಗೆ ಸೀಮಿತ ಇಲ್ಲ ಈ ರೇಷನ್ ವಿತರಣೆ ಮಾಡುವಾಗ ಈ ವ್ಯವಸ್ಥೆ ಮಾಡಬೇಕು. ವಿತರಣೆ ಮಾಡುವಾಗಿ ಅಕ್ಕಿ ಅಷ್ಟೇ ಅಲ್ಲ, ಸೀಮೆ ಎಣ್ಣೆ, ಅವಶ್ಯ ಇರುವುದರಿಂದ ಕೃಷಿವಸ್ತುಗಳು ಅವಶ್ಯ ಇರುವುದರಿಂದ ಗೊಬ್ಬರ ಇತ್ಯಾದಿ ಕೂಡ ಕೊಡಬೇಕು. ಈಗ ತಾವು ಮೂರು ಕೆ.ಜಿ. ೪೨೫ ಗ್ರಾಂ ಅವಶ್ಯಕ ಇದೆ ಎಂದು ಲೆಕ್ಕ ಹಾಕಿದ ಮೇಲೆ ೪೨೫

ಗ್ರಾಂ ಅಷ್ಟು ಆಹಾರ ಧಾನ್ಯ ನಮ್ಮ ರಾಜ್ಯದಲ್ಲಿ ೨೦. ೪೨೫ ಗ್ರಾಂ ಆಹಾರಧಾನ್ಯ ಪ್ರತಿದಿವಸ ಒದಗಿಸುವುದು ನಮ್ಮ ಜವಾಬ್ದಾರಿ. ಎಷ್ಟು ಬೇಕು ಅಷ್ಟು ಸಂಗ್ರಹ ಮಾಡಿ ಈ ರೀತಿ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ ಎಂ. ಘಾಡಿ(ಹಳಿಯಾಳ).—ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಆಹಾರ ಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ಸಮರ್ಥಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಜಗತ್ತಿನ ಮೇಲೆ ಮಾನವ ಮಾನವನಾಗಿ ಬಾಳಬೇಕಾದರೆ ಅತ್ಯವಶ್ಯವಾದ ಐದು ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕಾಗುತ್ತದೆ. ಆಶ್ರಯ, ಆಹಾರ, ಬಟ್ಟೆ ಈ ಮೂರು ಆವಶ್ಯತದನಂತರ ಅವಶ್ಯ ಶಿಕ್ಷಣ. ಆಹಾರ ಮಹತ್ವವಾದ ವಿಷಯ. ಕೆಲವರು ಮಹಾತ್ಮರು ಹೆಚ್ಚೆಚ್ಚು ಆಹಾರವನ್ನು ಬೆಳಸಿರಿ ಇಲ್ಲವೆ ಹಾಳಾಗುವಿರಿ. ಕಡಿಮೆ ಮಕ್ಕಳನ್ನು ಪಡೆಯಿರಿ ಇಲ್ಲವೆ ಹಾಳಾಗುವಿರಿ, ಎರಡು ಪರಸ್ಪರ ಹೊಂದಾಣಿಕೆ ಮಾದುದು ಕಂಡು ಬರುತ್ತದೆ, ಕಾರಣ ಹುಟ್ಟಿದ ಕೂಸಿಗೆ ತಕ್ಷಣ ಆಹಾರ ಬೇಕಾಗುತ್ತದೆ. ಆದೇ ಕೂಸು ಆಹಾರ ಸಂಪಾದನೆ ಮಾಡಬೇಕಾದರೆ ೧೦—೧೨ ವರ್ಷ ಬೇಕಾಗುತ್ತದೆ. ಮೊದಲಿನ ಜನಸಂಖ್ಯೆ ಈಗಿನ ಜನಸಂಖ್ಯೆ ನೋಡಿಸರೆ ಮೂರು ನಾಲ್ಕು ಪಟು ಜನಸಂಖ್ಯ ಬೆಳಿದಿದ್ದಾರೆಂದು ಕಂಡು ಬರುತ್ತದೆ. ಈ ಲ್ಯಾಂಡ್ ಅಂಡರ್ ಕಲ್ಟಿವೇಷನ್ ಮೊದಲಿಗಿಂಥ ಒಂದೂವರೆ ಪಟ್ಟು ಹೆಚ್ಚಾಗಿರುವುದು ಕಂಡು ಬರುತ್ತದೆ. ಮೊನ್ನೆ ಅಧ್ಯಕ್ಷಿಣಿಯರು ಎರಡು ಸೆಕೆಂಡಿಗೆ ಒಂದು ಕೂಸು ಹುಟ್ಟುತ್ತದೆ ಎಂದು ಹೇಳಿದರು. ಇವೊತ್ತು ಈ ದೃಷ್ಟಿಯಿಂದ ಜನಸಂಖ್ಯೆ ಬೆಳೆಯುತ್ತಾ ಇದೆ, ಆಹಾರ ಉತ್ಪನ್ನ ಕಡಿಮೆಯಾಗುತ್ತಾ ಇದೆ. ಎರಡು ಇಂಬ್ಯಾಲೆನ್ಸ್ ಇರುವುರಿಂದ ಆಹಾರದ ಕೊರತೆ ಹೆಚ್ಚಾಗುತ್ತದೆ. ಈ ಆ ಎರದ ಕೊರತೆ ನಮ್ಮ ದೇಶಕ್ಕೆ ಅಷ್ಟೇ ಅಲ್ಲ, ಜಗತ್ತಿನಲ್ಲಿ ದೊಡ್ಡ ದೊಡ್ಡ ದೇಶಗಳಲ್ಲೂ ಸಹ ಈ ರೋಗ ತಗಲಿ ಕೊಂಡಿದೆ ಅಮೆರಿಕ, ರಷ್ಯ, ಚೈನ, ಜಪಾನ್. ಮೊದಲು ಅಮೆರಿಕದಲ್ಲಿ ಗೋದಿಯನ್ನು ಹಂದಿಗಳಿಗೆ ಹಾಕುತ್ತಿದ್ದರು. ಆದರೆ ಇವೊತ್ತು ಗೋದಿ ಬೆಳೆದದ್ದು ಸಾಕಾಗುವುದಿಲ್ಲ, ಅಂತಹ ಪರಿಸ್ಥಿತಿ ಜಗತ್ತಿನಲ್ಲಿ ಇರುವಾಗ ನಮ್ಮ ದೇಶದಲ್ಲಿ ಇಂತಹ ಪರಿಸ್ಥಿತಿ ಬಂತು: ಮತ್ತು ಇದರಲ್ಲಿ ಇಂಬ್ಯಾಲೆನ್ಸ್ ಇರುವುದರಿಂದ ನಮ್ಮ ಮಾನ್ಯ ಮಿತ್ರರು ಸದಸ್ಯರಾದಂಥ ಕಕಿಲಾಯ ಅವರು ೪೨೫ ಗ್ರಾಂ ಕೊಡಬೇಕು ಎಂದು ಏನು ಹೇಳಿದರು ಇಷ್ಟು ಆಹಾರ ಧಾನ್ಯ ಒದಗಿಸಬೇಕಾದರೆ ನಮ್ಮಲ್ಲಿ ಆಹಾರ ಇರಬೇಕಾಗುತ್ತದೆ, ಅದನ್ನು ಕೊಡಬೇಕಾಗುತ್ತದೆ ಮತ್ತು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುತ್ತದೆ.

4-00 P.M.

ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಹೇಳಿದ್ದು ನನಗೆ ನೆನಪು ಬರುತ್ತಾಇದೆ. ಅದೇನೆಂದರೆ ಎಲ್ಲರೂ ತಮ್ಮ ರೊಟ್ಟಿಗಾಗಿ ದುಡಿದರೆ ಎಲ್ಲರಿಗೂ ಸಾಕಷ್ಟು ಆಹಾರ ಮತ್ತು ಸಾಕಷ್ಟು ವಿಶ್ರಾಂತಿ ದೊರಕುವುದು ; ಆಗ ಜನಸಂಖ್ಯೆ ಹೆಚ್ಚೀತು ಎಂಬ ಕೂಗು ಇರುವುದಿಲ್ಲ; ಸಂಕಟ ರೋಗ ರುಜಿನ ಇರುವುದಿಲ್ಲ : ಇಂಥ ದುಡಿಮೆಯೇ ಉನ್ನತವಾದ ತ್ಯಾಗ ; ಇದು ಜನಸಾಮಾನ್ಯರ ಕಲ್ಯಾಣಕಾಗಿ ಪ್ರೇಮದ ದುಡಿಮೆ ಆಗುವುದು. ಆಗ, ಅವ ಬಡವ ಬ ದವ ಉಚ್ಚ–ನೀಚ. ಸ್ಪೃಶ್ಯ–ಅಸ್ಪೃಶ್ಯ ಎಂಬ ಭೇದ ಭಾವ ಉಳಿಯುವುದಿಲ್ಲ ಎಂದು ಹೇಳಿದ್ದಾರೆ. ಈ ಪ್ರಕಾರ ನಮಗೆಲ್ಲರಿಗೂ ದುಡಿಯುವ ಅವಕಾಶ ಸಿಕ್ಕಿದರೆ, ಈಗ ಇರುವ ಆಹಾರ ಸಮಸ್ಯೆ ಇರುವುದಿಲ್ಲ ಎಂದು ಹೇಳುತ್ತೇನೆ. ಆದರೆ, ನಮ್ಮಲ್ಲಿ ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ, ನಿರುದ್ಯೋಗ ಎನ್ನುವುದು ತಾಂಡವಾಡುತ್ತಾ ಇದೆ. ಎಲ್ಲರಿಗೂ ದುಡಿಯುವ ಅವಕಾಶ ಸಿಗುತ್ತಾ ಇಲ್ಲ. ಆದರೆ, ದುಡಿಯುವ ಜನರಿದ್ದರೂ ಕೂಡ ಇವತ್ತಿನ ದಿವಸ ನಿರುದ್ಯೋಗ ಎನ್ನುವುದು ಕಂಡುಬರುತ್ತಾ ಇದೆ. ನಮ್ಮ ದೇಶದಲ್ಲಿ ಇವತ್ತಿನ ದಿವಸ ದುಡಿಯುವ ಪ್ರವೃತ್ತಿ ಕಡಿಮೆಯಾಗುತ್ತಾ ಇದೆ. ಜಪಾನ್ ಜರ್ಮನ್ ಮುಂತಾದ ಹೊರ ದೇಶಗಳಲ್ಲಿ ದುಡಿಯುವ ಪ್ರವೃತ್ತಿ ಹೆಚ್ಚು ಕಂಡುಬರುತ್ತಾ ಇದೆ ನಮ್ಮಲ್ಲಿ ಆಲಸ್ಯ ಎನ್ನುವುದು ಜಾಸ್ತಿಯಾಗುತ್ತಾ ಇದೆ. ಈ ಸಂದರ್ಭದಲ್ಲಿ ನನಗೆ ಒಂದು ಸರ್ವಜ್ಞನ ವಚನ ಜ್ಞಾಪಕಕ್ಕೆ ಬರುತ್ತದೆ :—ಹಗರದ ಎತ್ತಿಗೆ, ಬರಡಾದ ಹಯನಾಗೆ ಹರಟೆ ಹೊಡೆಯುವ ಮಗನಾಗೆ, ಹೊಲದಲ್ಲಿ ಕರಡವೇ ಬೆಳಗು ಸರ್ವಜ್ಞ [ಇದರ ಅರ್ಥ ಏನೆಂದರೆ, ಹೊಲದಲ್ಲಿ ಹಗರದಂಥ ಎತ್ತುಗಳು_ಮನೆಯಲ್ಲಿ ಹಾಲು ಕೊಡದಂಥ ಎಮ್ಮೆ ಆಕಳು ; ಹಾಳು ಹರಟೆಯಲ್ಲಿ ವೇಳೆ ಕಳೆಯುವಂತೆ ಮಗನಿದ್ದರೆ ಹೊಲದಲ್ಲಿ ಹುಲ್ಲಿನ ಹೊರತು ಯಾವ ಬೆಳೆಯೂ ಬೆಳೆಯುವುದಿಲ್ಲ ಎಂದು. ಇದನ್ನು ಸರ್ವಜ್ಞರವರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ, ನಮ್ಮಲ್ಲಿ ದುಡಿಯುವ ಪ್ರವೃತ್ತಿ ಹೆಚ್ಚು ಹೆಚ್ಚು ಇರಬೇಕಾಗುತ್ತದೆ ಆದರೆ, ದುಡಿಯುವುದಕ್ಕೆ ನಮ್ಮ ಸರ್ಕಾರ ಏನು ಪ್ರೋತ್ಸಾಹವನ್ನು ಕೊಟ್ಟಿದೆ ಎಂದು ನೋಡಿದರೆ, ಇವತ್ತಿನ ದಿವಸ ರೈತನ ಗೋಳು ಹೇಳತೀರದಾಗಿದೆ.

ಕಾರವಾರ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶದಲ್ಲಿ ತರೀ ಮತ್ತು ಖುಷ್ಕಿ ಭೂಮಿಯನ್ನು ತೆಗೆದುಕೊಂಡರೆ ಕುದುರೆ ಮತ್ತು ಕತ್ತೆ ಈ ಎರಡನ್ನೂ ಒಂದೇ ಮಾಡಿದ್ದಾರೆ : ಸರಕಾರದವರು ಇದರಲ್ಲಿ ಯಾವ ಭೇದ ಭಾವವನ್ನೂ ಮಾಡಿಲ್ಲ. ಉದಾಹರಣೆಗಾಗಿ ತೆಗೆದುಕೊಂಡರೆ, ೧೦ ಎಕರೆ ತರಿ, ೧೦ ಎಕರೆ ಖುಷ್ಕಿ ಜಮೀನು ಇದೆ ಎಂದು ಇಟ್ಟುಕೊಳ್ಳೋಣ. ತರೀ ಒಂದು ಎಕರೆ, ೬ ಕ್ವಿಂಟಾಲ್, ೬೦ ಕ್ವಿಂಟಾಲ್ ಖುಷ್ಕಿ ಮೂರು ಕ್ವಿಂಟಾಲ್, ೩೦ ಕ್ವಿಂಟಾಲ್ ಈ ಲೆವಿ ಕೊಡುವುದು ನೋಡಿದರೆ ಎರಡೂ ಒಂದೇ ಸಮ ಇರುವುದರಿಂದ, ೨೦–೨೫ ಕ್ವಿಂಟಾಲ್ ಲೆವಿ ಕೊಡಬೇಕಾಗುತ್ತದೆ ಇಷ್ಟೆಲ್ಲಾ ಕೊಟ್ಟರೆ ಅವನಿಗೆ ೫ ಕ್ವಿಂಟಾಲ್ ಉಳಿಯುತ್ತದೆ. ಬೀಜದ ಖರ್ಚು ಮತ್ತು ಇತರೆ ಖರ್ಚು ತೆಗೆದಲ್ಲಿ ಅವನಿಗೆ ಏನೂ ಕೊನೆಗೆ ಉಳಿಯುದಂತಾಗುತ್ತದೆ. ಎಷ್ಟೋ ಸಲ ಮಹಾ ಶಿವರಾತ್ರಿಯಂದು ಉಪವಾಸ ಇರುವ ಪರಿಸ್ಥಿತಿ ಕಂಡುಬರುತ್ತದೆ. ಈ ರೀತಿ ಲೆವಿ ಹಾಕುವುದು ತಪ್ಪು ಎಂದು ನಾನು ಪದೇ ಪದೇ ಸರಕಾರದ ಗಮನಕ್ಕೆ ತಂದಿದ್ದೇನೆ. ಖುಷ್ಕಿ ಮೇಲೆ ಕಡಿಮೆ ಮಾಡಿರಿ ಎಂದು ಹೇಳಿದ್ದೇನೆ ; ಆದರೆ, ಸರಕಾರದವರು ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಲೆವಿ ವಸೂಲಿಗೆ ಡಿಮ್ಯಾಂಡ್ ನೋಟಿಸ್ ಬಂದಕೂಡಲೇ ರೈತರು ಅರ್ಜಿ ಕೊಡುತ್ತಾರೆ, ನಮ್ಮ ಬೆಳೆ ಹಾಳಾಗಿದೆ, ಈ ವರ್ಷ ಲೆವಿಯನ್ನು ಕಡಿಮೆ ಮಾಡಿ ಎಂದು ಆದರೆ ಅಧಿಕಾರಿ ಜನ ಏನು ಮಾಡುತ್ತಾರೆ ಎಂದರೆ, ತಕ್ಷಣ ಅಲ್ಲಿಗೆ ಬಂದು ನೋಡಿ ಏನಾಗಿದೆ ಎಂದು ನೋಡುವುದಿಲ್ಲ ಬೆಳೆಗಳನ್ನು ಕಟಾವ್ ಮಾಡಿದ ಮೇಲೆ ಬಂದು ಕಾನೂನಿನಲ್ಲಿ ಇದ್ದರೂ ಕಾಯಿದೆಯಲ್ಲಿ ಇದ್ದರೂ, ಇದನ್ನು ಕಡಿಮೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿಬಿಡುತ್ತಾರೆ. ಅಂತೂ ಅವರು ಲೆವಿಯನ್ನು ಕಡಮೆ ಮಾಡುವ ಪ್ರಶ್ನೆಗೇ ಹೋಗುವುದಿಲ್ಲ. ಇದು ದುರ್ದೈವದ ಸಂಗತಿ ಎಂದು ನಾನು ಹೇಳಬೇಕಾಗಿದೆ. ಲೆವಿ ಕೊಟ್ಟರೂ ರೈತರ ಕಷ್ಟಗಳು ತಪ್ಪುವುದಿಲ್ಲ. ೩೦ ಕಿಲೋ ಅಥವಾ ಅರ್ಧ ಕ್ವಿಂಟಾಲ್ ಧಾನ್ಯವನ್ನು ಮಿಲ್ಲಿಂಗ್ ಮಾಡಿಸಬೇಕಾದರೆ ತಹಶೀಲ್ದಾರರಿಂದ ಪರ್ಮಿಟ್ ಬೇಕಾಗುತ್ತದೆ, ಈ ಪರ್ಮಿಟನ್ನು ತಹಶೀಲ್ದಾರರಿಂದ ಪಡೆದುಕೊಳ್ಳಬೇಕಾದರೆ, ೧೦–೧೫ ಸಲ ಅವರಲ್ಲಿಗೆ ತಿರುಗಾಡಬೇಕಾಗುತ್ತದೆ. ಹಾಗೇನಾದರೂ ಪರ್ಮಿಟ್ ಇಲ್ಲದೇ ತೆಗೆದುಕೊಂಡು ಹೋದರೆ, ಪೋಲೀಸರ ಕಾಟ ಅವನ ಮೇಲೆ ಕೇಸು ಹಾಕುತ್ತಾರೆ. ಲಾರಿ ಗಟ್ಟಲೆ ಭತ್ತ ಹೋಗುತ್ತದೆ, ಆದರೆ, ಅವರ ಮೇಲೆ ಯಾವ ಕೇಸನ್ನೂ ಹಾಕುವುದಿಲ್ಲ. ಪೋಲೀಸರ ಅಧಿಕಾರಿಗಳು ಶಾಮೀಲಾಗಿ ವ್ಯವಹಾರ ನಡೆಸುತ್ತಾರೆ ಆದರೆ, ಸಣ್ಣ ಪುಟ್ಟ ರೈತರು ತೆಗೆದುಕೊಂಡು ಹೋಗತಕ್ಕ ಭತ್ತವನ್ನು ಹಿಡಿಯುತ್ತಾರೆ. ಚೆಕ್ ಪೋಸ್ಟಿನಲ್ಲಿರುವವರು ಮಹಾತ್ಮರು, ಚೆಕ್ ಇಲ್ಲದೇ ಅವರಿಗೆ ದುಡ್ಡು ಸಿಕ್ಕುತ್ತದೆ ! ಇಂತಹ ನೌಕರಿ ಸಿಕ್ಕಬೇಕಾದರೆ ಅವರಿಗೆ ಯಾವ ಪುಣ್ಯವೋ ನನಗೆ ಗೊತ್ತಾಗುವುದಿಲ್ಲ ಇನ್ನೊಂದು ಉದಾಹರಣೆ ಹೇಳಬೇಕೆಂದರೆ ಈ ಅಧಿಕಾರಿಗಳು ಮತ್ತು ವ್ಯಾಪಾರಸ್ಥರು ಶಾಮೀಲಾಗಿದ್ದಾರೆ ಎಂದರೆ, ಹಳಿಯಾಳದಲ್ಲಿ ಕನ್‌ಸ್ಯೂಮರ್ ಸೊಸೈಟಿ ಎಂದು ಒಂದು ಇದೆ, ಹಿಂದಿನ ತಹಶೀಲ್ದಾರರು ಸೊಸೈಟಿಗೆ ಬೋಗಸ್ ಪರ್ಮಿಟ್ ಇಷ್ಯೂ ಮಾಡಿ ಅದನ್ನು ವ್ಯಾಪಾರಸ್ಥರು ತೆಗೆದುಕೊಂಡಾಗ, ನಮ್ಮ ಕಾರ್ಯಕರ್ತರು ಹಿಡಿದರು. ಹಿಡಿದು ಸರಕಾರಕ್ಕೆ ಒಪ್ಪಿಸಿದರು. ಆದರೆ, ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ನಾನು ಇದನ್ನು ಸರಕಾರದ ಗಮನಕ್ಕೆ ೨–೩ ಸಲ ತಂದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಹಳಿಯಾಳದಿಂದ ಸುದ್ದಿ ಬಂದಿದೆ, ಅವನ ಮೇಲಿನ ಕೇಸನ್ನು ವಿತ್‌ಡ್ರಾ ಮಾಡುತ್ತಾರೆ ಎಂದು. ಇದು ಬಹಳ ದುರ್ದೈವ. ನಮ್ಮ ಕಾರ್ಯಕರ್ತರು ಅಕ್ಕಿಲಾರಿ ಹಿಡಿದುದನ್ನು ಫೋಟೋ ತೆಗೆದು ಅರ್ಜಿ ಕೊಟ್ಟು ಸಂಬಂಧಪಟ್ಟ ಮಂತ್ರಿಗಳಿಗೆ ಕೊಟ್ಟರೂ ಸಹ ಅವರಿಂದ ಏನೊಂದು ಜವಾಬು ನನಗೆ ತಿಳಿದುಬರಲಿಲ್ಲ ಇದು ಬಹಳ ದುರ್ದೈವದ ಸಂಗತಿ, ಫುಡ್ ಅಡ್ವೈಸರಿ ಕಮಿಟಿಯಲ್ಲಿ ಸದಸ್ಯರು ಏನು ಇದ್ದಾರೆ, ಅವರಿಗೆ ಯಾವ ಅಧಿಕಾರವೂ ಇಲ್ಲ. ಬ್ಯಾಟರಿ ವಿಥೌಟ್ ಪವರ್ ಇದ್ದಹಾಗೆ ಇದ್ದಾರೆ. ಅವರಿಗೆ ಚಾರ್ಜ್ ಮಾಡುವುದಕ್ಕೂ ಅಧಿಕಾರ ಇಲ್ಲ, ಡಿಸ್ಚಾರ್ಜ್ ಮಾಡುವುದಕ್ಕೂ ಅಧಿಕಾರವಿಲ್ಲ. ಈಗ ಫುಡ್ ಅಡ್ವೈಸರಿ ಕಮಿಟಿ ಮಾಡುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ, ಅದರಲ್ಲಿ ಒಬ್ಬ ನಾನ್ ಅಫಿಷಿಯಲ್ ಛೇರ್ಮನ್ ಆಗಿ ಇಡಬೇಕೆಂದು ಹೇಳುತ್ತೇನೆ. ಇದರಲ್ಲಿ ತಹಶೀಲ್ದಾರ್ ಏನು ಇದ್ದಾರೆ, ಅವರು ಬಹಳ ಮಿಸ್ಚೀಫ್ ಮಾಡುತ್ತಾರೆ. ತಮಗೆ ಬೇಕಾದವರಿಗೆ ಕೊಟ್ಟುಕೊಳ್ಳುತ್ತಾರೆ, ಇದರಿಂದ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದುದರಿಂದ, ಇದನ್ನೆಲ್ಲಾ ಲಕ್ಷ್ಯದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಸರ್ವಜ್ಞನ ವಚನ ನನಗೆ ಜ್ಞಾಪಕಕ್ಕೆ ಬರುತ್ತಾ ಇದೆ. ಅಧಿಕಾರಕ್ಕೆ ಬೆಲೆ ಕೊಡುವುದು ಜನರ ಕರ್ತವ್ಯ, ಜನತೆಯ ಅಭಿಪ್ರಾಯಕ್ಕೆ ಬೆಲೆ ಕೊಡುವುದು ಅಧಿಕಾರಿಗಳ ಕರ್ತವ್ಯ. ಇದು ಬಹಳ ಅರ್ಥಗರ್ಭಿತವಾದ ಮಾತು. ಇದನ್ನು ಅಧಿಕಾರಿಗಳು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ ನಾನು ಇವತ್ತಿನ ದಿವಸ ಸರಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ, ಹಳ್ಳಿಯ ಜನರು ಬಹಳ ಜಾಗೃತರಾಗಿದ್ದಾರೆ, ಎಚ್ಚೆತ್ತಿದ್ದಾರೆ. ಹಳ್ಳಿಯ ಜನರಿಗೆ ಇವತ್ತಿನ ದಿವಸ ಗೋಧಿ ಸಿಕ್ಕುವುದಿಲ್ಲ, ಜೋಳ ಸಿಕ್ಕುವುದಿಲ್ಲ, ಮೈದಾ ಸಿಕ್ಕುವುದಿಲ್ಲ, ಒಂದು ಲೀಟರು ಸೀಮೆ ಎಣ್ಣೆ ಕೂಡ ಸಿಕ್ಕುವುದಿಲ್ಲ. ಹಳಿಯಾಳ ತಾಲ್ಲೂಕಿನ ಜನರಿಗೆ ಇವತ್ತಿನ ದಿವಸ ಏನೂ ಸಿಕ್ಕುತ್ತಾ ಇಲ್ಲ. ದುರ್ದೈವದ ಸಂಗತಿ ಎಂದರೆ, ಬಟ್ಟೆ ಸ್ವಪ್ನದಲ್ಲಿ ನೋಡಬೇಕೆಂದರೂ ಅಲ್ಲಿ ಸಿಕ್ಕುವು

ದಿಲ್ಲ. ಇಂಥಾ ದುರ್ದೈವದ ಪರಿಸ್ಥಿತಿ ಇಂದು ನಮಗೆ ಒದಗಿಬಂದಿದೆ. ಆದರೆ ಒಂದು ಕಾರ್ಡಿಗೆ ಒಂದು ಕೇಜಿ ಸಕ್ಕರೆ ಸಿಕ್ಕುತ್ತದೆ. ಒಂದೇ ಕಿಲೋ ಕೊಡುವುದು. ಹೆಚ್ಚಿಗೆ ಕೊಡುವುದೇ ಇಲ್ಲ. ನೆರೆ ರಾಜ್ಯಗಳಲ್ಲಿ ಇವತ್ತಿನ ದಿವಸ ನೋಡಿದರೆ ವಿಪುಲವಾಗಿ ಸಕ್ಕರೆಯನ್ನು ಕೊಡುತ್ತಾರೆ. ಬಹುಶಃ ಸರಕಾರದವರು ಕಾರ್ಡುದಾರರು ಡಾಯಬಿಲಿಟೀಸ್‌ಗೆ ತುತ್ತಾಗಿದ್ದಾರೆಂದು ತಿಳಿದುಕೊಂಡಿದ್ದಾರೋ ಏನೋ ! ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೂ, ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಡೆಲಿಗೇಷನ್ ಹೋಗಿ ವಿಷಯ ತಿಳಿಸಿದೆವು, ಎಲ್ಲಾ ಶಾಸಕರೂ ಹೋಗಿ ಕನ್‌ವಿನ್ಸ್ ಮಾಡಿದೆವು. ಆದರೆ, ಅವರು ನಮ್ಮ ಪ್ರಾರ್ಥನೆಗೆ ಕಿವಿಗೊಡಲಿಲ್ಲ. ನಾವು ತಿಳಿದುಕೊಂಡಿದ್ದೆವು, ಹೆಣ್ಣು ಮಕ್ಕಳ ಹೃದಯ ಮೆತ್ತಗೆ ಇರುತ್ತದೆ, ಕರಗಿಹೋಗುತ್ತದೆ ಎಂದು. ಆದರೆ, ನಮ್ಮ ಆಹಾರ ಮಂತ್ರಿಗಳ ಹೃದಯ ಗಂಡಸಿನಹೃದಯಕಿಂತಲೂ ಬಹಳ ಗಟ್ಟಿ, ಕಲ್ಲಿನಂತಿದೆ. ಇದು ಬಹಳ ಶೋಚನೀಯವಾದ ಪರಿಸ್ಥಿತಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಿಂದ ನಮಗೆ ಏನು ಕಂಡುಬರುತ್ತದೆಎಂದರೆ, ಉತ್ತರ ಕನ್ನಡ ಜಿಲ್ಲೆಯವರು ಬೊಂಬಾಟ್ ಮಾಡಿದರೂ, ನಮ್ಮ ಹಳಿಯಾಳದವರೂ, ಸೌಮ್ಯ ಜನರು. ಬೊಂಬಾಟ್ ಮಾಡುವುದಿಲ್ಲ. ಕಾರವಾರದ ಬಗ್ಗೆ ತಮಗೆ ಏನು ಪ್ರೇಮ ಇದೆಯೋ, ಆದರ ಇದೆಯೋ ಅದು ನನಗೆ ಗೊತ್ತಾಗುವುದಿಲ್ಲ ಅವರಿಗೆ ಅಷ್ಟು ಆಹಾರಧಾನ್ಯ ಸರಬರಾಜು ಮಾಡುತ್ತಿದ್ದಾರೆ. ಹಳಿಯಾಳ ಮತ್ತು ಮುಂಡಗೋಳ ಕಾರವಾರ ಜಿಲ್ಲೆಯ ಭತ್ತದ ಕಣಜಗಳು. ಅಲ್ಲಿ ಒಂದು ಲಕ್ಷ ಟನ್ ಪ್ರೊಕ್ಯೂರ್ ಮೆಂಟು ಆಗುತ್ತಾ ಇದೆ ಎಂದು ಕಂಡುಬರುತ್ತದೆ ಅಲ್ಲಿ ಸರ್ವೇಸಾಧಾರಣವಾಗಿ ಬೇರೆ ಯಾವುದೂ ಸಿಕ್ಕುವುದಿಲ್ಲ ನಮ್ಮ ಜಿಲ್ಲೆಯನ್ನು ಸರಕಾರದವರು ಕಡೆಗಣಿಸಿದ್ದಾರೆ, ಎಂದು ಬಹಳ ವಿಷಾದದಿಂದ, ನೊಂದ ಮನಸ್ಸಿನಲ್ಲಿ ಈ ಮಾತನ್ನು ಹೇಳುತ್ತಾ ಇದ್ದೇನೆ. ನನಗೆ ಹುಚ್ಚು ತುಘಲಕ್ ಮಹಮ್ಮದ್ ರಾಜ್ಯದ ನೆನಪಾಗುತ್ತಿದೆ. ಏಕೆಂದರೆ ಅಕ್ಕಿ ಹಳಿಯಾಳಕ್ಕೆ ಬಟ್ಕಳಾದಿಂದ ಬರಬೇಕಾಗುತ್ತದೆ. ಸಕ್ಕರೆಯಂತೂ ಗೌರಿಬಿದನೂರು, ಪಾಂಡವಪುರ, ಸಂಕೇಶ್ವರ, ಮಂಡ್ಯ-ಈ ಕಡೆಗಳಿಂದ ಬರುತ್ತದೆ. ಈ ದಿಶೆಯಲ್ಲಿ ಬಹಳ ಅನ್ಯಾಯವಾಗುತ್ತಾ ಇದೆ. ಕೊನೆಯದಾಗಿ ಆಹಾರ ಮಂತ್ರಿಗಳಿಗೆ ಅನ್ನಧಾತಾ ಸುಖೀಭವ ಎಂದು ಹೇಳಿ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ್) —ಮಾನ್ಯ ಉಪಾಧ್ಯಕ್ಷರೇ ಆಹಾರ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಯನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸರ್ಕಾರದ ಈ ಒಂದು ಆಹಾರದ ಪಾಲಿಸಿಯಿಂದಲೇ ಆಹಾರದ ಬಿಕ್ಕಟ್ಟು ಇಷ್ಟು ಆಗುವುದಕ್ಕೆ ಕಾರಣ ವಾಗಿದೆಂದು ಹೇಳಿದರೆ ತಪ್ಪಾಗಲಾರದು ಈ ಜಿಲ್ಲಾ ನಿರ್ಬಂಧವನ್ನು ಈ ಸರ್ಕಾರ ಘೋಷಿಸಿದ್ದರಿಂದ ಆಹಾರ ಪದಾರ್ಥಗಳ ಸಮಸ್ಯೆಯನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಜನ ಅನುಭವಿಸಬೇಕಾದ ಸಮಯ ಬಂದಿದೆ. ಮೊದಲು ಜಿಲ್ಲಾ ನಿರ್ಬಂಧ ಬರುವುದಕ್ಕೆ ಮುಂಚೆ ಇಷ್ಟು ಬಿಕ್ಕಟ್ಟು ಇರಲಿಲ್ಲ. ಇದರಿಂದ ಏನಾಗಿದೆ ಎಂದರೆ ಬೆಳೆಯುವ ರೈತನಿಗೇ ಹೆಚ್ಚಿನ ತೊಂದರೆಯಾಯಿತು ಮತ್ತು ಕೊಂಡು ತಿನ್ನುವವರಿಗೂ ಕೂಡ ಇದರಿಂದ ತೊಂದರೆಯಾಯಿತು. ಈಗ ಉದಾಹರಣೆಗಾಗಿ ಹೇಳುವುದಾದರೆ ರೈತ ಅವನು ವ್ಯವಸಾಯ ಮಾಡಬೇಕಾದರೆ, ಅವನು ಕೂಲಿಯವರನ್ನು ಕರೆದು ಕೊಳ್ಳಬೇಕಾದರೆ, ಆ ಕೂಲಿಯವರಿಗೆ ಅಹಾರ ಪದಾರ್ಥವಾದ ರಾಗಿ ಮತ್ತು ಜೋಳ ಈ ಆಹಾರ ಪದಾರ್ಥವನ್ನೂ ಕೊಡಬೇಕಾಗುತ್ತದೆ. ಅವರು ಸಹ ಈ ಆಹಾರ ಪದಾರ್ಥಗಳನ್ನು ಕೂಲಿಯ ಜೊತೆಗೇ ಕೇಳುವಂಥ ಸ್ಥಿತಿಗೆ ಬಂದಿದೆ. ಆ ರೈತ ಇದೆಲ್ಲವನ್ನೂ ಕೊಟ್ಟು. ಗೊಬ್ಬರ ಮತ್ತು ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಂಡು, ಈ ಎಲ್ಲಾ ಕಷ್ಟಗಳನ್ನು ಅನುಭವಿಸಿ ಕೊನೆಗೆ, ತಾನು ಕಷ್ಟಪಟ್ಟು ಬೆಳೆದಂಥ ಆಹಾರ ಪದಾರ್ಥವನ್ನು ಲೆವಿ ಮುಖಾಂತರಎಕರೆಗೆ ಇಷ್ಟಿಷ್ಟು ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ ಸರ್ಕಾರದವರಿಗೆ ಎಕರೆಗೆ ಇಷ್ಟಿಷ್ಟು ಎಂದು ಲೆವಿ ಕೊಟ್ಟಮೇಲಾದರೂ ಅವರು ಮುಕ್ತರಾದರೇ ಎಂದರೆ ಇಲ್ಲ. ಅವನು ತಾನು ಕಷ್ಟಪಟ್ಟು ಬೆಳೆದ ಪದಾರ್ಥವನ್ನು ಒಂದು ವರ್ಷಕ್ಕೆ ಬೇಕಾಗುವಷ್ಟನ್ನು ಮನೆಯಲ್ಲಿಟ್ಟು ಕೊಂಡರೆ ಪೋಲೀಸನವರು, ಸರ್ಕಾರಿ ಅಧಿಕಾರಿ ವರ್ಗದವರು ಅವನ ಮನೆಯನ್ನು ಜಫ್ತಿ ಮಾಡಿ ಆ ಪದಾರ್ಥವನ್ನು ತೆಗೆದುಕೊಂಡು ಇರತಕ್ಕಂಥ ಸನ್ನಿವೇಶವಿದೆ. ಇಷ್ಟೆಲ್ಲಾ ಕಿರುಕುಳವನ್ನು ಅನುಭವಿಸಿಕೊಂಡು ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ವ್ಯವಸಾಯದ ಖರ್ಚಿಗೆ ಮತ್ತಿತರ ಖರ್ಚುಗಳಿಗೆ ತನ್ನಲ್ಲಿರುವ ಹೆಚ್ಚಿನ ಆಹಾರ ಪದಾರ್ಥವನ್ನು ತೆಗೆದುಕೊಂಡು ಹೋಗಿ ಫ್ರೀ ಮಾರ್ಕೆಟ್‌ನಲ್ಲಿ ಮಾರುವ ಹಾಗಿಲ್ಲ. ಈ ನಿರ್ಬಂಧವಿರುವುದರಿಂದ, ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುವಂಥ ಇತರೇ ಸೋರ್ಸ್‌ಸ್ ಇರುವಂಥವರು ಏನು ಮಾಡುತ್ತಾರೆ ಹಳ್ಳಿಗಳಿಗೆ ಹೋಗಿ ಇರುವ ರೇಟ್‌ಗಳಿಗಿಂತಲೂ ಕಡಿಮೆ ರೇಟ್‌ನಲ್ಲಿ ಅಂದರೆ ೧೦-೨೦ ರೂ. ಕಡಿಮೆ ರೇಟ್‌ನಲ್ಲಿ ಅವರು ಕೊಂಡುಕೊಂಡು ಈ ನಿರ್ಬಂಧವನ್ನು ಸಹ ತಪ್ಪಿಸಿಕೊಂಡು ಅವರು ಮಾರಾಟ

ಮಾಡುತ್ತಾರೆ. ಇದರಿಂದ ರೈತ ಇಲ್ಲಿಯೂ ಸಹ ೧೮–೨೦ ರೂಪಾಯಿಗಳ ಕಡಿಮೆ ರೇಟಿಗೆ ಕೊಟ್ಟು ಹಣವನ್ನು ಕಳೆದುಕೊಳ್ಳುತ್ತಾನೆ. ಜಿಲ್ಲಾ ನಿರ್ಬಂಧವಿರುವುದರಿಂದ ಅವನು ಫ್ರೀ ಮಾರ್ಕೆಟ್‌ನಲ್ಲಿ ಮಾರುವುದಕ್ಕೂ ಅವಕಾಶವಿಲ್ಲದಂತಾಗಿದೆ. ಆದುದರಿಂದ ಜಿಲ್ಲಾ ನಿರ್ಬಂಧವನ್ನು ತೆಗೆದುಹಾಕಿ ರಾಜ್ಯಗಡಿ ಮಟ್ಟದಲ್ಲಿ ಬಿಗಿಯಾಗಿ ಹೆಚ್ಚು ರಾಜ್ಯದೊಳಗೆ ಮಾತ್ರ ನಿರ್ಭಂದವನ್ನು ತೆಗೆದು ಹಾಕಿದ್ದರೆ ಇಷ್ಟೊಂದು ತೊಂದರೆಯಾಗುತ್ತಾ ಇರಲಿಲ್ಲ. ಸರ್ಕಾರದ ಈಒಂದು ಪಾಲಿಸಿಇಂದ ಏನಾಗಿದೆ ಆಹಾರ ಪದಾರ್ಥಗಳನ್ನು ಬೆಳೆಯುವುದು ಕಡಿಮೆಯಾಗಿದೆ. ಈಗ ನಮಗಿಲ್ಲಿ ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟಿನಲ್ಲಿ ವರ್ಷೆವರ್ಷೇ ಎಷ್ಟು ಬೆಳೆ ಬರುತ್ತದೆ ಎಂಬುದು ಗೊತ್ತಾಗುತ್ತದೆ ನಾವು ಸ್ಟೇಟ್‌ಮಂಟ್‌ನ್ನು ನೋಡಿದರೆ ವರ್ಷೇವರ್ಷೇ ಕಮರ್ಷಿಯಲ್ ಕ್ರಾಪ್ಸ್ ಜಾಸ್ತಿಯಾಗುತ್ತಿದೆಯೇ ಹೊರತು ಫುಡ್ ಗ್ರೇನ್ಸ್ ಆಹಾರ ಪದಾರ್ಥಗಳು ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಜಿಲ್ಲಾ ನಿರ್ಬಂದವಿರುವುದರಿಂದ ತನಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಮಾತ್ರ ಬೆಳೆದುಕೊಂಡು ಬಾಕಿ ಕಮರ್ಷಿಯಲ್ ಕ್ರಾಪ್ಸ್‌ನ್ನು ಬೆಳೆದುಕೊಳ್ಳುತ್ತಿದ್ದಾರೆ. ಇವತ್ತು ನೀವು ಪಟ್ಟಣಗಳಲ್ಲಿ ಆಗಲೀ ಅಥವಾ ಬೇರೆ ಹಳ್ಳಿಗಳಲ್ಲಿ ಆಗಲೀ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುತ್ತಾ ಇಲ್ಲ. ಕೆಲವು ಪಟ್ಟಣಗಳಲ್ಲಿ ಮಾತ್ರ ಇನ್‌ಫಾರ್ಮಲ್ ರೇಷನ್ ಕೊಡುತ್ತಿದ್ದೀರಿಯೇ ಹೊರತು ಬಾಕಿ ಇತರ ನಗರಗಳಲ್ಲಿಯೇ ಆಗಲಿ, ಪಟ್ಟಣಗಳಲ್ಲಿ ಆಗಲೀ ಅಥವಾ ಹಳ್ಳಿಗಳಲ್ಲಿ ಆಗಲೀ ಯಾವ ಆಹಾರ ಪದಾರ್ಥಗಳನ್ನು ಒದಗಿಸುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಸರ್ಕಾರದವರಿಗೆ ಅದನ್ನು ಒದಗಿಸುವುದಕ್ಕೆ ಆಗುತ್ತಾ ಇಲ್ಲ. ಈಗ ನೀವು ಪಟ್ಟಣಗಳಲ್ಲಿ ಕೊಡುತ್ತಾ ಇರತಕ್ಕಂಥದ್ದು ಸುಮಾರು ೧ ತಿಂಗಳಿಗೆ ಒಬ್ಬರಿಗೆ ೬ ರಿಂದ ೮ ಕೇಜಿಯಷ್ಟು ಕೊಡುತ್ತೀರಿ, ಒಂದು ಕುಟುಂಬಕ್ಕೆ ಅದು ಏನೂ ಸಾಕಾಗುವುದಿಲ್ಲ. ಆದುದರಿಂದ ಅವರು ಹೆಚ್ಚಿಗೆ ಪದಾರ್ಥವನ್ನು ಹೊರಗಡೆ ಕೊಂಡುಕೊಳ್ಳಲೇಬೇಕಾಗುತ್ತದೆ. ಒಂದು ತಿಂಗಳಿಗೆ ೩೦ ದಿವಸದಲ್ಲಿ ನೀವು ಕೊಡತಕ್ಕಂಥ ಕಂಟ್ರೋಲ್ ಆರ್ಟಿಕಲ್ಸ್ ೨–೩ ದಿವಸಕ್ಕೆ ಆದರೆ ಬಾಕಿ ದಿವಸಗಳಿಗೆ ಅವನು ಹೆಚ್ಚಿನ ರೇಟನ್ನು ಕೊಟ್ಟುಕೊಂಡು ಕೊಳ್ಳಲೇ ಬೇಕಾಗಿದೆ. ಈರೀತಿ ಅವನು ಹೊರಗಡೆಗೆ ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಟ್ಟಮೇಲೆ ಸರ್ಕಾರದವರ ಉದ್ದೇಶ ಸಫಲವಾಗಲಿಲ್ಲ. ಆದುದರಿಂದ ಈಗ ಏನಾಗಿದೆ, ಈ ನಿರ್ಭಂದ ಇರುವುದರಿಂದಲೇ ಜಾಸ್ತಿ ತೊಂದರೆಯಾಗುತ್ತಿರುವುದು. ಇದು ಹೋಗಲಿ ಇವತ್ತು ಪ್ರೈಜಸ್ ಏನಾಗುತ್ತಿದೆ. ನೀವು ತಿಳಿದ ಹಾಗೆ ಅಕ್ಕಿ ಒಂದು ಕೆ. ಜಿ.ಗೆ ೧–೫೦ ಇದ್ದದ್ದನ್ನು ನೀವು ರೇಟನ್ನು ಪದೇ ಪದೇ ಹೆಚ್ಚಿಸಿಕೊಂಡು ಹೋಗುತ್ತಿರುವುದರಿಂದ, ಹೊರಗಡೆಗೂ ಕೂಡ ಬೆಲೆಗಳು ಆಟೋಮ್ಯಾಟಿಕ್ ಆಗಿ ರೇಟ್ಸ್‌ಗಳು ಮೇಲೇರಿಕೊಂಡು ಹೋಗುತ್ತಿದೆ. ಈ ರೇಟಿನ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ಹೊರಗಡೆಯವರು ಕಾಂಪಿಟೀಷನ್ ಬರದ ಹಾಗೆ ಮಾಡಬೇಕು. ಎಸ್ಟಾಬ್ಲಿಶ್‌ಮೆಂಟ್ ಚಾರ್ಜ್‌ಸನ್ನು, ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ಸ್‌ನ್ನು ಇವೆಲ್ಲವನ್ನೂ ಕಡಿಮೆ ಮಾಡಿ ಲೆವಿಯನ್ನು ಕೊಂಡುಕೊಳ್ಳುವಾಗಲೂ ಸಹ ೭೫–೮೧ ರೂಪಾಯಿಗಳಿಗೆ ಕೊಂಡು ಬಳಕೆದಾರರಿಗೆ ಕೊಡುವಾಗ ೧–೬೫ಕ್ಕೋ ಅಥವಾ ಒಳ್ಳೆಯ ರೈಸಿಗೆ ೨–೦೦ರೂ ಗಳನ್ನೋ ಫಿಕ್ಸ್ ಮಾಡಿದಮೇಲೆ ಹೊರಗಡೆಯವರು ಇದಕ್ಕಿಂತ ಜಾಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿ ಸರ್ಕಾರದವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೀರಿ, ಫೇರ್ ಪ್ರೈಜ್ ಡಿಪೋಗಳ ಮುಖಾಂತರ ಆಹಾರ ಪದಾರ್ಥಗಳನ್ನು ಇಷ್ಟಿಷ್ಟನ್ನು ಇಂದಿಂಥ ನಗರಗಳಲ್ಲಿ ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಆದರೆ ಸಾವಿರಾರು ಜನ ಲಕ್ಷಾಂತರ ಜನ ವರ್ತಕರುಆಹಾರ ಪದಾರ್ಥಗಳನ್ನು ಮಾರುತ್ತಿರುವ ಕಡೆ ಕೇವಲ ೮ ನೂರು ೯ ನೂರು, ಸೊಸೈಟಿಗಳ ಮುಖಾಂತರಫೇರ್ ಪ್ರೈಜ್ ಶಾಪ್ಸ್ ಮುಖಾಂತರ ಆಹಾರ ಪದಾರ್ಥಗಳನ್ನು ಜನಗಳಿಗೆ ಒದಗಿಸಿಕೊಟ್ಟರೆ ಸಾಲದೆಂದು ಹೇಳುತ್ತೇನೆ.

ಹೊರಗಡೆಯವರು ಮಾರುವುದಕ್ಕೆ ಕೌಂಟರಾಗಿ, ಸರ್ಕಾರದವರು ಹೆಚ್ಚಿನ ಡಿಪೋಗಳನ್ನೂ ಫೇರ್‌ಪ್ರೈಸ್ ಡಿಪೋಗಳನ್ನು ಹೆಚ್ಚಿನ ರೀತಿಯಲ್ಲಿ ಹೆಚ್ಚಿಸಿಕೊಡಬೇಕಾಗಿತ್ತು. ಅದು ಬೆಳಿಸುವುದಕ್ಕೆ ಅವಕಾಶ ಆಗಲಿಲ್ಲ. ಸರ್ಕಾರದ ನೀತಿಯಿಂದಾಗಿ ಅದು ಬದಲಾವಣೆಯಾಗಿಲ್ಲ. ಕೊನೆಗೆ ಮನಾಪಲ್ಲಿ ವರ್ತಕರಿಗೆ ಕೊಡಬೇಕು. ಹೊರಗಡೆ ಜನರು ಕೊಂಡುಕೊಳ್ಳಬೇಕು ಮತ್ತು ಜೀವನ ಮಾಡಬೇಕು ಹಿಗಾಗಿದೆ. ಅಂತರ ಜಿಲ್ಲಾ ನಿರ್ಬಂಧ ಇರುವುದರಿಂದ ಅಲ್ಲಿಯವರೆಗೆ ಭ್ರಷ್ಟಾಚಾರ, ಲಂಚಗಳು ತುಂಬಿಹೋಗಿ, ಸರ್ಕಾರದವರು ನ್ಯಾಯವಾಗಿ ಇರುವ ನಿರ್ಬಂಧದಲ್ಲಿ ಜನಗಳಿಗೆ ಸರಿಯಾಗಿ ಒದಗಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದುಕಡೆ ಪೋಲೀಸ್ ಡಿಪಾರ್ಟಮೆಂಟ್, ಮತ್ತೊಂದು ಕಡೆ ಸರಕಾರದ ಸಿಬ್ಬಂಧಿ ಸೇರಿಕೊಂಡು ಅನುಕೂಲ ಪಡೆಯುವುದಕ್ಕೆ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಜನಗಳ ಇಂಟರೆಸ್ಟ್‌ನಿಂದ, ಸರ್ವೀಸ್ ಮೈಂಡಿನಿಂದ ಕೆಲಸಮಾಡದೇ ಇರುವುದರಿಂದ, ನಿಜವಾಗಿಯೂ ಸರ್ಕಾರದ ನೀತಿಯನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ಜನಗಳಿಗೆ ತೊಂದರೆ ಆಗುತ್ತಿದೆ. ಜಿಲ್ಲಾ ನಿರ್ಬಂಧ ಮಾಡಿದ ಮೇಲೆ ಜನಗಳಿಗೆ ಇಷ್ಟು ತೊಂದರೆಯಾದುದು. ಪದಾರ್ಥಗಳ ಬೆಲೆಯನ್ನು ಸರ್ಕಾರ ಜಾಸ್ತಿ ಮಾಡಿದ್ದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಇನ್ನೊಂದು ವಿಷಯ

ಲೆವಿ ಮುಖೇನ ಪ್ರೊಕ್ಯೂರ್‌ಮೆಂಟ್ ಎಷ್ಟು ಬಂದಿತು ಎಂದು ಹೇಳಿದ್ದಾರೆ. ಅನೇಕ ಸಾರಿ ನಾವು ನೋಡಿದ್ದೇವೆ, ಸಾವಿರಾರು ಫಲ್ಲ ಬತ್ತವನ್ನು ಮಿಲ್ಲುಗಳ ರೇಟ್ ಮಾಡಿ ವಹಿಸಿಕೊಂಡರು ಬ್ಲಾಕ್ ಮಾರ್ಕೆಟ್ ಹೋರ್ಡ್ಸ್ ಮಾಡಿದ್ದು ವಹಿಸಿಕೊಂಡರು, ಪತ್ರಿಕೆಗಳಲ್ಲಿ ಎಷ್ಟೋ ಸಾರಿ ಬಂದಿದೆ. ಶೇಖರಣೆ ಮುಖಾಂತರ ವಹಿಸಿಕೊಂಡ ದವಸ ಧಾನ್ಯಗಳು ಇವರ ವಶಕ್ಕೆ ಎಷ್ಟು ಬಂದಿತು ಎಂದರೆ, ಅದಕ್ಕೆ ಲೆಕ್ಕ ಇಲ್ಲ. ಲಂಚರುಷುವತ್ತು, ಭ್ರಷ್ಟಾಚಾರ ತುಂಬಿದೆ, ಸಣ್ಣಪುಟ್ಟವರನ್ನು ಹಿಡಿದು ತೋರಿಸಿ ದೊಡ್ಡ ದೊಡ್ಡವರನ್ನು ಹಾಗೆ ಬಿಟ್ಟು, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಮುಂದುವರಿದು ಬಿಟ್ಟು ಬಿಡುವುದು ಇದರಿಂದ ಗೊತ್ತಾಗುತ್ತದೆ. ಸ್ಟೇಟ್‌ಮೆಂಟ್ ಕೂಡ ಬಂದಿಲ್ಲ. ಒಟ್ಟಿನಲ್ಲಿ ಸರ್ಕಾರದ ನೀತಿಯಿಂದ ಜನಗಳು ಇವತ್ತಿನ ದಿವಸ ಕಷ್ಟ ಅನುಭವಿಸುತ್ತಿದ್ದಾರೆಯೇ ಹೊರತು, ನಿರ್ಬಂಧವನ್ನು ಫ್ರೀಮೂವ್‌ಮೆಂಟ್ ಬಿಟ್ಟರೆ ರಾಜ್ಯಮಟ್ಟದ ಗಡಿಯಲ್ಲಿ ಬಿಗಿ ಮಾಡಿದರೆ ಆಹಾರದ ಕೊರತೆ ಅಷ್ಟು ಇರುವುದಿಲ್ಲ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI PRABHAKAR TELKAR (KELGI).—Hon Deputy Speaker, while agreeing with and supporting Demand No. 43 put forward by the Food Minister, I want to suggest some things. It is no doubt correct that in India as well as in every State we are facing the food problem and we are also trying to see that the population is restricted. As my friend Mr. Ghadi just now opined the population of our country is accelerated and is increasing and therefore, family planning has been done by the Government. I had also suggested in 1972 to the Government that – as we know – in the whole world, India is such a country which has been taxed more and no area is left without taxing. I had also suggested in 1972 that in order to get some revenue as well as to stop this increase of population, we should tax every fourth child of a parent. If we tax them, naturally there will be some restriction on the population. While the population is increasing, we see that the land that has been available for cultivation is the same. I feel that unless we take to mechanisation in the agricultural area, no food production can be increased. In this regard, our government is trying its best to mechanise the agricultural operations and is trying to get more food production.

Regarding the procurement, I am concerned with Gulburga District, where we have got only dry land and with the procurement that has been made for jowar crop, we have got more land for rabi and the procurement that has been done in 1973–74 in Gulburga District shows that the achievement is only half of the target. The reason is this. The levy procurement is done as follows. For every one acre up to 10 acres, 640 KGs. per acre and thereafter it is 650 KGs. In our area, we see there are so many land holders who are growing this jowar and they are not in a position to pay off the levy because, even though the dry land is such a vast area, if you calculate at the rate of 40 KGs. per acre, there are some families who will have to purchase jowar from the bazaar and pay the levy. In such cases, it is my earnest request to the Government that the Government should look into it and make a spot inspection of such of the persons who give complaints to the Deputy Commissioner or the Tashildar that the jowar that he is going to harvest is quite less and he is not in a position to pay the levy, because, as we just saw, in the last tw

or three years, our area has been affected with drought and this year also, in certain areas where the sowing has been done lately, after the rains, the jowar crop is not good. And, especially in Gulburga district, in some of the taluks–for example Alandi and Afzalpur-we see that the crop is not good. Therefore, I request the Government to make certain provisions to enable the land holder to apply to the Tashildar or the Deputy Commissioner and after spot inspection if the crop is found to be less, some concession should be given to such land holders.

Insted of just taking 40 KGs. per acre and getting half of the target, it is better to lesson the levy quantity. If it is 40 KGs. per acre, I think the Government can decrease it to 25 K.Gs or 20 K.Gs per acre. If they do it, the Government will get the whole target and nobody will object for that. I request the Government to think over this matter and see whether this levy quantity can be decreased.

4-30 P.M.

Regarding levy rate also, I would like to say one or two words. The levy rate of Jowar is Rs. 74. per quintal. For Paddy, they have mentioned as coarse, medium, fine and superfine but in the case of Jowar, the rate is fixed for all varieties and no distinction has been made. Even for bad quality of Jowar also, we have to pay the same price There are so many persons who grow bad jowar, coarse Jowar and they will be getting more money, whereas a person who grows good quality jowar is not getting more benefits. Therefore, I request the Government to think over this and make a distinction among coarse, medium, fine and superfine, which was made in the case of Paddy, in the case of jowar also. Apart from that, the rate that has been fixed for Jowar i.e., at Rs. 74. is very less. Some fertilizers are required and the rate of labour has also been increased. Now the agriculturists will have to invest more in order to grow good jowar. I therefore suggest that the price of jowar may be increased to Rs. 90. per quintal. I know that the Central Government will have to fix the rates but I would like to press the State Government to see that the price of this jowar which is at Rs. 74. per quintal is increased, which will help the agriculturists to some extent. I also request that different rates should be fixed for different varieties of Jowar.

Now, coming to informal rationing, I would like to say that this system is in vogue only in some places like Bangalore, K.G.F., Hubli-Dharwar, Belgaum, Mysore and Gadag-Betageri. I request the Government to start informal rationing at Gulburga also, where people are not getting proper food grains. I would like to say some thing about this Milo. The Government is supplying Milo to

different Districts in the State. People in Gulburga, especially in rural area, are not in a position to purchase Jowar which is available in the market because their purchasing capacity has come down. The rate of jowar is Rs. 2-50 per K G. in the market. This milo is available at the rate of 0-96 paise or Rs. 1-02 per K.G. If this is made available, especially in the rural area of Gulbarga, I feel that most of the difficulties which the rural population in our area are facing will be solved. As per the report that has been supplied to us, I learnt that in some places of our State. Milo is being misused and the people are using this milo for cattle feed. In Gulburga, people are ready to take that Milo for their consumption. I just feel that the Government could supply more and more Milo to Gulburga District where the people are badly in need of this cheeper variety of grain.

The Hon. Chief Minister when he was touribg Gulburga District also came to know about the people eating Malmandi, a gross-grain, in Afzalpur, Aland and in some taluks, of Chitapur. This Malmandi is being sold at the rate of Rs. 55. per quintal. The purchasing capacity of the people has come down with the result in these places, the people are eating this Malmandi.

Under these circumstances, I request the Government to provide more Milo to the Gulburga District.

I would like to mention here that the distribution of controlled cloth is now confined only to urban areas in our State. What I feel is that in rural areas, we must see that this controlled cloth reaches the poorest sections of the society There are fair price shops in every village and if the Government take steps to provide controlled cloth in villages also, then, it would help the poor people to a great extent. Further, I would like to suggest that the most requirement of our area is Dhoti and Sarees, at controlled rates. The grey long cloth which is now being supplied is not even fit to use it for bandage purpose. Therefore, I request the Government to stress the Central Government to issue more Dhotbis and Sarees to our State. I would also like to mention here that there is no proper market for this grey long cloth, and there is accumulation of heavy stocks. Therefore, I request the Government to come to the rescue of the Karnataka Federation and the Co-operative Societies and see that this grey long cloth is cleared.

With these words, thanking the Chair for having given me an opportunity to speak, I conclude.

MR. DEPUTY SPEAKER.—I wish to draw the attention of the Hon. Member Sri Prabhakar Telkar, on the matter raised by him. It is covered in Clauses (3) and (4) of the Mysore Procurement Levy Order, 1956. There is a provision according to which the concerned agriculturist can give a declaration and on which the Enforcement Officer has to review again and if necessary, give a finding. There is a remedy here.

SRI KAGODU THIMAPPA.—That remedy is always there in all enactments.

ಉಪಾಧ್ಯಕ್ಷರು.—ರೆವ್ಯೂ ಮಾಡಬೇಕು ಎಂದು ಅವರು ಹೇಳುತ್ತಿದ್ದರು That particular point he was trying to stressout in a very vague way.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯ ಬೇಡಿಕೆಗಳನ್ನು ಬಹಳ ಉಗ್ರವಾಗಿ ನಾನು ವಿರೋಧ ಮಾಡಬೇಕಾಗಿದೆ. ಕಾರಣವೇನೆಂದರೆ ಒಬ್ಬ ಮಹಿಳಿಯರಿಗೆ ಈ ಖಾತೆ ಸಿಕ್ಕಿದ ಮೇಲೆ ಎಲ್ಲ ಗೃಹಗಳಲ್ಲಿಯೂ ಮಹಿಳೆಯರ ಕೈತುಂಬ ಬೇಳೆ, ಎಣ್ಣೆ, ಗೋಧಿ, ಅಕ್ಕಿ, ರಾಗಿ ಇವೆಲ್ಲ ಹೊಳೆಯಾಗಿ ಹರಿಯುತ್ತದೆ. ಅವರ ಮನೆಯ ಪಾತ್ರೆ ಪಾತ್ರೆಯೂ ತುಂಬಿರುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ತಾಯಿ ತಾನು ತಿನ್ನದೇ ಇದ್ದರೂ ಮಕ್ಕಳಿಗೆ ಬಡಿಸ ತಕ್ಕ ದೊಡ್ಡತನ ತಾಯಿಗೆ ಇದೆ. ಆದರೆ ಈಗ ನೋಡುವಾಗ ನಮ್ಮ ತಾಯಿಯ ಕೈಯಲ್ಲಿ ಹೋದರೆ ಅದೆಲ್ಲ ಬರಿದಾಗುವ ಸ್ಥಿತಿ ಬಂದಿದೆ. ಯಾರಿಗೆ ಈ ಖಾತೆ ಸಿಕ್ಕಿದರೆ ಅದು ಕಲ್ಪವೃಕ್ಷವಾಗುತ್ತದೆ, ಕಾಮ ಧೇನುವಾಗುತ್ತದೆ. ಅಂಥ ಕೈಗೆ ಈ ಖಾತೆ ಸಿಕ್ಕಿರುವಾಗ ಎಲ್ಲ ಮಾಯವಾಗುತ್ತಿದೆ ಈ ಹೊತ್ತು ನಾವು ಮೆರವಣಿಗೆ ಬರಬೇಕಾದರೆ ಯುವಕರೆಲ್ಲ ಹೇಳುತ್ತಿದ್ದರು, ಎಲ್ಲ ಮಾಯ, ಈ ಸರ್ಕಾರ ಬಂದ ಮೇಲೆ ಸಕ್ಕರೆ ಮಾಯ, ಗೋಧಿ ಮಾಯ, ಮಾಯದ ಮಯವೇ ನಮ್ಮ ರಾಜ್ಯದಲ್ಲಿ ತಾಂಡವಾಡುತ್ತಿದೆ ಎನ್ನತಕ್ಕ ಘೋಷಣೆಯನ್ನು ಈ ಹೊತ್ತು ಯುವಕರು ಕೂಗುತ್ತಿದ್ದರು. ಬರೀ ಹೊಟ್ಟೆಯಲ್ಲಿರತಕ್ಕ ಜನರನ್ನು ಒಂದು ಕಡೆ ನಾವು ನೋಡುತ್ತಿದ್ದೇವೆ. ಈ ಹೊತ್ತು ಅವರಿಗೆ ಸರಿಯಾಗಿ, ಕ್ರಮವಾಗಿ ವಿತರಣೆಯ ಕೆಲಸ ನಡೆಯುತ್ತಿದೆಯೋ ಎಂದರೆ ಏನೂ ಆಗುತ್ತಿಲ್ಲ, ಈ ಹೊತ್ತು ಸಾಮಾನ್ಯವಾಗಿ ಕಾಳುಕಡ್ಡಿ, ಬಟ್ಟೆ ವಗೈರೆ ಎಲ್ಲ ಪದಾರ್ಥಗಳ ಬೆಲೆಯೂ ಗಗನಕ್ಕೆ ಏರಿದೆ. ಅಂಥ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು ಒಳ್ಳೆಯ ಬೆಲೆಯಲ್ಲಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಆದರೆ ಆದರ ಸರಬರಾಜು ಸರಿಯಾಗಿ ಮಾಡುತ್ತಿದ್ದಾರೆಯೇ ಇಲ್ಲ. ಸಕ್ಕರೆ ವಿಷಯವಾಗಲೀ, ಎಣ್ಣೆಯ ವಿಷಯವಾಗಲೀ, ಸರ್ಕಾರ ನಿಯಂತ್ರಣಗಳನ್ನು ಹಾಕಿದೆ, ಈ ಹೊತ್ತು ಎಣ್ಣೆಯ ಬೆಲೆಗಳು ವಿಪರೀತ ಜಾಸ್ತಿಯಾಗಿದೆ. ಎಣ್ಣೆ ಕಾರ್ಖಾನೆಯವರು ಸರಿಯಾದ ಲೆಕ್ಕ ಕೊಡುವುದಿಲ್ಲ. ಈಚೆಗೆ ವಿಶಿಷ್ಟ ರೀತಿಯ ಕಾಯಿಲೆಗಳು ಏಕೆ ಬರುತ್ತವೆಂದರೆ ಕಲಬೆರಕೆ ಜಾಸ್ತಿಯಾಗಿರುವುದರಿಂದ ಎಂದು ತಜ್ಞರು ಹೇಳುತ್ತಾರೆ. ಕಲಬೆರಕೆ ಎಲ್ಲಿಯವರೆಗೆ ಹೋಗಿದೆ ಎಂದರೆ ಸೇಂಗಾ ಎಣ್ಣೆಯಲ್ಲಿ ಯಾವುದೋ ಎಣ್ಣೆಗಳನ್ನು ಬೆರೆಸುತ್ತಾರೆ. ಹಲವಾರು ಬೀಜಗಳನ್ನು ಅರಿಸಿ ಎಣ್ಣೆ ಮಾಡಿ ಅದನ್ನು ಸೇಂಗಾ ಎಣ್ಣೆಯ ಜೊತೆಗೆ ಸೇರಿಸಿ ಮಾರಾಟ ಮಾಡತಕ್ಕ ಪರಿಸ್ಥಿತಿ ಇದೆ ಆಹಾರ ಇಲಾಖೆಯವರು ಇದನ್ನೆಲ್ಲ ಯಾವ ರೀತಿ ಶೋಧನೆ ಮಾಡುತ್ತಾರೆನ್ನುವುದು ಗೊತ್ತಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಕೇಸರಿ ಬೇಳೆ ಬಂದಿತ್ತು. ಲಕ್ಷಾಂತರ ಮೂಟೆಗಳು ಬಂದಿದ್ದುದನ್ನು ಮಧ್ಯಪ್ರದೇಶಕ್ಕೆ ವಾಪಸ್ಸು ಕಳುಹಿಸಿದರು ಅದನ್ನು ತಿಂದರೆ ಪಾರ್ಶ್ವವಾಯು ಬರುತ್ತದೆ ಎಂದು ಹೇಳುತ್ತಾರೆ. ಮಧ್ಯಪ್ರದೇಶ ಸರ್ಕಾರ ಅದಕ್ಕೆ ಬಹಿಷ್ಕಾರ ಹಾಕಿದೆ. ದಾವಣಗೆರೆಯಲ್ಲಿ ಸುಮಾರು ೫ ಸಾವಿರ ಮೂಟೆ ಹಿಡಿದರು ಅದು ಏನಾಯಿತೋ ಗೊತ್ತಿಲ್ಲ. ಈ ಬೇಳೆಯನ್ನು ಹಿಡಿಯುವ ವೇಳೆಗೆ ಎಷ್ಟು ಮೂಟೆ ಖರ್ಚಾಗಿತ್ತು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆ ಬೇಳೆಯನ್ನು ತಿಂದು ಎಷ್ಟು ಜನ ರೋಗಕ್ಕೆ ಸಿಕ್ಕಿದ್ದಾರೆಂಬುದನ್ನು ಊಹಿಸಬಹುದು.

ಲೆವಿ ವಿಚಾರದಲ್ಲಿ ಸರ್ಕಾರ ಸಾಕಷ್ಟು ಗಮನ ಕೊಟ್ಟಿಲ್ಲ ಮತ್ತು ಲೆವಿ ಬಗ್ಗೆ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ವ್ಯವಸಾಯಗಾರನು ಬೆಳೆಯುವುದನ್ನೆಲ್ಲ ಕಿತ್ತುಕೊಂಡು ಬಂದಿದ್ದಾರೆ. ಲೆವಿ ಕೊಡುವವರೆಗೂ ಯಾರಿಗೂ ಮಾರಾಟ ಮಾಡುವ ಹಾಗಿಲ್ಲ ಮತ್ತೆ ಯಾರು ಕೊಂಡುಕೊಳ್ಳುವ ಹಾಗಿಲ್ಲ ಎನ್ನುವ ನಿರ್ಬಂಧವನ್ನು ಹಾಕಿದ್ದಾರೆ, ಇದು ಯಾವ ನ್ಯಾಯ? ಬೇರೆ ಎಲ್ಲ ವಸ್ತುಗಳನ್ನೂ ಉತ್ಪಾದನೆ ಮಾಡುವವರು ಯಾರಿದ್ದಾರೆ ಅವರೆಲ್ಲರಿಗೂ ಅದೇ ರೀತಿಯ ನಿರ್ಬಂಧವನ್ನು ವಿಧಿಸಿದ್ದಾರೆಯೇ? ವ್ಯವ

ವ್ಯವಸಾಯಗಾರನ ಮೇಲೆ ಮಾತ್ರ ಏಕೆ ಇಂಥ ನಿರ್ಬಂಧ? ನಾವು ಹೋಲ್‌ಸೇಲ್ ಫೆಡರೇಷನ್ನಿಗೆ ಹೋಗಿದ್ದೆವು. ಕಡ್ಡಾಯ ಕಾರ್ಯಕ್ರಮದ ಸಲುವಾಗಿ ಕಾರ್ಖಾನೆಯವರು ದಪ್ಪ ಇರುವಂಥ ಬಟ್ಟೆಯನ್ನು ತೆಳುವಾಗಿ ಮಾಡಿ ಸರಬರಾಜು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಕಾರ್ಖಾನೆಯವರು ಉತ್ಪಾದನೆ ಮಾಡುವುದರಲ್ಲಿ ಸರ್ಕಾರದ ದರದಲ್ಲಿ ಕೊಡಬೇಕಾದ್ದನ್ನು ಕೊಡುವವರೆಗೂ ಬೇರೆ ಬಟ್ಟೆಯನ್ನು ಮಾರಾಟ ಮಾಡಬಾರದು ಎನ್ನುವ ಕಡ್ಡಾಯವನ್ನು ಯಾವುದೇ ಕಾನೂನಿನಲ್ಲಿ ವಿಧಾಯಕ ಮಾಡುತ್ತಿಲ್ಲ. ಲೆವಿ ಕಾನೂನಿನಲ್ಲಿ ಮಾತ್ರ ಮಾಡಿದ್ದಾರೆ. ಇದು ಯಾವ ನ್ಯಾಯ? ವ್ಯವಸಾಯಗಾರನು ಸಿನಿಮಾ ಇಟ್ಟಿದ್ದಾನೆಯೇ, ಹೋಲ್‌ಸೇಲ್ ಅಂಗಡಿ ಇಟ್ಟಿದ್ದಾನೆಯೇ, ಕಾರ್ಖಾನೆ ಇಟ್ಟಿದ್ದಾನೆಯೇ? ಅವನು ಬೆಳೆಯುವ ಒಂದೊಂದು ಕಾಳಿಗೂ ಬೆವರು ಸುರಿಸಿ ದುಡಿಯುತ್ತಾನೆ. ಇಂಥವನು ಮಾರಾಟ ಮಾಡಬೇಕಾದರೆ ಲೆವಿ ಕೊಡದೆ ಮಾರಾಟ ಮಾಡುವ ಹಾಗೆ ಇಲ್ಲ ಎನ್ನುವುದು ಕಡ್ಡಾಯ ಮಾಡುವುದು ನ್ಯಾಯವೇ? ವ್ಯವಸಾಯಗಾರನು ಕೇಳುವುದಿಲ್ಲವೆಂದು ತಿಳಿದುಕೊಂಡು ಈ ರೀತಿ ಕಡ್ಡಾಯ ಹಾಕಿರುವುದು ತಪ್ಪು ಎಂದು ಹೇಳುತ್ತೇನೆ.

ಲೆವಿ ಹಾಕಿರುವುದು ಜಾಸ್ತಿಯೇ ಕಡಿಮೆಯೇ ಎನ್ನುವುದನ್ನು ಬೇರೆ ಯಾವಾಗಲಾದರೂ ಹೇಳುತ್ತೇನೆ. ಲೆವಿ ಹಾಕುವುದು ಪಹಣಿಯ ಆಧಾರದ ಮೇಲೆ. ಇಷ್ಟು ಲೆವಿ ಕೊಡಬೇಕು ಎಂದು ತಿಳಿಸಿದಾಗ ಅದು ಜಾಸ್ತಿಯಾಗಿದ್ದರೆ, ಕ್ರಮವಾಗಿಲ್ಲದಿದ್ದರೆ ಸರ್ಕಾರಕ್ಕೆ ಅರ್ಜಿ ಕೊಡಬಹುದು ಎಂದು ಇದೆ. ಲೆವಿ ಡಿಮಾಂಡ್ ಮಾತ್ರ ಬೆಳೆಯನ್ನು ಬೆಳೆದಿರಲಿ, ಬೆಳೆಯದೆ ಇರಲಿ ಒಟ್ಟು ಜಮೀನು ಲೆಕ್ಕಕ್ಕೆ ತೆಗೆದುಕೊಂಡು, ಒಂದಕ್ಕೆ ಒಂದೂವರೆಯಷ್ಟು ಲೆಕ್ಕ ಹಾಕಿ ನೋಟೀಸ್ ಕೊಡುತ್ತಾರೆ. ಹಾಗೆ ನೋಟೀಸ್ ಕೊಡುವಾಗ ಹಾಕಿರುವ ಲೆವಿ ಜಾಸ್ತಿ ಇದ್ದರೆ ಇಂಥ ಫಾರಂ ಪ್ರಕಾರ ಅರ್ಜಿ ಹಾಕಿಕೊಳ್ಳಬಹುದು ಎಂದು ಹೇಳುವುದಕ್ಕೆ ಸರ್ಕಾರದವರಿಗೆ ಕಷ್ಟವಾಗುತ್ತಿತ್ತೇ? ನಮ್ಮ ತಾಲ್ಲೂಕಿನಲ್ಲಿ ೧೦ ಸಾವಿರ ಫಾರಂಗಳನ್ನು ಪ್ರಿಂಟ್ ಮಾಡಿಸಿ ಮನೆ ಮನೆಗೂ ಹಂಚಿದ್ದೇವೆ. ಸರ್ಕಾರದವರು ಲೆವಿ ಕೊಡಬೇಕು ಎಂದು ಹೇಳುವಾಗ, ಎಗ್ಜೆಂಪ್ಷನ್‌ಗೆ ಹಾಕಿಕೊಳ್ಳುವುದಾದರೆ ಹಾಕಿಕೊಳ್ಳಿ ಎಂದು ಒಂದು ಫಾರಂ ಕಳುಹಿಸಿದರೆ ಅಪೀಲ್ ಮಾಡಿಕೊಳ್ಳುತ್ತಾರೆ ಅಥವಾ ತಹಸೀಲ್ದಾರರಿಗೆ ಅರ್ಜಿ ಕೊಡುತ್ತಾರೆ. ಅದನ್ನು ಮಾಡಿಲ್ಲ. ಪಹಣಿ ಕರಾರುವಾಕ್ಕಾಗಿದೆಯೇ, ಎಷ್ಟು ಆಣೆ ಬೆಳೆಯಾಗಿದೆ ಎನ್ನುವುದನ್ನು ನೋಡುವುದಿಲ್ಲ. ಎಲ್ಲೋ ಕುಳಿತುಕೊಂಡು ಎಂಟಾಣೆ ಬೆಳೆಯಾಗಿದ್ದರೆ ಒಂದು ರೂಪಾಯಿ ಬೆಳೆಯಾಗಿದೆ ಎಂದು ಲೆಕ್ಕ ಹಾಕಿ ಲೆವಿ ಡಿಮಾಂಡ್ ಮಾಡುತ್ತಾರೆ. ಜಮೀನಿನಲ್ಲಿ ಫಸಲು ಬೆಳೆದಿದೆಯೋ ಇಲ್ಲವೇ ಎನ್ನುವುದನ್ನು ನೋಡುವುದಿಲ್ಲ. ಬಿತ್ತನೆ ಮಾಡಿದ ಮೇಲೆ ಕೆಲವು ಕಡೆ ಬೆಳೆ ಬರುತ್ತದೆ, ಕೆಲವು ಕಡೆ ಬರುವುದಿಲ್ಲ. ಎಷ್ಟು ಬೆಳೆದಿದ್ದಾನೆ ಎನ್ನುವ ಲೆಕ್ಕ ತೆಗೆದು ಅದರ ಮೇಲೆ ಲೆವಿ ಫಿಕ್ಸ್ ಮಾಡುವುದಿಲ್ಲ. ಶ್ಯಾನುಭೋಗರು ಏನು ಲೆಕ್ಕ ಕೊಡುತ್ತಾರೆ, ಅದರ ಮೇಲೆ ಎಕರೆವಾರು ಲೆಕ್ಕ ತೆಗೆದುಕೊಂಡು ಲೆವಿ ಹಾಕುತ್ತಾರೆ. ಲಕ್ಷಾಂತರ ಜನರು ಸರ್ಕಾರದ ಲೆಕ್ಕದ ಪ್ರಕಾರ ಲೆವಿಯನ್ನು ಕೊಟ್ಟರೆ ಅವನಿಗೆ ಊಟಕ್ಕೇ ಇರುವುದಿಲ್ಲ. ಜೂನ್ ತಿಂಗಳು ಬಂತು ಎಂದರೆ ಯಾರ ಮನೆಗಾದರೂ ಅವರು ಚೀಲ ಹಿಡಿದುಕೊಂಡು ಹೋಗಬೇಕು.

ಕಳೆದ ವರ್ಷ ೧ ೬೮,೮೫೩ ಟನ್ ಬತ್ತವನ್ನು ಸಂಗ್ರಹ ಮಾಡಿದ್ದಾರೆ. ಅದೆಲ್ಲ ಗ್ರಾಮಾಂತರ ಪ್ರದೇಶದಿಂದ ಬರುವುದು. ಈ ಹೊತ್ತು ಬೆಂಗಳೂರು ನಗರದಲ್ಲಿ ಮತ್ತು ಬೇರೆ ಕೆಲವು ಕಡೆ ಮೂರು ಕೆ.ಜಿ ಪ್ರಕಾರ ಅಕ್ಕಿಯನ್ನು ಕೊಡುತ್ತಿದ್ದಾರೆ. ಆದರೆ ಯಾವ ಗ್ರಾಮ ಪಂಚಾಯಿತಿಯಲ್ಲಿ, ಯಾವ ಗ್ರಾಮದಲ್ಲಿ ಕೊಟ್ಟಿದ್ದಾರೆ? ವಲ್ನರಬಲ್ ಸೆಕ್ಷನ್ ಎಂದು ಏನು ಹೇಳುತ್ತಾರೆ ಅವರಿಗೆ ಏನು ಕೊಟ್ಟಿದ್ದಾರೆಂದು ಕೇಳುತ್ತೇನೆ. ಹಳ್ಳಿಯಲ್ಲಿರತಕ್ಕ ಕೊಂಡುಕೊಂಡು ತಿನ್ನತಕ್ಕ ಜನರಿಗೆ ಆಹಾರ ಧಾನ್ಯವನ್ನು ಕೊಡುವ ವ್ಯವಸ್ಥೆ ಏನು ಮಾಡಿದ್ದಾರೆನ್ನುವುದನ್ನು ನೋಡಬೇಕು. ಜನಗಳಿಗೂ ಸರಿಯಾದ ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಇನ್ನು ಲೆವಿ ಧಾರಣೆ ಬಗ್ಗೆ ಹೇಳಬೇಕೆಂದರೆ, ಸರ್ಕಾರದವರು ಕ್ವಿಂಟಾಲ್ ಬತ್ತಕ್ಕೆ ೮೦ ರೂಪಾಯಿ ದರದಲ್ಲಿ ವಸೂಲಿ ಮಾಡುತ್ತಿದ್ದಾರೆ. ಬೆಂಗಳೂರು, ಕೋಲಾರ ಮುಂತಾದ ಪಟ್ಟಣಗಳಲ್ಲಿರುವ ಕಾರ್ಮಿಕರಿಗೆ ಅಕ್ಕಿ ಒದಗಿಸಬೇಕಾಗಿದೆ, ಅವರಿಗೋಸ್ಕರ ತಾವು ತ್ಯಾಗಮಾಡಿ ಎಂದು ರೈತರಿಗೆ ಹೇಳಿ ಹೊರಗಡೆ ಕ್ವಿಂಟಾಲ್ ಒಂದಕ್ಕೆ ೧೪೦ ದರವಿದ್ದರೂ ಸಹ ಅವರಿಂದ ೮೦ ರೂಪಾಯಿ ದರದಲ್ಲಿ ಲೆವಿ ವಸೂಲಿ ಮಾಡುತ್ತಿದ್ದಾರೆ. ಇದನ್ನು ಅಕ್ಕಿ ಮಾಡಿಸಿದರೆ ಸರಾಸರಿ ೭೦ ಕೆ.ಜಿ ಅಕ್ಕಿಯಾಗುತ್ತದೆ. ಇದಕ್ಕೆ ಎಲ್ಲ ಲಾಭವನ್ನು ಸೇರಿಸಿ ಒಂದು ರೂಪಾಯಿ ೨೦ ಪೈಸೆಯಂತೆ ಮಾರಾಟ ಮಾಡಬಹುದು. ಆದರೆ ಸರ್ಕಾರದವರು ಕೆ.ಜಿ ಒಂದಕ್ಕೆ ಒಂದು ರೂಪಾಯಿ ೬೦ ಪೈಸೆಯಂತೆ ಮಾರಾಟ ಮಾಡುತ್ತಿದ್ದಾರೆ. ಒಂದು ಕ್ವಿಂಟಾಲ್ ಅಕ್ಕಿಗೆ ೦ ರೂಪಾಯಿಗಳ ಲಾಭ ಏತಕ್ಕೆ? ವ್ಯಾಪಾರಸ್ಥರು ಧಾರಣೆ ಜಾಸ್ತಿ ಮಾಡುತ್ತಾರೆಂದು ಒಂದು ಕಡೆ ಬೈಯುತ್ತೀರಿ, ಆದರೆ ನೀವೇ ಧಾರಣೆ ಹೆಚ್ಚು ಮಾಡುತ್ತಿದ್ದೀರಿ, ಇದು ಒಂದು ರೀತಿಯಲ್ಲಿ ಜನರ

ಶೋಷಣೆ ಮಾಡಿದಂತೆ ಆಗುವುದಿಲ್ಲವೇ? ಇದು ಬೆಲೆ ನಿಯಂತ್ರಣ ಮಾಡುವ ನೀತಿಯೇ? ಬೆಲೆ ಹತೋಟಿ ಮಾಡುವ ಕ್ರಮವೇ? ವ್ಯವಹಾರ ಜ್ಞಾನವಿರುವ ವರ್ತಕರೂ ಸಹ ಇಷ್ಟೊಂದು ಲಾಭ ಇಟ್ಟು ಮಾರಾಟ ಮಾಡುವುದಿಲ್ಲ. ಅವರೇನಾದರು ೮೦ ರೂಪಾಯಿ ದರದಲ್ಲಿ ಭತ್ತವನ್ನು ಖರೀದಿ ಮಾಡಿದರೆ ಒಂದು ರೂಪಾಯಿ ಇಪ್ಪತ್ತು ಪೈಸೆಗೆ ಒಂದು ಕೆ.ಜಿ.ಯಂತೆ ಅಕ್ಕಿಯನ್ನು ಸಂತೋಷದಿಂದ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಬೇಕಾದರೂ ಮಾರಾಟ ಮಾಡುತ್ತಾರೆ. ಇಂದು ದಕ್ಷಿಣ ಕನ್ನಡ ಜಿಲ್ಲೆಗೆ ಪರ್ಮಿಟ್ ಮೂಲಕ ಅಕ್ಕಿ ಸಾಗಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ಈ ರೀತಿ ಪರ್ಮಿಟ್ ಕೊಡಲಾಗುತ್ತಿದೆ ಎಂದು ಒಂದು ಕಡೆ ಸರ್ಕಾರದವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದು ನಿಜವಿದ್ದರೆ ಈ ವ್ಯವಹಾರದಲ್ಲಿ ಎಷ್ಟು ಜನ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆಂಬುದನ್ನು ಹೇಳಲಿ, ನನಗೆ ತಿಳಿದಿರುವ ಪ್ರಕಾರ ಈ ವ್ಯವಹಾರದಲ್ಲಿ ಕಳ್ಳಸಾಗಾಣಿಕೆ ಮಾಡತಕ್ಕಂತಹ ಜನರು ಇದ್ದಾರೆ. ಅವರು ಡಿ.ಸಿ. ಕಛೇರಿಗೆ ಹೋಗಿ ಬೇಕಾದರೆ ಎರಡು ನಿಮಿಷಗಳಲ್ಲಿಯೇ ಪರ್ಮಿಟ್ ತಂದುಬಿಡುತ್ತಾರೆ. ಇದಕ್ಕೆ ಕಾರಣ ಅವರು ಪ್ರತಿ ಟೇಬಲ್‌ಗೂ ಸರಸರನೆ ದುಡ್ಡನ್ನು ಹಂಚಿಬಿಡುತ್ತಾರೆ. ಈ ಮೂಲಕ ಅವರು ಹೆಚ್ಚು ಲಾಭ ಮಾಡಿಕೊಳ್ಳಲು ಅವಕಾಶವಿದೆ. ಆದಕಾರಣ ಇನ್ನು ಮುಂದೆ ಅಕ್ಕಿಯ ಬದಲು ಬತ್ತವನ್ನು ಕಳಿಸುವುದಕ್ಕೆ ಪರ್ಮಿಟ್ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಆಗ ಅದನ್ನು ಅಲ್ಲಿ ಅಕ್ಕಿ ಮಾಡಿಸಿ ಇನ್ನೂ ಕಡಿಮೆ ದರದಲ್ಲಿ ಮಾರಾಟ ಮಾಡಲು ಅವಕಾಶವಾಗುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಸರ್ಕಾರದವರು ೧೯೭೪ನೇ ಇಸವಿಯಲ್ಲಿ ೩ ಕೋಟಿ ೩೦ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಆಹಾರ ವಸ್ತುಗಳನ್ನು ಸೀಜ್ ಮಾಡಿದ್ದಾರೆ, ಈ ಬಗ್ಗೆ ತಾವು ಒಂದು ಒಳ್ಳೆಯ ಮಾತನ್ನು ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಹೇಳಬೇಕೆಂದರೆ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಕಥೆ ನಡೆಯಿತು, ಏನೆಂದರೆ, ಇವರ ಪಕ್ಷದ ನರೋನ ಕ್ಯಾಂಪ್ ಅಲ್ಲಿ ನಡೆದ ಸಂದರ್ಭದಲ್ಲಿ ರೈತರು ವಾಲಂಟರಿಯಾಗಿ ಮೂರೂವರೆ ಸಾವಿರ ಕ್ವಿಂಟಾಲ್ ಬತ್ತವನ್ನು ಲೆವಿ ಮೂಲಕ ಕೊಟ್ಟಿದ್ದಾರೆಂದು ಘೋಷಣೆ ಮಾಡಿದರು. ಆದರೆ ಆ ಭತ್ತ ಸಂಬಂಧಪಟ್ಟ ಸೊಸೈಟಿಗೆ ಬರಲೇ ಇಲ್ಲ. ಸ್ಟಾಕ್ ಎಲ್ಲಿ ಎಂದು ಕೇಳಿದಾಗ ಅದು ಮಿಲ್ಲಿನಲ್ಲಿದೆ ಎಂದು ಹೇಳಿಬಿಟ್ಟರು. ಆದರೆ ಅಲ್ಲಿ ಸ್ಟಾಕ್ ಇರಲೇ ಇಲ್ಲ, ನಂತರ ಹೊಸ ಬತ್ತವನ್ನು ಕಲೆಕ್ಟ್ ಮಾಡಿ ತಂದುಕೊಟ್ಟರು. ಮುಖ್ಯವಾಗಿ ನಾನು ಹೇಳುವುದೇನೆಂದರೆ, ಬಡವರ ತಲೆ ಒಡೆದು ಏನು ಲೆವಿ ವಸೂಲಿ ಮಾಡುತ್ತೀರಿ, ಅದನ್ನು ರಾಜ್ಯದ ಎಲ್ಲ ಜನತೆಗೂ ಕ್ರಮವಾಗಿ ಹಂಚಿಕೆ ಮಾಡಬೇಕು ಆ ರೀತಿ ಮಾಡದೆ ಹಾವನ್ನು ಹೊಡೆದು ಹದ್ದಿಗೆ ಹಾಕಿದರು ಎಂಬಂತೆ ಲೆವಿ ಅಕ್ಕಿಯನ್ನೆಲ್ಲಾ ಪಟ್ಟಣದ ಜನರಿಗೆ ಹಂಚುವುದು ಸರಿಯಲ್ಲ. ಹಳ್ಳಿಯ ಬಡ ಜನರಿಗೂ ಸಹ ಹಂಚಬೇಕು. ಈ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇನ್ನೂ ಕಾರ್ಡುಗಳನ್ನೇ ಹಂಚಿಕೆ ಮಾಡಿಲ್ಲ, ನಮ್ಮ ಮಲೆನಾಡು ಪ್ರದೇಶದ ಜನರಿಗೆ ಮಿಲೋವನ್ನು ಹಂಚಿಕೆ ಮಾಡಲು ಕಳಿಸಿಕೊಟ್ಟಿದ್ದೀರಿ ಆ ಜನರು ಅದನ್ನು ತಿಂದರೆ ಬೇಧಿಯಾಗುತ್ತದೆ. ಆದಕಾರಣ ಯಾವ ಭಾಗದ ಜನರಿಗೆ ಯಾವ ಆಹಾರವನ್ನು ತಿನ್ನುವ ಅಭ್ಯಾಸವಿದೆಯೋ ಅದನ್ನೆ ಕಳುಹಿಸಿಕೊಡಬೇಕೆಂದು ಹೇಳುತ್ತೇನೆ. ಆಗ ತಾವು ಕಳುಹಿಸಿಕೊಟ್ಟಿದ್ದು ಸದುಪಯೋಗವಾಗುತ್ತದೆ, ಜನರಿಗೆ ಅಭ್ಯಾಸವಿಲ್ಲದ ಆಹಾರವನ್ನು ಕಳುಹಿಸಿಕೊಟ್ಟರೆ ಅದನ್ನು ಎಮ್ಮೆಗೆ ಹಾಕಬೇಕಾಗುತ್ತದೆ. ಆದಕಾರಣ ಜನರಿಗೆ ಸದುಪಯೋಗವಾಗುವ ಆಹಾರವನ್ನು ಕಳುಹಿಸಿಕೊಡಬೇಕೆಂದು ಹೇಳುತ್ತೇನೆ. ಈಗ ಈ ಆಹಾರ ಖಾತೆಯನ್ನು ಮಹಿಳಾ ಮಂತ್ರಿಗಳು ವಹಿಸಿಕೊಂಡಿದ್ದಾರೆ. ಮನೆಯ ಒಂದು ಜವಾಬ್ದಾರಿಯನ್ನು ಹೆಂಗಸರು ಯಾವ ರೀತಿ ವಹಿಸಿಕೊಳ್ಳುತ್ತಾರೋ ಅದೇ ರೀತಿ ಮಾನ್ಯ ಮಂತ್ರಿಯವರು ತಮ್ಮ ಒಂದು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಕೆಂಚೇಗೌಡ (ಕೆ.ಆರ್. ನಗರ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆಹಾರ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸಮರ್ಥನೆ ಮಾಡುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ಈಗ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೊರಟಿದ್ದರೆ ನಮ್ಮ ಅಧಿಕಾರಿಗಳು ಆ ಸಮಸ್ಯೆಯನ್ನು ಇನ್ನೂ ಹೆಚ್ಚು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾವು ಆಹಾರದ ವಿಷಯದಲ್ಲಿ ಸ್ವಯಂಪೂರ್ಣತೆ ಸಾಧಿಸಬೇಕಾದರೆ ಆಹಾರದ ಉತ್ಪಾದನೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗುತ್ತದೆ. ಆದರೆ ಇಂದು ಯಾರು ಆಹಾರದ ಉತ್ಪಾದನೆ ಮಾಡುತಾರೋ ಅವರ ಬಗ್ಗೆ ಯಾರಿಗೂ ಕರುಣೆ ಇಲ್ಲವಾಗಿದೆ. ಯಾರು ಈ ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೋ ಅವರಿಗೆ ಈ ಒಂದು ದುಡಿಮೆ ಪುರಾತನ ಕಾಲದಿಂದ ಬಂದ ಒಂದು ಶಾಪವೆಂದು ಕಾಣುತ್ತದೆ.

ಇಂದು ನಮ್ಮ ದೇಶದಲ್ಲಿ ಶೇಕಡ ೮೦ರಷ್ಟು ರೈತರಿದ್ದಾರೆ. ಮತ್ತು ಇಲ್ಲಿರತಕ್ಕ ಪ್ರತಿನಿಧಿಗಳ ಪೈಕಿ ಶೇಕಡ ೮೦ರಷ್ಟು ಪ್ರತಿನಿಧಿಗಳು ರೈತರಿಂದ ಆರಿಸಿ ಬಂದಿದ್ದರೂ ಸಹ ಶೋಷಣೆಯಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿಲ್ಲ ಮತ್ತು ಅದನ್ನು ಕಣ್ಣುಬಿಟ್ಟು ನೋಡುತ್ತಿಲ್ಲ. ರೈತನಾದವನು ಹೊಲಗದ್ದೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯಬೇಕಾಗುತ್ತದೆ. ಆದರೆ ಅವನು ಅರೆಹೊಟ್ಟೆ ಊಟಮಾಡಿ ದುಡಿದರೆ ಉತ್ಪಾದನೆ ಜಾಸ್ತಿಯಾಗುತದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇಂದು ಪಟ್ಟಣ ಪ್ರದೇಶಗಳಲ್ಲಿ ಸರ್ಕಾರದವರು ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಿರುವ ರೈತ ಕಾರ್ಮಿಕರಿಗೆ ಈ ಅನುಕೂಲ ಇಲ್ಲವಾಗಿದೆ. ಆದರ ರೈತರು ಬೆಳೆದ ಬೆಳೆಗೆ ಸರ್ಕಾರದವರು ಅರ್ಧ ಬೆಲೆ ಕೊಟ್ಟು ಲೆವಿ ಮೂಲಕ ವಸೂಲಿ ಮಾಡುತ್ತಿದ್ದಾರೆ ಈ ಕಾರಣದಿಂದ ರೈತರು ತಾವು ಬೆಳೆದಿದ್ದರೆ ಹೊಟ್ಟೆತುಂಬಾ ಊಟ ಮಾಡುವುದಕ್ಕೂ ಸಹ ಸಾಧ್ಯವಾಗುತ್ತಿಲ್ಲ ಈಗ ಲೆವಿ ವಸೂಲಿ ಮಾಡತಕ್ಕಂಥ ವಿಧಾನದಲ್ಲಿ ಕೆಲವು ದೋಷಗಳಿವೆ. ಹತ್ತು ಎಕರೆ ಜಮೀನೇ ಇದ್ದರೆ ಹತ್ತು ಕ್ವಿಂಟಾಲ್ ಲೆವಿ ಮಾಡಬೇಕೆಂದು ಹೇಳುತ್ತಾರೆ ಇಲ್ಲಿ ಎಕರೆ ಆಧಾರದ ಮೇಲೆ ಲೆವಿ ನಿಗದಿ ಮಾಡುತ್ತಾರೆಯೇ ಹೊರತು. ಬೆಳೆ ಎಷ್ಟಾಗಿದೆ ಎಂದು ನೋಡಿ ನಿಗದಿ ಮಾಡುತ್ತಿಲ್ಲ, ಮತ್ತೊಂದು ದುರದೃಷ್ಟ ಸಂಗತಿಯೆಂದರೆ, ಲೆವಿ ಧಾರಣೆಯನ್ನು ಬೆಂಗಳೂರಿನಲ್ಲಿರುವ ಐ. ಸಿ ಎಸ್. ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಅನುಭವಸ್ಥ ರೈತರಿಗೆ ಅದರ ಧಾರಣೆಯನ್ನು ನಿಗದಿ ಮಾಡಲು ಅವಕಾಶವಿಲ್ಲದಂತೆ ಆಗಿದೆ. ಈ ಕಾರಣದಿಂದ ಹಳ್ಳಿಯ ರೈತರಿಗೆ ಮುಕ್ತಿಯೇ ಇಲ್ಲವಾಗಿದೆ ಮತ್ತು ಅವರ ಒಂದು ಸಂಕಟಕ್ಕೆ ಮುಕ್ತಿ ಇಲ್ಲವಾಗಿದೆ. ಇಂದು ಯೂರಿಯಾ ಬೆಲೆ ಕಂಟ್ರೋಲಿನಲ್ಲಿ ೫೫ ರೂಪಾಯಿ ಇದ್ದರೆ ಹೊರಗಡೆ ೧೧೦ ರೂಪಾಯಿ ಇದೆ. ಈ ಬೆಲೆಯಲ್ಲಿ ಎಷ್ಟು ಬೇಕಾದರೂ ಸಿಗುತ್ತದೆ. ಕಂಟ್ರೋಲ್ ರೇಟಿನಲ್ಲಿ ರೈತರಿಗೆ ಇದನ್ನು ಒದಗಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ೨೦೦–೩೦೦ ಕೊಟ್ಟರೂ ಸಿಕ್ಕುವುದಿಲ್ಲ. ಈ ರೀತಿ ಹೆಚ್ಚು ಬೆಲೆ ಕೊಟ್ಟು ಆಹಾರ ಉತ್ಪನ್ನ ಮಾಡಿದರೆ, ಅವನಿಗೆ ಒಂದು ಕ್ವಿಂಟಾಲ್ ಭತ್ತಕ್ಕೆ ೮೦ ರೂಪಾಯಿ ಕೊಟ್ಟರೆ ಆತನಿಗೆ ಉತ್ಪನ್ನ ಮಾಡತಕ್ಕ ಶಕ್ತಿ ಎಲ್ಲಿ ಬರುತ್ತದೆ ಎನ್ನತಕ್ಕದನ್ನು ಯೋಚನೆ ಮಾಡಬೇಕಾಗಿದೆ. ಈ ಲೆವಿ ಕೊಡುವುದರಲ್ಲಿ ಎಲ್ಲ ಅಧಿಕಾರಿಗಳಿಗೂ ಲಂಚ ಕೊಟ್ಟು ಇವತ್ತಿನ ದಿವಸ ರೈತನು ಬೇಸತ್ತು ಹೋಗಿದ್ದಾರೆ. ಪಹಣಿ ಬರೆಯಬೇಕಾದರೆ, ಪಂಚಾಯಿತಿ ಕಾರ್ಯದರ್ಶಿಗೆ ಲಂಚ ಕೊಡಬೇಕು. ಲೆವಿ ವಸೂಲು ಮಾಡುವ ಎಲ್ಲ ವರ್ಗದ ಅಧಿಕಾರಿಗೂ ಲಂಚ ಕೊಡಬೇಕು. ಈ ಅಧಿಕಾರಿಗಳು ಆಹಾರ ಇಲಾಖೆ ಮತ್ತು ರೆವಿನ್ಯೂ ಇಲಾಖೆಯಲ್ಲಿ ಬಹಳ ಚಟುವಟಿಕೆಯಲ್ಲಿ ಇದ್ದಾರೆ. ಏಕೆಂದರೆ ಇದರಲ್ಲಿ ಅವರಿಗೆ ಹೆಚ್ಚಿನ ಫಾಯಿದೆ ಇದೆ. ಯಾರು ಆಹಾರವನ್ನು ಉತ್ಪನ್ನ ಮಾಡುತ್ತಾನೆ, ಅವನಿಗೆ ಇವತ್ತಿನ ದಿವಸ ಹೆಚ್ಚಿನ ಬೆಲೆ ಸಿಕ್ಕುತ್ತಾ ಇಲ್ಲ ಯಾರು ಬಳಕೆದಾರ ಇದ್ದಾನೆ, ಇವನಿಗೆ ಇವತ್ತಿನ ದಿವಸ ಕಡಿಮೆ ದರದಲ್ಲಿ ಸಿಕ್ಕುತ್ತಾ ಇಲ್ಲ. ಇದಕ್ಕೆ ಕಾರಣವೇನೆಂದರೆ, ಇಲ್ಲ ಮಧ್ಯವರ್ತಿ ಜನರು ಏನು ಇದ್ದಾರೆ, ಅವರಿಗೆ ಮತ್ತು ಈ ಅಧಿಕಾರಿಗಳಿಗೆ ಇದರಲ್ಲಿ ಮುಕ್ಕಾಲು ಭಾಗ ಹೋಗುತ್ತದೆ,

5-00 P.M.

ನಾವು ಅಲ್ಲಿ ಒಂದೂವರೆ ರೂಪಾಯಿಗೆ ಕೊಟ್ಟರೆ, ಬೆಂಗಳೂರು ನಗರದಲ್ಲಿ ಬಂದು ಅದನ್ನು ಮೂರು ರೂಪಾಯಿನಂತೆ ಮಾರುತ್ತಾರೆ. ಈ ಒಂದು ವ್ಯತ್ಯಾಸ ಅಧಿಕಾರಿಗಳಿಗೆ ಲಂಚ ಕೊಡುವುದರಿಂದ ಜಾಸ್ತಿಯಾಗುತ್ತಾ ಇದೆ ಎಂದು ನಾನು ಹೇಳುತ್ತೇನೆ. ಕೃಷ್ಣರಾಜ ನಗರದಿಂದ ಲಾರಿಯಲ್ಲಿ ಮೈಸೂರು ಮತ್ತು ಬೆಂಗಳೂರು ನಗರಕ್ಕೆ ಅಕ್ಕಿ ಬರಬೇಕಾದರೆ, ಪ್ರತಿಯೊಬ್ಬ ಮಾಲೀಕರು ಒಂದು ಮೂಟೆಗೆ ಕನಿಷ್ಟ ೨೫ ರೂಪಾಯಿಗಳನ್ನು ಲಂಚ ರೂಪವಾಗಿ ಕೊಡಬೇಕೆಂದು ಹೇಳುತ್ತಾರೆ. ಹೀಗೆ ಲಂಚ ಕೊಟ್ಟಿದ್ದನ್ನು ತುಂಬಿಕೊಳ್ಳುವ ಉದ್ದೇಶದಿಂದ ಇಷ್ಟು ಬೆಲೆಯನ್ನು ಜಾಸ್ತಿ ಮಾಡುತ್ತಾರೆಂದು ಗೊತ್ತಾಗುತ್ತದೆ, ಎಂದರೆ, ಈ ಅಧಿಕಾರಿಗಳು ಲಂಚಕೋರತನ ಸಮಸ್ಯೆಯನ್ನು ಇವತ್ತಿನ ದಿವಸ ಕ್ರಿಯೇಟ್ ಮಾಡಿದ್ದಾರೆ ಎಂದರೆ, ಅದು ಅತಿಶಯೋಕ್ತಿಯಾಗಬಾರದು, ಹಳ್ಳಿ ಮಟ್ಟದಲ್ಲಿ ಬೆಳೆಯುವ ರೈತನಿಗೆ ಅನುಕೂಲವಿಲ್ಲ, ವ್ಯಾಪಾರ ಮಾಡುವವರಿಗೂ ಅನುಕೂಲವಿಲ್ಲ, ಎಲ್ಲಾ ಅನುಕೂಲವಾಗುವುದೆಂದರೆ, ಈ ಅಧಿಕಾರಿಗಳಿಗೆ ಮಾತ್ರ, ತಾವು ಕಾಳಸಂತೇಕೋರರನ್ನು ಹಿಡಿಯುತ್ತೇವೆ ಎಂದು ಹೇಳುತ್ತೀರಲ್ಲ, ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡುವ ಒಬ್ಬರನ್ನೂ ತಾವು ಹಿಡಿಯುವುದಿಲ್ಲ, ಯಾರು ಅಧಿಕಾರಿಗಳನ್ನು ದೂಷಣೆ ಮಾಡಿರುತ್ತಾರೆ. ಅವರನ್ನು ಹಿಡಿದು, ಆಮೇಲೆ ಬಿಡುಗಡೆ ಮಾಡುತ್ತಾರೆ. ಉದಾಹರಣೆಗಾಗಿ ಮೈಸೂರು ಜಿಲ್ಲೆಯಲ್ಲಿ ಮಹಮ್ಮದ್ ಎಂಬುವನನ್ನು ಹಿಡಿದರು. ಅವರನ್ನು ಬಿಡುಗಡೆ ಮಾಡಿದ ಮೇಲೆ ಒಂದು ದಿನ ಹೋಗಿ ಅವನನ್ನು ಸಂದಿಸಿದೆ. ಅವನು ಯಾವ ರೀತಿ ಬಿಡುಗಡೆ ಆಗಿದ್ದಾನೆ ಎಂದರೆ, ಇದರಲ್ಲಿ ಸರಕಾರದ್ದೂ ಒಂದು ಭಾಗ ಇದೆ. ಯಾರನ್ನು ಮೀಸಾ ಕಾನೂನಿನ ಪ್ರಕಾರ ಹಿಡಿದು ಜೈಲಿಗೆ ಹಾಕುತಾರೋ ಅವನಿಗೆ ಸರ್ಕಾರದ ಕಾನೂನು ಪ್ರಕಾರ ಅವನಿಗೆ ಕೇಸ್ ಹಾಕುವುದಿಲ್ಲ, ಅವರನ್ನು ಬಿಡು

ಗಡೆ ಮಾಡಿಬಿಡುತ್ತಾರೆ. ನಾನು ಕೇಳಿದಕ್ಕೆ ಮಹಮ್ಮದ್ ಹೇಳಿದ, ಚೀಫ್ ಮಿನಿಸ್ಟರ ಹತ್ತಿರ ಹೋಗಿ ನನ್ನ ಚಾರ್ಜಸ್ ಬಗ್ಗೆ ಎಲ್ಲಾ ಹೇಳಿದೆ, ಅವರು ನಿನ್ನಲ್ಲಿ ಯಾವ ಅಪಾದನೆಯೂ ಇಲ್ಲ ಎಂದು ಹೇಳಿ ನನ್ನನ್ನು ಬಿಡುಗಡೆ ಮಾಡಿಸಿದರು ಎಂದು ಹೇಳಿದ. ಈತ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷನಾಗಿದ್ದಾನೆ. ಅಲ್ಲಿನ ಡೆಪ್ಯುಟಿ ಕಮಿಷನರವರು ಬಹಳ ಪ್ರಭಾವ ಶಾಲಿಯಾದ ವ್ಯಕ್ತಿ, ಅವರು ನನ್ನ ಮೇಲಿನ ಯಾವುದೋ ಒಂದು ಜಿದ್ದಿಗೋಸ್ಕರ ಹಿಡಿದು ಜೈಲಿಗೆ ಹಾಕಿಸಿದರು ಎಂದು ಹೇಳಿದ. ಹೀಗೆ ಒಂದು ಜಿದ್ದಿನ ಮೇಲೆ, ಕೆಲವರನ್ನು ಜೈಲಿಗೆ ಹಾಕಿಸುವ ಈ ಪ್ರಭಾವಶಾಲಿಗಳಿಂದ ಸರಕಾರಕ್ಕೆ ಹೆಚ್ಚಿನ ಅಪಾದನೆ ಬರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಒಂದು ವಿಚಾರವನ್ನು ಬಹಳ ತೀವ್ರವಾಗಿ ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಕಳ್ಳಸಾಗಾಣಿಕೆದಾರರನ್ನು ಹಿಡಿದು ಜೈಲಿಗೆ ಹಾಕುವಾಗ ಬಹಳ ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಅವನ ಮೇಲೆ ಕಳ್ಳತನದ ಅಪಾದನೆ ಇದೆಯೋ ಇಲ್ಲವೋ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಮೇಲೆ ಹೇಳಿದ ಮಹಮ್ಮದ್ ಎಂಬುವನನ್ನು ವಿಚಾರಣೆ ಮಾಡದೆ, ಜೈಲಿಗೆ ಹಾಕಿದ್ದರಿಂದ, ನಾನು ಬಹಳ ಸಂಕಟದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ ೫೨ ರೈಸ್ ಮಿಲ್ಲುಗಳಿವೆ. ಯಾರೋ ಒಬ್ಬನನ್ನು ಹಿಡಿದು ಜೈಲಿಗೆ ಹಾಕಿಸಿದರು, ಆಮೇಲೆ ಅವರನ್ನು ಬಿಡುಗಡೆ ಮಾಡಿದರು. ಈ ರೀತಿ ಮಾಡಿದ್ದರಿಂದ, ೫೨ ರೈಸ್ ಮಿಲ್‌ಗಳ ಮಾಲೀಕರು ಬಾಗಿಲು ಮುಚ್ಚಿಕೊಂಡು ಕೂತುಬಿಟ್ಟರು. ಆಗ ಅವರೆಲ್ಲ ಯಾವ ಊರಿಗೆ ಹೋದರು ಎಂದು ಹೇಳಿಕಳುಹಿಸಬೇಕಾಯಿತು. ಇವತ್ತಿನ ದಿವಸ ಏನಾಗುತ್ತಿದೆ ಎಂದರೆ, ಇವರನ್ನು ಅರೆಸ್ಟ್ ಮಾಡಿಸಿ, ಬಿಡುಗಡೆ ಮಾಡಿಸಿ ಅವರಿಂದ ವಸೂಲು ಮಾಡಿಕೊಳ್ಳುತ್ತಾ ಇದ್ದಾರೆ. ಈ ಒಂದು ಅಭಿಪ್ರಾಯ ಜನರಲ್ಲಿ ಬಂದು, ಇವತ್ತಿನ ದಿವಸ, ನಮ್ಮ ಪಕ್ಷವಾಗಲೀ, ಸರಕಾರವಾಗಲೀ, ಜನರಲ್ಲಿ ನಂಬಿಕೆಯನ್ನು ಕಳೆದುಕೊಳ್ಳುತ್ತಾ ಇದೆ ಎಂದು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮುಖ್ಯ ಮಂತ್ರಿಯವರು ಅವನನ್ನು ಬಿಡುಗಡೆ ಮಾಡಿಸಿದಕ್ಕೆ ಕಾರಣ ಗೊತ್ತಾಗಲಿಲ್ಲ?

ಶ್ರೀ ಎಚ್. ಬಿ ಕೆಂಚೇಗೌಡ —ಅವನು, ನಾನು ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲ ಎಂದು ಹೇಳಿದ, ಅದಕ್ಕಾಗಿ ಬಿಡುಗಡೆ ಮಾಡಿಸಿದ್ದಾರೆ ಎಂದು ಹೇಳಿದ.

ಶ್ರೀ ಕೋಣಂದೂರು ಲಿಂಗಪ್ಪ.—ಮುಫತ್ತಾಗಿ ಬಿಡುಗಡೆ ಆಯಿತೋ ಅಥವಾ ಕೈ ಕಚ್ಚಿತೋ?

ಶ್ರೀ ಹೆಚ್. ಬಿ. ಕೆಂಚೇಗೌಡ.—ನನ್ನ ಅಭಿಪ್ರಾಯ ಏನೆಂದರೆ, ಎಲ್ಲಿಯವರೆಗೆ ಪ್ರಾಮಾಣಿಕವಾಗಿ ಅಧಿಕಾರಿಗಳು ಕೆಲಸ ಮಾಡುವುದಿಲ್ಲ, ಅಲ್ಲಿಯವರೆಗೆ ಜನಗಳಿಗೆ ಹಿತವಿಲ್ಲ. ಇವತ್ತಿನ ದಿವಸ ಅಧಿಕಾರಿಗಳಲ್ಲಿ ದೇಶಪ್ರೇಮ ಬರಬೇಕು, ಸರಕಾರದಿಂದ ಹೆಚ್ಚು ಸಂಬಳ ಪಡೆದು, ಅದರ ಋಣ ತೀರುಸುವುದಕ್ಕೋಸ್ಕರ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ, ಆದುದರಿಂದ ಅಧಿಕಾರಿಗಳು ಪ್ರಾಮಾಣಿಕವಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK.—(Belgaum) Mr. Deputy Speaker, I rise to oppose the Demands tabled by the Hon. Minister for Food and Civil Supplies. Four things are essential for a man. A house to live in, clothes to wear, food to eat and education to develop. The essential functions of the Food Department are procurement and distribution of foodgrains Regarding procurement, in the year 1973-74, for persons holding one acre and below there was exemption from levy. This year there is no exemption My submission is, a poor man who has an acre of land has no food to eat. Though he works hard for himself, if he has to pay this levy paddy, what can he provide for his family ? Therefore, request the Government that they should not take levy from these poor agriculturists. The procurement prices of levy paddy for 1974-75 is Coarse Rs. 74 per quintal ; Medium Rs 79 per quintal ; Fine Rs 84 per quintal ; and Superfine Rs 89 per quintal. But what

is the price of fertilisers now. The price of fertilisers has increased doubly. Why the Government is not thinking to give more price to levy paddy. The Government is thinking that agriculturists are industrialists and are making more m ney. They have no timelimit for their work and they working day and night ; Sky is their Shelter. In Such miserable conditions the agriculturists are working. The Government is not taking into conside ation all these things and they are simply harassing the agriculturists by collecting the levy. There is one case in Kharapura taluk in Halga village where no demand notice was served to Sri Dhakalu guru an agriculturist, the Talahati Police Patil and the Revenue Officer have gone to his house when there was nobody in the house and they have taken away 20 bags of paddy. Is it fair on the part of the Government ; does the Government think that agriculturists are thieves? You could collect the levy from agriculturists during day time with issuing levy notice. But don't harass the agriculturists. During elections time the Government says that agriculturists are the backbones of the nation and they are all helping the Nation. But when the question of collecting levy comes you are harassing them unnecessarily. Don't do this for God's sake.

Then there is informal rationing Belgaum, Bangalore, Gadag and Dharwar cities. You are giving 7 kgs of ration. i.e , 3 kgs of rice ; 1 kg. of wheat ; and 3 kgs. of milo in Bangalore, K G.F and Mangalore cities : whereas in Belgaum, Dharwar and Gadag-Betgeri cities you are issuing only 6 kgs. of ration to card-holders, in Bangalore you are giving one kg. sugar whereas you are giving 1/2 kg of sugar in Belgaum, Hubli-Dharwar and Gadag-Betgeri. Why this discrimination ? Is it because the people of Dharwar and Belgaum are not your people ? Is it only the Bangalore people who are yours ? or is it because that Bangalore is the capital city of the State you are showing this discrimination ? You have said that you are giving jawar in Belgaum. But that is not true. Even the milo that is being given there, people complain, that it contains lot of dust and even the Deputy Commissioner says it contains dhatture seeds If that is the case why you are giving this to the poor people. There is informa-rationing in Belgaum. There are about 116 fair price shops in Belgaum City ' and about 55,643 ration cards have been issued upto 1-1-1975 The population as per cards is 3,59,150 the adults are 3,28,078 and children 31,072 But the ration cards include bogus population of about 1 50,586. According to my information there is checking going on from 1-1-1975. The Home Guards were appointed for this purpose. But they have not done proper work though the Government has spent Rs 3000 acv this chcking work. They have taken some bribes from the ration shops. Every fair price shop has got about 150 bogus ration cards. They have recently surrendered nearly 4,000 bogus card to the Deputy Commissioner. Even with regard to supply of sugar there is lot of mischief. 300 more bags of

sugar which was being consumed formerly ? by the fair price shops I feel there is a click between the officers of the department and the fair price shops owners. These owners (Madam Speaker in the Chair) offer 15,000 rupees to the rationing officer and tell him that you should not check these bogus ration cards.

Another thing is there are four shops cancelled by the Government But according to my information they have recenly given the licences to these shops. One Mr. Mutkekar's shops was suspended. But he he has again got the same licence from the Government. Why this is so ? He has paid some amount to the concerned officer and obtained the licence. This should not be the case in respect of bogus card holders. Another thing is six fair price shop keepers have sold rationing articles outside Belgaum City and they were caught by the police. But no action was taken by the Government. I request the Government to take strong action against them.

Then there is one Taluka Agricultural Produce Co-operative Marketing Society and that society was lifting and distributing jowar a d wheat to the fair price shops in Belgaum Fifty per cent of the controlled sugar was also bei g distributed by this society. The society has taken a loan of Rs 18 lakhs from the D.C C. Bank. But the Government is thinking to entrusting this lifting and distribution work to one Karnataka State Co-operative Marketing Federation. When this society has taken a loan from the D.C.C. Bank and have increased their staff etc., why are going to do injustice to this society ? Just because this society is in the hands of marathi people. This injustice is being done. I request the Government not to do this injustice to this society.

With these words, I conclude.

† ಶ್ರೀಮತಿ ರಾಧಾ ಭಟ.—(ಅಂಕೋಲ) ಸನ್ಮಾನ್ಯ ಅಧ್ಯಕ್ಷರೇ, ಆಹಾರ ಸಚಿವೆಯವರು ಮಾಡಿಸಿದ ಬೇಡಿಕೆಗಳಿಗೆ ಬೆಂಬಲವನ್ನು ನೀಡುತ್ತಾ, ಈ ಖಾತೆಯ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ನಮ್ಮ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟಿರುವ ಆಹಾರ ಮತ್ತು ನಾಗರೀಕ ಸರಬರಾಜು ಕಾರ್ಪೊರೇಷನ್ ಆಡಳಿತ ಕುರಿತು ನಾನು ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಕಾರ್ಪೊರೇಷನ್ ಸ್ಥಾಪಿಸಿದ ಉದ್ದೇಶವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಈ ಕಾರ್ಪೊರೇಷನ್ ನಡೆಸುತ್ತಾ ಇರುವ ವ್ಯವಹಾರವನ್ನು ಕುರಿತು ಹೇಳುವುದಾದರೆ ಇದರಲ್ಲಿ ತೀವ್ರ ಸುಧಾರಣೆಯಾಗಬೇಕು ಎಂದು ನನ್ನ ಅಭಿಪ್ರಾಯ. ಮುಖ್ಯವಾಗಿ ಈ ಕಾರ್ಪೊರೇಷನ್ನಿನ ಅಧಿಕಾರ ವರ್ಗದಲ್ಲಿ ಬಹಳಷ್ಟು ಜನ ನಿವೃತ್ತ ಸರ್ಕಾರಿ ಅಧಿಕಾರಿಗಳೇ ಇದ್ದಾರೆ ಎಂದು ನನಗೆ ತಿಳಿದು ಬಂದಿದೆ. ಇಂದಿನ ನಿರುದ್ಯೋಗದ ವಾತಾವರಣದಲ್ಲಿ ನಿವೃತ್ತ ಅಧಿಕಾರಗಳನ್ನು ಪುನ : ನೇಮಿಸುವುದನ್ನು ಬಿಟ್ಟು, ತರುಣ ಪದವೀಧರರಿಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ಇಲ್ಲಿ ಸರ್ಕಾರವನ್ನು ನಮ್ರವಾಗಿ ಒತ್ತಾಯಿಸುತ್ತೇನೆ. ಈ ಕಾರ್ಪೊರೇಷನ್ ಖರೀದಿಸುವ ಗೋಧಿ ಮತ್ತು ಇತರ ಧಾನ್ಯಗಳವು ಸಕಾಲದಲ್ಲಿ ವಿತರಣೆ ಆಗದೆ, ಈ ಧಾನ್ಯಗಳು ಗೋಡೌನುಗಳಲ್ಲಿ ಬಹಳಷ್ಟು ಕೆಡುತ್ತಾ ಇರುತ್ತವೆ. ಆಹಾರ ಧಾನ್ಯಗಳು ಹೀಗೆ ಕೆಡುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ಆಹಾರ ಸಚಿವೆಯರು ಗಮನಕ್ಕೆ ತರಬಯಸುತ್ತೇನೆ. ಆಹಾರದ ವಿಷಯದಲ್ಲಿ ಉತ್ತರ ಕನ್ನಡ ಜಿಲ್ಲೆ ಸ್ವಲ್ಪ ಮಟ್ಟಿಗೆ ಕೊರತೆ

ಯನ್ನು ಅನುಭವಿಸುವ ಜಿಲ್ಲೆ, ಈ ವರ್ಷ ನಮ್ಮ ಜಿಲ್ಲೆಯಲ್ಲಿ ಸಂಗ್ರಹಿಸಿದ ಲೆವಿ ಭತ್ತವನ್ನು ಈಗಾಗಲೇ ಸರ್ಕಾರ ಬೇರೆ ಜಿಲ್ಲೆಗಳಿಗೆ ಸಾಗಿಸುತ್ತಾ ಇದೆ. ಹೀಗಾಗಿ ನಮ್ಮ ಜಿಲ್ಲೆಗೆ ಎಲ್ಲಿಂದ ಅಕ್ಕಿಯನ್ನು ಪೂರೈಸುತ್ತಾರೆ ಎನ್ನುವುದನ್ನು ಆಹಾರ ಸಚಿವೆಯರು ನಮಗೆ ಹೇಳಬೇಕು. ಇದರಿಂದ ಅನಾವಶ್ಯಕವಾಗಿ ಅಕ್ಕಿಯ ಬೆಲೆ ಹೆಚ್ಚಾಗುತ್ತದೆ. ಆಯಾಯ ಜಿಲ್ಲೆಯಲ್ಲಿ ಸಂಗ್ರಹಿಸಿದ ಭತ್ತವನ್ನು ಅಲ್ಲಿಯೇ ಅಕ್ಕಿ ಮಾಡಿ ಬಡ ಜನರಿಗೆ ಹಂಚುವುದು ಸೂಕ್ತವೆಂದು ನನ್ನ ಅಭಿಪ್ರಾಯ ಇದರ ಜೊತೆಗೆ ಯಾವ ಯಾವ ಜಿಲ್ಲೆಗೆ ಎಷ್ಟು ಬೇಕಾಗುತ್ತದೆ ಎಂದು ತಿಳಿದುಕೊಂಡು ಅಷ್ಟನ್ನು ಅಲ್ಲಿ ಇಟ್ಟು, ಹೆಚ್ಚಾದದ್ದನ್ನು ಬೇರೆ ಕಡೆಗೆ ಸಾಗಿಸಬೇಕು ಎಂದು ನನ್ನ ಸಲಹೆ. ಉತ್ತರ ಕನ್ನಡ ಜಿಲ್ಲೆಗೆ ಪೂರೈಸುತ್ತಿರುವ ಗೋಧಿ, ಸೀಮೆಎಣ್ಣೆ, ಕಂಟ್ರೋಲ್ ಬಟ್ಟೆ ಮತ್ತು ಇತರ ಯಾವತ್ತು ವಸ್ತುಗಳು ಸಾಕಷ್ಟು ಪ್ರಮಾಣದಲ್ಲಿ ನಮಗೆ ಸಿಕ್ಕುವುದಿಲ್ಲ, ಅದೆಲ್ಲವನ್ನೂ ಸಚಿವೆಯರು ಗಮನಕ್ಕೆ ತೆಗೆದುಕೊಂಡು ನಮ್ಮ ಜಿಲ್ಲೆಗೆ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸೀಮೆ ಎಣ್ಣೆ ಸಿಕ್ಕದೇ ಇರುವುದರಿಂದ ನಮ್ಮ ಹಳ್ಳಿಯಲ್ಲಿ ಜನರು ತುಂಬ ತೊಂದರೆ ಪಡುತ್ತಿದ್ದಾರೆ. ನನ್ನ ಮತದಾರ ಕ್ಷೇತ್ರದಲ್ಲಿ ಎಷ್ಟೋ ತಾಲ್ಲೂಕುಗಳಲ್ಲಿ, ಗ್ರಾಮಗಳಲ್ಲಿ ಎಲೆಕ್ಟ್ರಿಸಿಟಿ ಕೂಡ ಇಲ್ಲ ಅಲ್ಲಿ ಅನ್ನವನ್ನು ಕಟ್ಟಿಗೆಯಿಂದ ಬೇಯಿಸುತ್ತಾರೆ, ಅವರಿಗೆ ರಾತ್ರಿ ಹೊತ್ತು ದೀಪ ಹಚ್ಚಲಿಕ್ಕೆ ಕೂಡ ಸೀಮೆ ಎಣ್ಣೆ ಸಿಕ್ಕದಂಥ ಪ್ರದೇಶಗಳು ಕೂಡ ನಮ್ಮ ಜಿಲ್ಲೆಯಲ್ಲಿವೆ ಆದುದರಿಂದ ಸೀಮೆ ಎಣ್ಣೆಯನ್ನು ನಮ್ಮ ಜಿಲ್ಲೆಯಲ್ಲೂ ಸಿರಸಿ ತಾಲ್ಲೂಕು ಮತ್ತು ಅಂಕೋಲ ತಾಲ್ಲೂಕು, ಈ ಎರಡು ತಾಲ್ಲೂಕುಗಳಿಗೆ ವಿಶೇಷ ರೀತಿಯಿಂದ ಸೀಮೆ ಎಣ್ಣೆಯನ್ನು ಕೊಡಬೇಕು ಎಂದು ನಾನೇ ಕೇಳಿಕೊಳುತ್ತೇನೆ.

ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸಮಸ್ಯೆಗಳು ಬಹಳಷ್ಟು ಇವೆ. ಸಮಸ್ಯೆ ತಂದುಕೊಳ್ಳುವುದು, ಮೊದಲನೆಯದು, ದೇವರು ಸೃಷ್ಟಿ ಮಾಡುವಂಥ ಒಂದು ಸಮಸ್ಯೆ ಎರಡನೆಯದು, ನಾವು ಮಾನವರು ತಂದುಕೊಳ್ಳುವಂಥ ಒಂದು ಸಮಸ್ಯೆ. ಇನ್ನೊಂದು ದೇವರು ಕೊಟ್ಟಂಥ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಆಗದಿದ್ದರೆ ಅದನ್ನು ಯಾರೂ ಏನೂ ಹೇಳಲಿಕ್ಕಿಲ್ಲ, ಅದು ಕ್ಷಮ್ಯ ಎಂದು ಹೇಳಬಹುದು. ಆದರೆ ಮಾನವನು ಮಾಡಿಕೊಂಡಂಥ ಸಮಸ್ಯೆಯನ್ನು ಸರ್ಕಾರದವರು ಗಮನವಿಟ್ಟು ಅದನ್ನು ಸೂಕ್ತರೀತಿಯಿಂದ ಬಗೆಹರಿಸಿದರೆ ಅದು ಜನರಲ್ಲೂ, ಎಲ್ಲರಲ್ಲೂ, ಒಂದು ಅಕ್ಷಮ್ಯವಾಗಿ ತೋರುತ್ತದೆ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಈ ಸದನದಲ್ಲಿ ಎಲ್ಲ ಸದಸ್ಯರೂ ಆಹಾರದ ಬಗ್ಗೆ ಆಗಲೀ, ಯಾವುದರ ಬಗ್ಗೆ ಆಗಲೀ ಮಾತನಾಡುವಾಗ ಎಲ್ಲ ರೀತಿಯಲ್ಲೂ ಸರ್ಕಾರ ಅದು ಮಾಡಲಿಲ್ಲ, ಇದು ಮಾಡಲಿಲ್ಲ, ಅದನ್ನು ಕೊಡಲಿಲ್ಲ, ಇದನ್ನು ಕೊಡಲಿಲ್ಲ ಎಂದು ಹೇಳುತ್ತಾರೆ ನಿಜ. ಸರ್ಕಾರದವರೂ ಜನತೆಯಲ್ಲಿ ಸಹಕರಿಸಿ ಅವರಿಗೆ ಅನುಕೂಲ ಮಾಡಿಕೊಡುವುದು ಖರೆ. ಆದರೆ ಜನರು ಮತ್ತು ಇಲ್ಲಿಯ ಸದಸ್ಯರು ಮಾತನಾಡುವಾಗ, ನಾವು ಸರ್ಕಾರಕ್ಕೆ ಒಳ್ಳೆಯ ಸೂಚನೆ, ಸಲಹೆಗಳನ್ನು ಕೊಡಬೇಕೇ ಹೊರತು ಟೀಕೆ ಮಾಡುವುದರಿಂದ ಅದು ಯಾವುದನ್ನೂ ಕಡಿಮೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ. ಮಾನ್ಯ ಆಹಾರ ಸಚಿವೆಯರು ಹೆಣ್ಣುಮಗಳು ಇದ್ದಾರೆ. ಆ ಕಡೆ, ಈ ಕಡೆ ಇರುವ ಮಾನ್ಯ ಸದಸ್ಯರು, ಹೆಣ್ಣುಮಗಳು ಬಂದು ಆಹಾರ ಖಾತೆಯನ್ನು ತೆಗೆದುಕೊಂಡ ದಿವಸದಿಂದ ನಮಗೆ ಹಾಹಾಕಾರ ಉಂಟಾಗಿದೆ ಎಂದು ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ ಹೆಣ್ಣು ಮಗಳ ಹೃದಯ ಹೇಗೆ ಇರುತ್ತದೆ ಎಂದರೆ, ತಾಯಿ ಮಕ್ಕಳನ್ನು ಪೋಷಣೆ ಮಾಡುವಾಗ, ಮಕ್ಕಳಿಗೆ ಉಣ್ಣಸೋಣ ಎಂದು ತಮಗಿಲ್ಲದೇ ಹೋದರೂ ಮಕ್ಕಳಿಗೆ ಉಣ್ಣಸುತ್ತಾಳೆ. ಮಕ್ಕಳು ಊಟ ಮಾಡಬೇಕಾದರೆ, ಸ್ವಲ್ಪ ಬುದ್ಧಿವಂತರಾದ ಮಕ್ಕಳಾದರೆ, ಅಮ್ಮ ನೀನೂ ಒಂದು ತುತ್ತು ಊಟ ಮಾಡು ಎಂದು ಹೇಳುತ್ತಾರೆಯೋ ಹೊರತು ಪೂರ್ಣ ತಾನೇ ತಿನ್ನುವುದಿಲ್ಲ. ನಮ್ಮ ಮಕ್ಕಳು ತಾಯಿಯ ಜೊತೆಯಲ್ಲಿ ಸ್ವಲ್ಪ ಸಹಕರಿಸಿದರೆ ನಾವು ಆಹಾರ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ನಮ್ಮ ರಾಜ್ಯದಲ್ಲಿ ಉತ್ತಮ ರೀತಿಯಿಂದ ಬಗೆಹರಿಸಬಹುದು ಎಂದು ನಾನು ಹೇಳುತ್ತೇನೆ. ನಮ್ಮ ಮಿನಿಸ್ಟರ್ ಹೆಣ್ಣು ಮಗಳಾದ್ದರಿಂದ ಅದನ್ನು ತಿಳಿದುಕೊಂಡು ರಾಜ್ಯದಲ್ಲಿ ಬಡ ಜನತೆಗೆ ಆಹಾರ ಮತ್ತು ಕಂಟ್ರೋಲ್ ಬಟ್ಟೆಯನ್ನು ಕೊಡಬೇಕು. ಇದೆಲ್ಲವನ್ನೂ ಆಳವಾಗಿ ಅಭ್ಯಾಸ ಮಾಡಿ ಅದಕ್ಕೆ ಮನಃಪೂರ್ವಕವಾಗಿ ತಮ್ಮ ಕೈಲಾದಷ್ಟು ಹೆಚ್ಚಿನ ರೀತಿಯಿಂದ ಮಾಡುತ್ತಿದ್ದಾರೆ ಮತ್ತು ಇನ್ನು ಮುಂದೆ ಕೂಡ ಮಾಡುತ್ತಾರೆ ಎನ್ನುವ ಭರವಸೆ ನನಗೆ ಇದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರೇ ಕಡೆಯದಾಗಿ, ಒಂದು ವಿಷಯವನ್ನು ನಾನು ಹೇಳುವುದಾದರೆ ಜಗದಲ್ಲಿ ಎಲ್ಲರೂ ಕೂಡಿಕೊಂಡು ಹೋದರೇನೇ ಒಂದು ಸಮಾನತ್ವ ಬರುತ್ತದೆ. ಆದುದರಿಂದ ನಾವು ಕೂಡಿಕೊಂಡು ಹೋಗಬೇಕಾದರೆ ಹೇಗೆ ಹೋಗಬೇಕು ಎಂದು ನಮ್ಮ ಮಂಕುತಿಮ್ಮನ ಕಗ್ಗದಲ್ಲಿ ಡಿ. ವಿ. ಜಿ. ಯವರು ಹೀಗೆ ಹೇಳಿದ್ದಾರೆ.—

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು'
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು''
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು'
ಬಗೆಯಲರಿತವನೆ ಸಂಖಿ—ಮಂಕುತಿಮ್ಮ''

ಎಂದು. ಈ ತರಹದಿಂದ ನಾವು ಸದನದಲ್ಲಿದ್ದವರು, ಹೊರಗಡೆ ಇದ್ದಂಥ ಜನಗಳೆಲ್ಲರೂ ಕೂಡಿಕೊಂಡು ಹೋದರೆ ಜಗತ್ತಿನಲ್ಲಿರುವಂಥ, ನಾವು ಮಾನವರು ತಂದುಕೊಂಡಂಥ ಸಮಸ್ಯೆಗಳನ್ನು ಸಾಧ್ಯವುಂಟು ಎಂದು ಹೇಳಿಕೊಂಡು, ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ.—(ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯರೇ ; ಆಹಾರ ಮತ್ತು ಸಿವಿಲ್ ಸಪ್ಲೈಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ನನಗೆ ಕಾಲ ಮಿತಿಯಿರುವುದರಿಂದ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ ಆದರೂ ಕೆಲವು ಸಮಸ್ಯೆಗಳನ್ನು ಸಭೆಯ ಮುಂದೆ ಇಡುವುದಕೆ ಪ್ರಯತ್ನ ಮಾಡದೇ ಹೋದರೆ ಕ್ರಿಯಾಲೋಪವಾಗುತ್ತದೆ ಎನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ಅತೀ ವೇಗದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇದು ಪ್ರೊಕ್ಯೂರ್‌ಮೆಂಟ್ ಮತ್ತು ಡಿಸ್ಟ್ರಿಬ್ಯೂಷನ್ ಇವೆರಡನ್ನೂ ಹೊತ್ತಿರತಕ್ಕ ಇಲಾಖೆ. ಮೊದಲನೆಯದಾಗಿ, ಈ ಇಲಾಖೆಯ ಅಧಿಕಾರಿಗಳಿಗೆ ನಾನು ಅಭಿನಂದನೆ ಕೊಡಬೇಕಾಗಿದೆ.

5-30 P.M.

ಇವತ್ತು ನಮ್ಮ ಮುಂದಿರತಕ್ಕಂಥ ದೋಷವನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಏನಾಗಿದೆ ಎಂದರೆ ಒಂದು ಯೂನಿಫಾರಂ ಪಾಲಿಸಿಯಿಲ್ಲ. ಪ್ರಕ್ಯೂರ್‌ಮೆಂಟ್ ಏನೊಂದು ನೀತಿ ಇದೆ, ಇದಕ್ಕೆ ಒಂದು ಯೂನಿಫಾರಂ ಪಾಲಿಸಿ ಇಲ್ಲದೇ ಇರುವುದರಿಂದ ಹಲವಾರು ಗೊಂದಲಗಳಿಗೆ ಅವಕಾಶವನ್ನು ಉಂಟು ಮಾಡಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಕರ್ನಾಟಕ ಫುಡ್ ಕಾರ್ಪೊರೇಷನ್ ಎಂದು ಮಾಡಿದ ಮೇಲೆ ಇವತ್ತು ಮಾರ್ಕೆಟಿಂಗ್ ಫೆಡರೇಷನ್ ಎಂದು ಮಾಡಿ ಪ್ರಕ್ಯೂರ್‌ಮೆಂಟ್ ಮಾಡಲು ಇವತ್ತು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದರಿಂದ ಪ್ರಕ್ಯೂರ್‌ಮೆಂಟ್‌ನ್ನು ಎರಡು ವಿಧದಲ್ಲಿ ಮಾಡುತ್ತಿದ್ದೀರಿ. ಒಂದು ಲೆವಿ ಮುಖಾಂತರ ಇನ್ನೊಂದು ಓಪನ್ ಮಾರ್ಕೆಟ್‌ನಿಂದ ಕೊಳ್ಳತಕ್ಕಂಥದ್ದು. ಈ ಎರಡು ವಿಧಗಳಿಂದ ಲೆವಿಯನ್ನು ವಸೂಲಿ ಮಾಡುವುದರಿಂದ ಇದರಲ್ಲಿ ಕೆಲವು ಲೋಪದೋಷಗಳಿಗೆ ಅವಕಾಶವಾಗಿದೆ ಎನ್ನತಕ್ಕಂಥದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಇಡೀ ರಾಷ್ಟ್ರದಲ್ಲಿಯೇ ಇಲ್ಲದಷ್ಟು ಕರ್ನಾಟಕದಲ್ಲಿ ಬೆಳೆಗಾರರ ಮೇಲೆ ಲೆವಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಕಿರತಕ್ಕಂಥದ್ದು. Karnataka state has fixed a highest grade of Levey so far as producers levey is concerned in the whole country. ಆದುದರಿಂದ ಇವತ್ತು ರೈತನಿಗೆ ಇಷ್ಟು ಕಂಟಕಪ್ರಾಯವಾಗಿದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಮತ್ತು ನಮ್ಮ ರಾಜ್ಯದಲ್ಲಿ ಪ್ರಡ್ಯೂಸರ್ಸ್ ಮೇಲೆ ಲೆವಿಯನ್ನು ನಿಗದಿ ಮಾಡಿಲ್ಲ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೊಂದು ವಿಷಯ ಇವತ್ತು ತಾವು ಮರ್ಚೆಂಟ್ ಮೇಲೆ ಲೆವಿ ಹಾಕಿದ್ದೀರಿ ಮತ್ತೆ ಮಿಲ್ ಓನರ್ಸ್ ಮೇಲೆ ಲೆವಿಯನ್ನು ಹಾಕಿದ್ದೀರಿ. ಆದರೆ ಇವತ್ತು ಮರ್ಚೆಂಟ್ಸ್ ಮತ್ತು ಮಿಲ್ ಓನರ್ಸ್ ರೈತನ ಮೇಲೆ ಆ ಒಂದು ಲೆವಿ ಭಾರವನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಒಂದು ಲೋಪದೋಷದ ಬಗ್ಗೆ ವಿಶದವಾಗಿ ಪ್ರಸ್ತಾಪ ಮಾಡಬೇಕಾಗಿದ್ದರೂ ಕಾಲದ ಮಿತಿ ಇರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ಮತ್ತೊಂದು ಅರ್ಥ ಮಾಡಿಕೊಳ್ಳಬೇಕು ಸಹಕಾರ ಸಂಸ್ಥೆಗಳಿಗೂ ಕೂಡ ಪ್ರಕ್ಯೂರ್‌ಮೆಂಟನ್ನು ಮಾಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಅಲ್ಲಿ ಅವ್ಯವಹಾರ ನಡೆಯುವುದಕ್ಕೆ ಸಾಕಷ್ಟು ಅವಕಾಶವಿದೆ. ಈ ವಿಷಯವನ್ನು ನಾನು ಕಳೆದ ಸಾರಿಯೇ ಪ್ರಸ್ತಾಪ ಮಾಡಿದ್ದೇನೆ. ಗದಗ್ ಕೋ-ಆಪರೇಟೀವ್ ಸೊಸೈಟಿಗೆ ಸುಮಾರು ೨೫ರಿಂದ ೩೦ ಸಾವಿರ ಕ್ವಿಂಟಾಲ್ ಆಹಾರವನ್ನು ಪರ್‌ಚೇಜ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅವರು ಆ ಆಹಾರವನ್ನು ಹೇಗೆ ವಿತರಣೆ ಮಾಡಿದ್ದಾರೆ ಎಂಬುದನ್ನು ಈ ಸಭೆಗೆ ತಾವು ತಿಳಿಸಬೇಕಾಗುತ್ತದೆ. ಸರ್ಕಾರ ಈ ಸಹಕಾರ ಸಂಸ್ಥೆಯ ಮುಖಾಂತರ ಹಣವನ್ನು ಒದಗಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆಂದು ಹಿಂದೆ ನಾನು ಪ್ರಸ್ತಾಪ ಮಾಡಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಸಮರ್ಥನೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದರು. ಆ ಆಹಾರ ಪದಾರ್ಥವು ಹೇಗೆ ವಿತರಣೆ ಆಯಿತು ಎಂಬುದನ್ನು ತಿಳಿಸಬೇಕು, ಕಾಲದ ಒತ್ತಡ ಇರುವುದರಿಂದ ನನಗೆ ಗೊತ್ತಿರುವ ಕೆಲವಾರು ವಿಚಾರಗಳನ್ನು ಮೊಟಕು ಮಾಡಿ ಇಲ್ಲಿ ಹೇಳಬೇಕಾಗಿದೆ. ಇವತ್ತು ಲೆವಿ ದರ ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ಏತಕ್ಕೆಂದರೆ ಗೊಬ್ಬರದ ಬೆಲೆ ಬಹಳ ಹೆಚ್ಚಿನ ರೀತಿಯಲ್ಲಿ ಏರಿದೆ, ೧೦ ರೂಪಾಯಿಗಳು ಹೆಚ್ಚಾಗಿದೆ, ನೀವು ರೈತನಿಗೆ ಉತ್ತೇಜನ ಕೊಡಬೇಕಾದರೆ ಅವನಿಗೆ ಹೆಚ್ಚಿನ ಲೆವಿ ದರವನ್ನು ಕೊಡಬೇಕಾಗುತ್ತದೆ. ಇವತ್ತು ತಮಗೆ ಗೊತ್ತಿದೆ,

ನಾವು ಗೋಧಿಗೆ ೬೦ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಆದರೆ ಇವತ್ತು ಅದೇ ಅಕ್ಕಿಗೆ ಏತಕ್ಕೆ ಸಬ್ಸಿಡಿಯನ್ನು ಕೊಡಬಾರದು ? ಕೇಂದ್ರ ಸರ್ಕಾರದವರು ಅನುಸರಿಸತಕ್ಕಂಥ ಈ ದ್ವಿಮುಖ ನೀತಿಯನ್ನು ಖಂಡಿಸಬೇಕಾಗುತ್ತದೆ. ಹಿಂದೆ ಒಂದು ಕಾಲದಲ್ಲಿ ಗೋಧಿಯನ್ನು ಹೆಚ್ಚಾಗಿ ಉಪಯೋಗ ಮಾಡಬೇಕು ಎನ್ನತಕ್ಕಂಥ ಪ್ರಚಾರದ ದೃಷ್ಟಿಯಿಂದ ಗೋಧಿಗೆ ಸಬ್ಸಿಡಿಯನ್ನು ಕೊಡತಕ್ಕಂಥ ಕಾಲವೊಂದು ಇತ್ತು. ಆದರೆ ಇವತ್ತು ಎಲ್ಲರೂ ತಿನ್ನತಕ್ಕಂಥ ಗೋಧಿಗೆ ಪ್ರಚಾರ ಮಾಡಬೇಕಾದ ಅಗತ್ಯವಿಲ್ಲ ಆದುದರಿಂದ ಇವತ್ತು ಅಕ್ಕಿಗೂ ಏತಕ್ಕೆ ೬೦ ರೂಗಳನ್ನು ಸಬ್ಸಿಡಿ ಕೊಡಬಾರದು ? ನೀವು ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡಿರುವಾಗ ಲೆವಿ ದರದ ಬೆಲೆಯನ್ನು ಏತಕ್ಕೆ ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ವಿಷಯ, ಹಿಂದೆ ನಾನು ಅನೇಕ ಬಾರಿ ಒಂದು ಎಕರೆಗಿಂತ ಕಡಿಮೆ ಇರುವವರಿಂದ ಲೆವಿಯನ್ನು ವಸೂಲಿ ಮಾಡಬೇಡಿ, ಅವರ ಮೇಲೆ ಲೆವಿ ಭಾರವನ್ನು ಹಾಕಬೇಡಿ ಹಾಕಬೇಡಿ ಎಂದು ಪದೇ ಪದೇ ಹೇಳಿದ್ದೇನೆ. ಆದರೂ ಕೂಡ ತಾವು ಇವತ್ತಿನ ದಿವಸ ಹಾಕಿದ್ದೀರಿ. ಇವತ್ತು ನಮ್ಮ ಮುಂದಿಟ್ಟಿರತಕ್ಕಂಥ ಅಡ್ಮಿನಿಸ್ಟ್ರೇಷನ್ ರಿಪೋರ್ಟ್‌ನಲ್ಲಿ ಒಂದು ಎಕರೆ ಇರುವವರು ಅರ್ಧ ಕ್ವಿಂಟಾಲ್ ಲೆವಿಯನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೀರಿ ಇವತ್ತು ನಾನು ಕೇಳುತ್ತೇನೆ ಒಂದು ಎಕರೆ ಜಮೀನಿನಲ್ಲಿ ಬೆಳೆಯುತಕ್ಕಂಥವನಿಗೆ ಅದು ಅವನ ಕುಟುಂಬಕ್ಕೇ ಸಾಕಾಗುವುದಿಲ್ಲ ಅವನ ಕುಟುಂಬದ ಜೀವನಕ್ಕೆ ಸಾಕಾಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಇದ್ದಾಗ್ಯೂ ನೀವು ಕೇಳುತ್ತಿದ್ದೀರಿ ಇವತ್ತು ನೀವು ಬಹಿರಂಗ ಮಾರ್ಕೆಟ್‌ನಲ್ಲಿ ಒಂದು ಕ್ವಿಂಟಾಲ್‌ಗೆ ೧೫೦-೧೬೦ ರೂಪಾಯಿಗಳವರೆಗೂ ಭತ್ತದ ಬೆಲೆ ಇದೆ, ಆದರೆ ಇವತ್ತು ನೀವು ಅವನಿಂದ ಕೊಂಡುಕೊಳ್ಳತಕ್ಕಂಥದ್ದು ೭೫-೮೦ ರೂಪಾಯಿಗಳಿಗೆ, ಇದರಿಂದ ಅವನು ೮೦ ರೂಪಾಯಿಗಳನ್ನು ಕಳೆದುಕೊಳ್ಳತಕ್ಕಂಥ ಪರೋಕ್ಷವಾದಂಥ ಹೊರೆಯನ್ನು ಅವರು ಹೊರಬೇಕಾಗುತ್ತದೆ. ಆದುದರಿಂದ ಕನಿಷ್ಟ ಒಂದು ಎಕರೆಗಿಂತ ಕಡಿಮೆ ಇರತಕ್ಕಂಥವರಿಗೆ ವಿನಾಯಿತಿ ಕೊಡಬೇಕೆಂದು ಮತ್ತೊಮ್ಮೆ ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ನೀವು ಲೆವಿ ಟಾರ್ಗೆಟ್‌ನ್ನು ಇನ್‌ಕ್ರೀಜ್ ಮಾಡಿದ್ದೇವೆ, ಇನ್ನು ಹೆಚ್ಚು ಫಿಕ್ಸ್ ಮಾಡಿದ್ದೇವೆಂದು ತಿಳಿದುಕೊಳ್ಳಬಹುದು, ಆದರೆ ಇದರಿಂದ ಮಿನಿಸ್ಟರ್‌ರವರು ಸಮಾಧಾನ ತಂದುಕೊಳ್ಳಬಾರದು, ಬಹಳ ಕಷ್ಟವಿದೆ ನಮ್ಮ ಸ್ಟೇಟ್‌ನಲ್ಲಿ ಇಷ್ಟು ಉತ್ಪಾದನೆ ಮಾಡಿದ್ದೇವೆಂದು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಅದು ಸರಿಯಾದಂಥ ಅಂಕಿಅಂಶಗಳು ಅಲ್ಲ. ಇವತ್ತು ಸುಗ್ಗಿ ಕಾಲದಲ್ಲಿಯೇ ಒಂದು ಕ್ವಿಂಟಾಲ್‌ಗೆ ಇವತ್ತು ಅಕ್ಕಿಗೆ ಮೂರು ನೂರು ರೂಪಾಯಿ ಬೆಲೆ ಇದೆ. ಎರಡು ನೂರು ರೂಪಾಯಿ ರಾಗಿಯ ಬೆಲೆ ಇದೆ ಸುಗ್ಗಿ ಕಾಲದಲ್ಲಿ ಇಂಥ ಸನ್ನಿವೇಶವಿರತಕ್ಕಂಥ ಒಂದು ಸಂದರ್ಭವನ್ನು ಅವಲೋಕನೆ ಮಾಡಿದರೆ ಮುಂದೆ ೫ ರೂಪಾಯಿಗಳವರೆಗೆ ಹೋಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಬಹಳ ಎಚ್ಚರಿಕೆಯಿಂದ ಸರ್ಕಾರ ಈ ಒಂದು ಕೆಲಸದಲ್ಲಿ ಕಾರ್ಯನಿರ್ವಹಣೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯ ಈ ಒಂದು ಡಿಸ್ಟ್ರಿಬ್ಯೂಷನ್ ಬಗ್ಗೆ ಹೇಳುವುದಾದರೆ ತಾವು ಇಲ್ಲಿ ಪ್ರವೇಶ ಮಾಡಬೇಡಿ, ಏತಕ್ಕೆಂದರೆ ಒಂದು ಕಡೆ ಕೊ-ಆಪರೇಟೀವ್ ಸಂಸ್ಥೆಗಳ ಮುಖಾಂತರ, ಮತ್ತೊಂದು ಕಡೆ ಪಂಚಾಯಿತಿಗಳ ಮುಖಾಂತರ ಇಲ್ಲವೇ ಸಣ್ಣ ಸಣ್ಣ ಅಡಹಾಕ್ ಕಮಿಟಿಗಳ ಮುಖಾಂತರ, ಒಂದೊಂದು ಕಡೆ ಒಂದೊಂದು ರೀತಿಯಂತೆ ಅನುಸರಿಸತಕ್ಕಂಥದ್ದು ಯೋಗ್ಯವಲ್ಲ ಅದರಿಂದ ತಮಗೂ ಗೌರವ ತರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ನೀವು ಕೊಡತಕ್ಕಂಥ ಪದಾರ್ಥ ರೈತನಿಗೆ ಮುಟ್ಟತಕ್ಕಂಥ ಸ್ಥಿತಿಯಲ್ಲಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಕಂಚೆಗೌಡರವರು ಹೇಳಿದರು, ಸಮಾಜದ ದುರ್ಬಲ ವಂಗಡಗಳಿಗೆ ಆಹಾರ ವಸ್ತುಗಳು ನ್ಯಾಯ ಬೆಲೆಗೆ ಒದಗಿಸಲು ಅನುಕೂಲವಾಗಿದೆಂದು ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದಾರೆ ಇವತ್ತು ಬಹುಶಃ ನಗರದಲ್ಲಿರತಕ್ಕಂಥ ೨-೩ ಪಟ್ಟಣಗಳನ್ನು ಬಿಟ್ಟರೆ ಬಾಕಿ ಎಲ್ಲಾ ಕಡೆಗೂ ಯಾವ ಒಂದು ಬಡವರ್ಗದ ಜನತೆ ಇವೆ ಅವರಿಗೆ ಆಹಾರ ಪದಾರ್ಥಗಳನ್ನು ಒದಗಿಸತಕ್ಕಂಥ ಸ್ಥಿತಿಯಲ್ಲಿ ಸರ್ಕಾರವಿಲ್ಲ ಎನ್ನತಕ್ಕಂಥದ್ದನ್ನು ತಾವು ಒಪ್ಪಿಕೊಳ್ಳಬೇಕು. ೨-೩ ಕ್ವಿಂಟಾಲ್ ಮೈಲೋವನ್ನು ಪೇಟೆಯಲ್ಲಿಯೇ ಮಾರಿರತಕ್ಕಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಆದುದರಿಂದ ತಾವು ಇವರ ಬಗ್ಗೆ ಸ್ವಲ್ಪ ಕಠಿಣವಾಗಿ ಒಂದು ಆದೇಶವನ್ನು ನೀಡಬೇಕಾಗುತ್ತದೆ. ಯಾವುದೇ ರಾಜಕೀಯ ಪಕ್ಷದವರು ಇರಲಿ ತಾವು ನೀಡತಕ್ಕಂಥ ಪದಾರ್ಥವನ್ನು ಸರಿಯಾಗಿ ವಿತರಣೆ ಮಾಡತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ಹೇಳುತ್ತೇನೆ ಇವತ್ತು ಮತ್ತೊಂದು ವಿಷಯ. ಎನ್‌ಫೋರ್ಸ್‌ಮೆಂಟ್ ಬಗ್ಗೆ ಶ್ರೀಮಾನ್ ಆರ್.ಎಸ್. ಪಾಟೀಲ್‌ರವರು ಹೇಳಿದರು ಅದಕ್ಕೆ ತಾವು ವಿವರಣೆಯನ್ನು ಕೊಡಬೇಕಾಗುತ್ತದೆ. ೩೨, ೧೪,೭೬೩.೯೩ ಗಳಷ್ಟು ಕ್ವಿಂಟಾಲ್ ಆಹಾರವನ್ನು ಸೀಜ್ ಮಾಡಿದ್ದೇವೆಂದು ಹೇಳಿದ್ದೀರಿ. ಅದರ ಮೊತ್ತ ಸುಮಾರು ೩,೩೮ ೪೯,೮೭೭ ರೂಗಳು ಆಗುತ್ತದೆ. ಇದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು ಈ ಕೇಸನ್ನು ಯಾವ ರೀತಿ ನಿಕಾಲಿ ಮಾಡಿದ್ದೀರಿ ? ಕಾನೂನಿನ ಚೌಕಟ್ಟಿನಲ್ಲಿ ಆಹಾರವನ್ನು ಸಂಗ್ರಹಣೆ ಮಾಡದೇ ಇರತಕ್ಕಂಥದ್ದಕ್ಕೆ ಮೊಕದ್ದಮೆಯನ್ನು ಹೂಡಿದ್ದೀರಾ? ಸರ್ಕಾರ ಇವತ್ತು ಅದನ್ನು ಮುಟುಗೋಲು ಹಾಕಿಕೊಂಡಿದ್ದಾರೆಯೇ ? ಇಲ್ಲದಿದ್ದರೆ

ರಾಜಕೀಯಕ್ಕೋಸ್ಕರ ಇವತ್ತು ಕೆಲವು ವ್ಯಕ್ತಿಗಳ ಮೇಲೆ ಈ ಒಂದು ಗಧಾ ಪ್ರಹಾರವನ್ನು ಮಾಡಿದ್ದೀರಾ ಎನ್ನುವ ಬಗ್ಗೆ ಕಳೆದ ಸಾರೆಯೇ ನಾನು ಒಂದು ಪ್ರಶ್ನೆ ಹಾಕಿದಾಗ; ಅದಕ್ಕೆ ಉತ್ತರವನ್ನು ಪಡೆಯಲಿಕ್ಕೆ ಪ್ರಯತ್ನ ಪಟ್ಟಾಗ ಸರ್ಕಾರದವರು ಇದಕ್ಕೆ ಸರಿಯಾದ ಉತ್ತರವನ್ನು ಕೊಡದಿದ್ದಾಗ ತಾವು ಈ ಪ್ರಶ್ನೆಯನ್ನು ತಡೆಹಿಡಿದಿದ್ದೀರಿ, ಸರ್ಕಾರಕ್ಕೆ ಇದರ ಬಗ್ಗೆ ಸರಿಯಾದ ವಿವರಣೆ ಕೊಡಬೇಕೆಂದು ಹೇಳಿ ಆದೇಶ ಕೊಟ್ಟಿದ್ದೀರಿ ಆದರೆ ಇಲ್ಲಿಯವರೆಗೆ ಉತ್ತರ ಬರಲಿಕ್ಕೆ ಸಾಧ್ಯವಾಗಿಲ್ಲ.

SMT E. E. VAZ.—Please make a correction in page 9 para 25.

Cases filed	Foodgrains seized (in quintals)	Value Rs
6340	2,53,009	3,83,52,709

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಇಲ್ಲಿ ಅಂಕಿಅಂಶಗಳನ್ನು ತಿದ್ದುಪಡಿ ಮಾಡತಕ್ಕಂಥದ್ದು ಅಷ್ಟು ಪ್ರಾಮುಖ್ಯವಾದುದಲ್ಲ. ಪ್ರಶ್ನೆ ನಮ್ಮ ಮುಂದಿರತಕ್ಕಂಥದ್ದು ಯಾವ ಆಹಾರ ಪದಾರ್ಥಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆ ಎನ್ನತಕ್ಕಂಥ ಒಂದು ಆರೋಪಣೆ ಇವತ್ತು ಇರುವುದು, ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ ಪ್ರಕಾರ ತಾವು ಅವರ ಮೇಲೆ ಮೊಕದ್ದಮೆಯನ್ನು ಹೂಡಿದ್ದಿರಾ ?, ಈ ಒಂದು ಮೊಕದ್ದಮೆಯಲ್ಲಿ ಅವರನ್ನು ಯಾವ ರೀತಿ ನಿಕಾಲೆ ಮಾಡಿದ್ದೀರಿ ? ಅವರು ಆಹಾರ ಪದಾರ್ಥಗಳನ್ನು ಕಾನ್‌ಫಿಸಿಕೇಟ್ ಮಾಡಿಕೊಂಡಿದ್ದಾರೋ, ಅಥವಾ ಅವರಿಗೇ ಕನ್‌ವಿಕ್ಷನ್ ಕೊಟ್ಟಿದ್ದೀರೊ ? ವಸೂಲಿ ಬಾಜಿ ಕೆಲಸ ಮಾಡಿ ಪರೋಕ್ಷವಾಗಿ ಸಹಾಯ ಮಾಡಿದ್ದೀರೋ ? ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇದರ ಬಗ್ಗೆ ಹೈಕೋರ್ಟ್‌ನಲ್ಲಿ ಆದೇಶ ಕೊಟ್ಟಿದ್ದರೂ ಕೂಡ ಧಾರವಾಡ ಜಿಲ್ಲೆಯಲ್ಲಿ ಅಧಿಕಾರಿಗಳು ಹಾಕಿರತಕ್ಕ ಮೊಕದ್ದಮೆಗಳನ್ನು ನಿಕಾಲೆ ಮಾಡಿದ್ದರೂ ಸಂಬಂಧಪಟ್ಟ ಮಾಲೀಕರಿಗೆ ಬಿಡುಗಡೆ ಮಾಡುವುದಕ್ಕೆ ಇನ್ನೂ ಕೂಡ ನಿರ್ಣಯ ಆಗಿಲ್ಲವೆಂದು ಕೇಳಿದ್ದೇನೆ. ವಿರುದ್ಧ ಶಕ್ತಿಗಳನ್ನು ಗಮನ ಮಾಡುವುದಕ್ಕೆ ಎಲ್ಲಿಯವರೆಗೆ ಪ್ರಯತ್ನ ಮಾಡುತ್ತಿದ್ದೀರಿ ? ಹೈಕೋರ್ಟ್‌ನವರು ಕೇಸನ್ನು ನೀಕಾಲೆ ಮಾಡುವಂತೆ ಆದೇಶ ಕೊಟ ಮೇಲೂ ಕೂಡ ನೀವು ಮಾಡದೇ ಇರುವುದನ್ನು ನೋಡಿದರೆ ಇದು ಗೌರವ ತರುವಂತಹದ್ದಲ್ಲವೆಂದು ಹೇಳಬೇಕಾಗಿದೆ. ತಾವು ಇದರ ಬಗ್ಗೆ ಪೂರ್ಣವಾದ ವಿವರಣೆಯನ್ನು ಕೊಡಬೇಕು. ನಾನು ಗಂಗಾವತಿಯಲ್ಲಿದ್ದಾಗ ನೀವು ೪ ಲಾರಿಗಳ ಮೇಲೆ ರೈಡ್ ಮಾಡಿ ಸುಮಾರು ೫೦ ಲಕ್ಷ ರೂಪಾಯಿಗಳ ಪ್ರಮಾಣದ ಆಹಾರ ಪದಾರ್ಥಗಳನ್ನು ಸೀಸ್ ಮಾಡಿದ್ದೀರಿ ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಅದಾದಮೇಲೆ ಏನು ಕ್ರಮವನ್ನು ಅದರ ಮೇಲೆ ತೆಗಿದುಕೊಂಡಿದ್ದೀರಿ. ಮೊದಲು ಮಾಲೀಕರ ಮೇಲೆ ಪ್ರಭಾವ ಬೀರುವುದಕ್ಕೆ ಪರೋಕ್ಷವಾಗಿ ಹಣ ಪಡೆಯುವ ಸನ್ನಿವೇಶಕ್ಕಾಗಿ ಮಾಡಿದ್ದೀರಿ, ಇದನ್ನು ನಾವು ಇವತ್ತು ಖಂಡನೆ ಮಾಡಬೇಕಾಗುತ್ತದೆ. ಯಾವ ತಪ್ಪಿತಸ್ಥನೇ ಇರಲಿ ಅವನ ಮೇಲೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಂಡು ಅಕ್ರಮ ದಾಸ್ತಾನು ಮಾಡಿರತಕ್ಕ ಆಹಾರ ಪದಾರ್ಥಗಳ ಮೇಲೆ ಮೊಕದ್ದಮ್ಮೆಗಳನ್ನು ಹೂಡಿದ್ದೀರೋ ಇಲ್ಲ. ಆಹಾರ ಪದಾರ್ಥಗಳನ್ನು ಕಾನ್‌ಫಿಸ್ಕೇಟ್ ಮಾಡಿಕೊಳ್ಳಲಾರದೆ ವಸೂಲಿ ಬಾಜಿ ಕೆಲಸ ಮಾಡಿಸಿ ಬಂದಿದ್ದರೆ ಅದನ್ನಾದರೂ ಹೇಳಬೇಕು, ಇದರ ಬಗ್ಗೆ ಪೂರ್ಣವಾದ ವಿವರಣೆಯನ್ನು ಈ ಸಂದರ್ಭದಲ್ಲಿ ತಾವು ಒದಗಿಸಿಕೊಡಬೇಕೆಂದು ಕೇಳುತ್ತೇನೆ, ಕೆಲವರು ಲೆವಿ ಕೊಟ್ಟಂತಹ ರೈತರ ಮೇಲೂ ಮೊಕದ್ದಮೆಗಳನ್ನು ಹೂಡಿದ್ದೀರಿ, ಈ ಮೊಕದ್ದೊಮ್ಮೆಗಳನ್ನು ಇನ್ನೂ ಕೂಡ ನಿಕಾಲೆ ಮಾಡಿಲ್ಲ. ನಮ್ಮ ಜಿಲ್ಲೆಯಲ್ಲಿ ಯಾವ ಅಪರಾಧಗಳಿಗೋಸ್ಕರ ಈ ರೀತಿ ಕೆಲಸ ಮಾಡಿದ್ದೀರೆಂದು ಕೇಳಬೇಕಾಗಿದೆ. ರೈತ ತನ್ನ ಜೀವಮಾನ ತೊಟ್ಟಿರುವುದೇ ಒಂದು ಶಾಪವೇ ಎಂದು ಕೇಳಬೇಕಾಗುತ್ತದೆ, ಈ ಬಗ್ಗೆ ತಾವು ಬೇರೆ ವಿವರಣೆಯನ್ನು ಈ ಸಂದರ್ಭದಲ್ಲಿ ಕೊಡಬೇಕಾಗುತ್ತದೆಂದು ಕೇಳುವುದಕ್ಕೆ ಇಚೆ ಪಡುತ್ತೇನೆ. ತಾವು ವಿವರಣೆ ಕೊಡದೇ ಹೋದಲ್ಲಿ ಸರ್ಕಾರಕ್ಕೆ ಇದು ಪೂರ್ಣ ಕೆಟ್ಟ ಹೆಸರನ್ನು ತರುತ್ತವೆಂದು ನಿಮ್ಮ ನಿಷ್ಠೆಯ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ ಎಂದು ತಿಳಿಸಬಯಸುತ್ತೇನೆ.

ನನಗೆ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ಮತ್ತೊಂದು ವಿಷಯವನ್ನು ಬಹಳ ಸೂಕ್ಷ್ಮವಾಗಿ ಹೇಳಬಯಸುತ್ತೇನೆ. ತಾವು ಪೇಜ್ ೫ರಲ್ಲಿ ಒಂದು ಮಾತನ್ನು ಹೇಳಿದ್ದೀರಿ "From 1st February 1975 these prices have been revised taking in to consideration the escalation in inter-state Transport and other factors." ನಾನು ಕೇಳುತ್ತೇನೆ, ಹಳೆಯ ಲೆವಿ ದರದಲ್ಲಿ ಕೊಂಡುಕೊಂಡಿರತಕ್ಕ ಆಹಾರ ಪದಾರ್ಥಕ್ಕೆ ೧ನೇ ಫೆಬ್ರವರಿ ೧೯೭೫

ರಿಂದ ಕೋರ್ಸ್ ಗ್ರೈನ್ ೧ರೂ. ೩೫ ಪೈಸೆ ಇದ್ದುದನ್ನು ೧ ರೂ. ೬೦ ಪೈಸೆ ಯಂತೆ ಮಾರಾಟ ಮಾಡತಕ್ಕದೆಂದು ನಿರ್ಧಾರ ಮಾಡಿದ್ದೀರಿ. ಅದಕ್ಕಾಗಿ ನಾನು ಕೇಳುತ್ತೇನೆ; ೧ರೂ ೩೫ ಪೈಸೆಗೆ ಮಾರಾಟ ಮಾಡಬೇಕಾದಂಥಾದ್ದನ್ನು ೧ರೂ. ೭೫ ಪೈಸೆ ಎಂದು ಮಾಡಿದ್ದೀರಿ, ೧ರೂ ೩೫ ಪೈಸೆಗೆ ಮಾರಾಟ ಮಾಡಬೇಕಾದ್ದನ್ನು ೧ ರೂ. ೮೫ ಪೈಸೆಗೆ ಮಾರಾಟ ಮಾಡಬೇಕೆಂದು ಮಾಡಿದ್ದೀರಿ. ೧ ರೂ. ೭೫ ಪೈಸೆಗೆ ಮಾರಾಟ ಮಾಡಬೇಕಾದ್ದನ್ನು ೧ ರೂ. ೯೫ ಪೈಸೆಗೆ ಮಾರಾಟ ಮಾಡಬೇಕೆಂದು ಮಾಡಿದ್ದೀರಿ. ಇದಕ್ಕೆ ಸರ್ಕಾರ ಕೊಟ್ಟಿರತಕ್ಕ ಕಾರಣ ಟ್ರಾನ್ಸ್‌ಪೋರ್ಟೇಷನ್ ಮತ್ತು ಇಂಟರ್‌ಸ್ಟೇಟ್ ರೇಟ್ ಎಂದು ನಾನು ಕೇಳಿದ್ದೇನೆ. ಈ ಆಹಾರವನ್ನು ತಾವು ಕಳೆದ ಸಾರಿ ಸಂಗ್ರಹಣೆ ಮಾಡಿದ್ದು ಅಂದಮೇಲೆ ಟ್ರಾನ್ಸ್‌ಪೋರ್ಟೇಷನ್ ಹೇಗಾಗುತ್ತದೆಂಬುದನ್ನು ಆಲೋಚನೆ ಮಾಡಬೇಕು. ಇದಕ್ಕೆ ಇಂಟರ್ ಸ್ಟೇಟ್ ಛಾರ್ಜಸ್‌ನ್ನು ಕೊಡಿಸತಕ್ಕ ಬಗ್ಗೆ ನಿಮ್ಮ ನೀತಿ ಏನೆಂದು ನಾನು ನಿಮ್ಮನ್ನು ಕೇಳಬೇಕಾಗುತ್ತದೆ. ಕಳೆದ ಸಾರಿ ಹಳೆಯ ದರದಲ್ಲಿ ಈ ಒಂದು ಲೆವಿಯನ್ನು ಸಂಗ್ರಹಣೆ ಮಾಡಿದ್ದೀರಿ. ಅಂದಮೇಲೆ ೧ನೇ ಫೆಬ್ರುವರಿ ೧೯೭ ರಿಂದ ಹೆಚ್ಚು ಬೆಲೆಯನ್ನು ನಿಗದಿ ಮಾಡುವುದಕ್ಕೆ ಕಾರಣವಾದರೂ ಏನು ? ನೀವು ಮಾರ್ವಾಡಿಗೂ ಕಡೆಯಾದ ಕೆಲಸವನ್ನು ಮಾಡುತ್ತಿದ್ದೀರಿ ಎಂದು ಹೇಳಬೇಕಾಗಿದೆ. ಕೆಲವು ಫ್ಲೋರ್ ಮಿಲ್‌ಗಳಿಗೆ ಪ್ರತಿ ತಿಂಗಳೂ ೫ ಸಾವಿರ ಕ್ವಿಂಟಲ್‌ವರೆಗೂ ಕೊಡುತ್ತಿದ್ದೇವೆಂದು ಹೇಳುತ್ತೀರಿ. ಈ ಬಗ್ಗೆ ಹೇಳಬೇಕಾದರೆ ಇದು ಒಂದು ದೊಡ್ಡ ರ್‍ಯಾಕೆಟ್, ಸರ್ಕಾರದ ಸುತ್ತಲೂ, ಅದರ ಚೌಕಟ್ಟಿನಲ್ಲಿ ಇರತಕ್ಕ ಜನ ಇವರು. ಇಲ್ಲೇ ಏನು ವೀಟ್ ಪ್ರಾಡಕ್ಟ್ಸ್ ತಯಾರು ಮಾಡುತ್ತೀರಿ, ಅವಕ್ಕೆ ಬಿಲ್ ಹಾಕತಕ್ಕದ್ದೇ ಒಂದು ಬೆಲೆ, ಅದನ್ನು ಮಾರಾಟ ಮಾಡತಕ್ಕದ್ದೇ ಮತ್ತೊಂದು ಬೆಲೆ ಇದಕ್ಕೆ ಬೇಕಾದರೆ ಉದಾಹರಣೆ ಕೂಡ ಕೊಡಲು ತಯಾರಾಗಿದ್ದೇನೆ. ಇವತ್ತು ಬೆಂಗಳೂರಿನಲ್ಲಿ ಸುಮಾರು ೨೪ ರೋಲಿಂಗ್ ಮಿಲ್‌ಗಳಿವೆ. ಇವುಗಳ ಮಾಲೀಕರು ಮಹಾ ಘಟಾನುಘಟಿಗಳು. ಇವತ್ತು ಸರ್ಕಾರ ಅವರ ಅಡಿದಾವರೆಗಳಲ್ಲಿ ನಡೆಯುತ್ತಿದೆ ಎಂದು ಹೇಳಬೇಕಾಗುತ್ತದೆ. ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ಇವತ್ತು ನಮ್ಮ ಸಮಾಜದಲ್ಲಿರತಕ್ಕ ವೀಕರ್ ಸೆಕ್ಷನ್ಸ್‌ಗೆ ಆಹಾರ ಪದಾರ್ಥಗಳನ್ನು ಹೆಚ್ಚಿನ ರೀತಿಯಲ್ಲಿ ಕೊಡುತ್ತೇವೆಂದು ಮತ್ತೊಂದು ಮಾತನ್ನು ಹೇಳಿದ್ದೀರಿ. ಇದು ಸಂತೋಷ. ಒಂದು ಉದಾಹರಣೆಯನ್ನು ಹೇಳಬೇಕಾದರೆ ಇವತ್ತು ಮಾಡ್ರನ್ ಬೇಕರಿ ಯವರು ತಯಾರು ಮಾಡುತ್ತಿರತಕ್ಕ ಬ್ರೆಡ್ಡನ್ನು ಯಾರು ಮೂಸಿಯೂ ಕೂಡ ನೋಡುವುದಕ್ಕಾಗುವುದಿಲ್ಲ. ಅದನ್ನು ಸಭೆಯ ಮುಂದೆ ತಂದು ಇಡಬೇಕೆಂದು ಮಾಡಿದ್ದೆ. ಆ ಬ್ರೆಡ್‌ನ ಬಣ್ಣವನ್ನೂ ಕೂಡ ನೋಡುವುದಕ್ಕಾಗುವುದಿಲ್ಲ. ಇದು ಗೌರ್ನಮೆಂಟ್ ಓನ್ಡ್ ಬೇಕರಿ ಎಂದು ಹೇಳಬೇಕಾದ ಪರಿಸ್ಥಿತಿ ಇದೆ. ವೀಟ್ ಪ್ರಾಡಕ್ಟ್ಸನ್ನು ತಯಾರು ಮಾಡತಕ್ಕ ಈ ಫ್ಲೋರ್ ಮಿಲ್‌ಗಳ ಹಂಗಿನಲ್ಲಿ ಈ ಸರ್ಕಾರ ಇದೆಯೋ ಎಂದು ಕೇಳಬೇಕಾಗಿದೆ. ನಿಮ್ಮ ಹತೋಟಿ ಅವರ ಮೇಲೆ ಏನಿದೆ ? ಅವರು ತಯಾರು ಮಾಡುವಂತಹ ವೀಟ್ ಪ್ರಾಡಕ್ಟ್ಸನ್ನು ಯಾವ ರೀತಿ ಮಾಡುತ್ತಾರೆ ನೀವು ಅವರಿಗೆ ಕೊಡತಕ್ಕ ರಸೀತಿ ಏನು ? ಅವರು ಹಾಕತಕ್ಕ ರಸೀತಿ ಏನು ಎಂಬುದನ್ನು ನೋಡಬೇಕು. ಅಲ್ಲದೆ ಅವರ ಮೇಲೆ ತಮ್ಮ ಹತೋಟಿ ಏನು ಇದೆ ಎನ್ನುವುದನ್ನು ಈ ಸಭೆಗೆ ತಾವು ತಿಳಿಸಬೇಕೆಂದು ತಮ್ಮಲ್ಲಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಇ. ಇ. ವಾಜ್.—ಲೆವಿ ಭತ್ತಕ್ಕೆ ಕ್ರಯ ಕಡಿಮೆ ಇದೆ ಎಂದು ಕೆಲವರು ಹೇಳುತ್ತಾರೆ. ಆದರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಇದೆ ಎಂಬುದನ್ನು ಸಹ ನೋಡಬೇಕು. ಕೇಂದ್ರ ಸರ್ಕಾರದವರು ೭೪ ರೂಪಾಯಿಗಳು ಎಂದು ನಿಗದಿ ಮಾಡಿದರೂ ಸಹ ನಾವು ೬ ರೂಪಾಯಿ ಜಾಸ್ತಿ ಕೊಡುತ್ತಿದ್ದೇವೆ. ಈ ಬಗ್ಗೆ ಯಾರೂ ಒಂದು ಒಳ್ಳೆಯ ಮಾತನ್ನು ಹೇಳಲಿಲ್ಲ. ಈಗ ಒಂದು ಕ್ವಿಂಟಾಲ್ ಭತ್ತ ಬೆಳೆಯಲು ೬೦ ರಿಂದ ೬೨ ರೂಪಾಯಿ ಖರ್ಚು ಬರುತ್ತದೆಂದು ಲೆಕ್ಕ ಹಾಕಲಾಗಿದೆ. ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ನಾವು ೮೦ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಇವರು ಅಧಿಕಾರ ವಹಿಸಿಕೊಂಡ ಮೇಲೆ ಈ ದೇಶದಲ್ಲಿ ಹಾಲು ಜೇನಿನ ಹೊಳೆಯೇ ಹರಿದು ಹೋಯಿತು, ಆದರೆ ರೈತರು ಅದಕ್ಕೆ ಕಟ್ಟೆ ಕಟ್ಟದ ಕಾರಣ ಅದೆಲ್ಲಾ ಬಂಗಾಳಕೊಲ್ಲಿ ಮತ್ತು ಅರಬ್ಬೀ ಸಮುದ್ರಕ್ಕೆ ಹರಿದುಹೋಯಿತು. ಆದ ಕಾರಣ ಇಲ್ಲಿ ಸರ್ಕಾರದ ತಪ್ಪೇನೂ ಇಲ್ಲ, ರೈತರದ್ದೇ ತಪ್ಪು.

ಶ್ರೀಮತಿ ಇ. ಇ. ವಾಜ್.—ಈಗ ೮೦ ರೂಪಾಯಿಗಳಂತೆ ಕೊಡುತ್ತಿರುವುದು ಸರಿಯಾದ ಕ್ರಯ ವಾಗಿದೆ. ಈ ಕೆಲವರು ಲೆವಿ ಧಾರಣೆ ಜಾಸ್ತಿ ಮಾಡಬೇಕೆಂದು ಕೇಳಿದರೆ ಮತ್ತೆ ಕೆಲವರು ಇಷ್ಯೂ ಪ್ರೈಸ್ ಕಡಿಮೆ ಮಾಡಿ ಎಂದು ಹೇಳುತ್ತಾರೆ, ಇದು ಯಾವ ರೀತಿ ಸಾಧ್ಯ ? ಸಬ್ಸಿಡಿ ಕೊಟ್ಟು ಲೆವಿ ಧಾರಣೆ ಯನ್ನು ಜಾಸ್ತಿ ಮಾಡಬೇಕೆಂದರೆ ಬೊಕ್ಕಸದಲ್ಲಿರುವ ಹಣ ಕೂಡ ಸಾಕಾಗುವುದಿಲ್ಲ. ಈಗ ರೈತರು ಎಷ್ಟು ಬೆಳೆ ಬೆಳೆಯುತ್ತಾರೋ ಅದರಲ್ಲಿ ಆರು ಪರ್ಸೆಂಟ್ ಕೂಡ ಲೆವಿ ಹಾಕುತ್ತಿಲ್ಲ, ಮತ್ತು ಎಲ್ಲ ವರ್ಷದ ೩೬೫

ದಿವಸವೂ ನೀರು ಸರಬರಾಜು ಆಗುತ್ತದೋ ಅಂತಹ ಕಡೆಗಳಲ್ಲಿ ಒಂದು ಎಕರೆಗೆ ಒಂದು ಕ್ವಿಂಟಾಲ್ ಲೆವಿ ಜಾಸ್ತಿ ಹಾಕಿದ್ದೇವೆ. ಅದೇ ಮಳೆ ಆಧಾರದ ಮೇಲೆ ಭತ್ತ ಬೆಳೆದರೆ ಒಂದು ಎಕರೆಯವರೆಗೆ ಲೆವಿ ಇಲ್ಲ. ವರ್ಷದಲ್ಲಿ ಎರಡು ಬೆಳೆಗಳಿಗೆ ನೀರಿನ ಆಶ್ರಯವಿರುವ ಕಡೆಗಳಲ್ಲಿ ಲೆವಿ ಪ್ರಮಾಣ ಜಾಸ್ತಿ ಮಾಡಿರುವುದರಿಂದ ೨೫ ಸಾವಿರ ಟನ್ ಲೆವಿ ಜಾಸ್ತಿ ಸಿಗುತ್ತಿದೆ. ಈಗ ಅನೇಕ ಕಡೆಗಳಲ್ಲಿ ಮಳೆಯಾಗಿಲ್ಲ, ಅಂತಹ ಕಡೆಗಳಲ್ಲಿ ಲೆವಿ ಮನ್ನಾ ಮಾಡಿದ್ದೇವೆ. ಈಗ ಒಟ್ಟು ೮೪೯೦೦ ನ್ಯಾಯ ಬೆಲೆ ಅಂಗಡಿಗಳಿವೆ. ಇನ್ನೂ ಕೆಲವು ಕಡೆಗಳಲ್ಲಿ ತೆರೆಯಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಎಲ್ಲಿ ಕಾರ್ಮಿಕರು ಮತ್ತು ಬಡ ಜನರು ಇದ್ದಾರೋ ಅಂತಹ ಕಡೆಗಳಲ್ಲಿ ಇನ್ನೂ ಕೆಲವು ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕೆ ಸರ್ಕಾರ ಸಿದ್ಧವಿದೆ.

ಇನ್ನು ಆಹಾರವನ್ನು ವಿತರಣೆ ಮಾಡುವ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ, ಈಗ ಬೆಂಗಳೂರಿನಲ್ಲಿರುವ ನಮ್ಮ ಡೈರೆಕ್ಟರ್ ಅವರು ಪ್ರತಿ ಜಿಲ್ಲೆಗೂ ಆಹಾರವನ್ನು ಅಲಾಟ್ ಮಾಡುತ್ತಾರೆ. ಅಕ್ಕಿ, ಗೋಧಿ, ಸಕ್ಕರೆ ಇವುಗಳನ್ನು ಜಿಲ್ಲಾವಾರು ಹಂಚಿಕೆ ಮಾಡಿದ ಮೇಲೆ ಆಯಾ ಜಿಲ್ಲೆಗಳಲ್ಲಿ ಹಂಚಿಕೆ ಮಾಡುವ ಕೆಲಸ ಜಿಲ್ಲಾಧಿಕಾರಿಗಳಿಗೆ ಸೇರಿದ್ದು ಆಯಾ ತಾಲೂಕ್‌ಗಳಿಗೆ ಎಷ್ಟೆಷ್ಟು ಬೇಕಾಗುತ್ತದೆಂಬುದನ್ನು ನೋಡಿಕೊಂಡು ಹಂಚಿಕೆ ಮಾಡುವ ಕೆಲಸ ಜಿಲ್ಲಾಧಿಕಾರಿಗಳಿಗೆ ಸೇರಿದ್ದು. ಆದರೆ ನಾವು ಜಿಲ್ಲಾವಾರು ಹಂಚಿಕೆ ಮಾಡುವಾಗ ಒಂದೊಂದು ಜಿಲ್ಲೆಗೆ ಒಂದೊಂದು ನಮೂನೆ ಎಂದು ಮಾಡುವುದಿಲ್ಲ. ನಮ್ಮ ಮಾನ್ಯ ಭಾಸ್ಕರಶೆಟ್ಟರು ಮಾತನಾಡುವಾಗ ನಾನು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದ್ದೇನೆಂದು ಹೇಳಿದರು. ಆದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ನಾನು ಹೆಚ್ಚು ವ್ಯಾಮೋಹ ತೋರಿಸುತ್ತಿದ್ದೇನೆಂದು ಹೇಳಿದರು. ಆದರೆ ಅದು ಸರಿಯಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ಅಭಾವ ಇದೆ ಎಂದು ಗೊತ್ತಾದ ಕೂಡಲೆ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಎಷ್ಟು ಅಕ್ಕಿ ಅಲ್ಲಿಗೆ ಬೇಕಾಗುತ್ತದೆಂಬುದನ್ನು ಪರಿಶೀಲನೆ ಮಾಡಿಕೊಂಡು ಬಂದ ಮೇಲೆ, ಅಲ್ಲಿಯ ಕೊರತೆಯನ್ನು ನೀಗಿಸುವಷ್ಟು ಆಹಾರವನ್ನು ಕಳುಹಿಸಿಕೊಡುತ್ತಿದ್ದೇವೆ. ಇದೇ ರೀತಿ ಬೇರೆ ಜಿಲ್ಲೆಗಳಿಗೂ ಕೂಡ ಆಹಾರದ ಕೊರತೆ ಇದೆಯೆಂದು ಕಂಡುಬಂದರೆ ಆಹಾರ ಸಾಮಗ್ರಿಗಳನ್ನು ಕಳುಹಿಸುವುದಕ್ಕೆ ನಾವು ಸದಾ ಸಿದ್ಧರಿದ್ದೇವೆ. ಈ ಮಾತನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಅಂತರ ಜಿಲ್ಲಾ ಸಾಗಾಣಿಕೆಯ ಮೇಲಿರುವ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಕೆಲವರು ಕೇಳಿದರು. ಬೇರೆ ರಾಜ್ಯಗಳಲ್ಲಿ ಈ ರೀತಿಯ ನಿರ್ಬಂಧವನ್ನು ತೆಗೆದುಹಾಕಿದ ಮೇಲೆ ಅಲ್ಲಿ ಏನಾಗಿದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು, ನಮ್ಮ ರಾಜ್ಯದಲ್ಲಿ ಬೆಲೆಗಳು ಇಷ್ಟರಮಟ್ಟಿಗೆ ಉಳಿದಿರುವುದಕ್ಕೆ ಕಾರಣ, ನಾವು ಅಂತರಜಿಲ್ಲಾ ನಿರ್ಬಂಧವನ್ನು ಹಾಕಿರುವುದರಿಂದ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದ ಮೇಲೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಎಷ್ಟೇ ಒತ್ತಡ ಬಂದರೂ ಸಹ ನಿರ್ಬಂಧವನ್ನು ತೆಗೆದುಹಾಕಲಿಲ್ಲ, ಈ ಕಾರಣದಿಂದಲೇ ನಾವು ಬೆಲೆಯನ್ನು ಹತೋಟಿಯಲ್ಲಿ, ನಿಯಂತ್ರಣದಲ್ಲಿ ಇಟ್ಟುಕೊಂಡು ಬರುವುದಕ್ಕೆ ಸಾಧ್ಯವಾಗಿರುವುದು. ಬೇರೆ ರಾಜ್ಯಗಳಲ್ಲಿ ಕೆ. ಜಿ ಅಕ್ಕಿಯ ಬೆಲೆ ೫ ರಿಂದ ೭ ರೂಪಾಯಿಗಳವರೆಗೆ ಹೆಚ್ಚಿದೆ. ಆದರೆ ನಮ್ಮ ರಾಜ್ಯದಲ್ಲಿ ಕೆ. ಜಿ. ಅಕ್ಕಿಯ ಬೆಲೆ ೩ ರೂಪಾಯಿಯಾಗಿದ್ದರೂ ಸಹ ಅದು ಎಷ್ಟೋ ಕಡಿಮೆ ಎಂದು ನಾವು ಹೆಮ್ಮೆ ಪಡಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಶಿಫಾರಸ್ ಆದರೂ ಮಾಡಬೇಕಾಗಿತ್ತು. ಈಗ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿ ೨೬೭೮ ಕಿಲೋಮೀಟರ್ ಬೌಂಡರಿ ಏರಿಯಾ ಗೋವಾ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಮತ್ತು ಕೇರಳಾ ರಾಜ್ಯಗಳನ್ನು ಒಳಗೊಂಡಂತೆ ಇದೆ. ಇದರ ಜೊತೆಗೆ ೨೫೮ ಕಿಲೋಮೀಟರ್‌ನಷ್ಟು ಕರಾವಳಿ ಪ್ರದೇಶವಿದೆ. ಇಷ್ಟೊಂದು ದೊಡ್ಡ ಬೌಂಡರಿ ಪ್ರದೇಶದಿಂದ ಅಕ್ಕಿ ಹೊರಗಡೆ ಹೋಗದಂತೆ ತಡೆಗಟ್ಟುವ ಕೆಲಸವನ್ನು ನಾವು ಮಾಡಬೇಕಾಗಿದೆ. ಇದು ಬಹಳ ಶ್ರಮದ ಕೆಲಸವಾದರೂ ಸಹ ನಾವು ಇತ್ತೀಚೆಗೆ ಅನೇಕ ಕ್ರಮಗಳನ್ನು ತೀವ್ರವಾಗಿ ತೆಗೆದುಕೊಂಡಿದ್ದೇವೆ. ಚೆಕ್ ಪೋಸ್ಟ್‌ಗಳನ್ನು ಬಲಪಡಿಸಿದ್ದೇವೆ ಜೊತೆಗೆ ಅಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಸಹ ಇಟ್ಟಿದ್ದೇವೆ. ಇದರ ಜೊತೆಗೆ ನಾವು ಒಂದು ಹೊಸ ಆಜ್ಞೆಯನ್ನು ಸಹ ಹೊರಡಿಸಿದ್ದೇವೆ ಏನೆಂದರೆ, ಯಾರಾದರು ಆಹಾರವನ್ನು ಕಳ್ಳಸಾಗಾಣಿಕೆ ಮಾಡಿದರೆ, ಆ ಆಹಾರ ಸಾಮಗ್ರಿಗಳ ಜೊತೆಯಲ್ಲಿ ಅದನ್ನು ಕೊಂಡೊಯ್ಯುವ ವಾಹನವನ್ನು ಸಹ ವಶಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಈ ಆಜ್ಞೆ ಹೊರಡಿಸಿದ್ದು ಯಾವಾಗ ?

ಶ್ರೀಮತಿ ಇ. ಇ. ವಾಜ್.—ಒಂದು ತಿಂಗಳಾಯಿತು.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಇನ್ನು ಕಳ್ಳ ಸಾಗಾಣಿಕೆ ಕಡಿಮೆಯಾಗುತ್ತದೆ.

ಶ್ರೀಮತಿ ಇ. ಇ. ವಾಜ್.—ಇನ್ನು ಬೇರೆ ರಾಜ್ಯಗಳಿಗೆ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವವರು ನಾವು ಯಾವ ಯಾವ ಮಾರ್ಗವನ್ನು ನಿಗದಿ ಮಾಡಿದ್ದೇವೋ ಆ ಮಾರ್ಗದಲ್ಲಿಯೇ ತೆಗೆದುಕೊಂಡು ಹೋಗಬೇಕು. ಆ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಏನಾದರೂ ತೆಗೆದುಕೊಂಡು ಹೋದರೆ ಅಂತಹವರ ಆಹಾರ ಸಾಮಗ್ರಿಗಳನ್ನು ಮತ್ತು ವಾಹನವನ್ನು ವಶಪಡಿಸಿಕೊಳ್ಳಬೇಕೆಂದು ಒಂದು ಹೊಸ ಆಜ್ಞೆ ಹೊರಡಿಸಿದ್ದೇವೆ ಈ ಆಜ್ಞೆ ಈ ತಿಂಗಳ ಹತ್ತನೇ ತಾರೀಖಿನಿಂದ ಜಾರಿಗೆ ಬರುವುದಿದೆ. ಇಷ್ಟೇ ಅಲ್ಲದೆ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಷ್ಟು ಪ್ರಮಾಣದ ಆಹಾರವನ್ನು ಬುಕ್ ಮಾಡಲಾಗಿದೆ, ಯಾವ ಯಾವ ಕಾರಣಕ್ಕೆ ಮಾಡಲಾಗಿದೆ. ಇದರ ಬಗ್ಗೆ ಏನೇನು ಕ್ರಮ ಕೈಗೊಂಡಿದ್ದಾರೆ. ಮತ್ತು ಬಿಡುಗಡೆ ಮಾಡಿದ್ದರೆ ಯಾವ ಕಾರಣದಿಂದ ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಪ್ರತಿ ತಿಂಗಳೂ ಸಹ ರಿಪೋರ್ಟ್ ಕಳುಹಿಸಿಕೊಡಬೇಕೆಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ತಿಳಿಸಲಾಗಿದೆ. ಕೇಂದ್ರ ಸರ್ಕಾರದ ಹುಕುಂ ಪ್ರಕಾರ ಒರಟು ಧಾನ್ಯಗಳನ್ನು ರಾಜ್ಯದಿಂದ ರಾಜ್ಯಕ್ಕೆ ಸಾಗಿಸಬಹುದಾಗಿದೆ. ಈ ಕಾರಣದಿಂದ ನಮ್ಮ ರಾಜ್ಯದಲ್ಲಿ ಒರಟು ಧಾನ್ಯಗಳ ಬೆಲೆಗಳು ಹೆಚ್ಚಾಗುವುದನ್ನು ತಪ್ಪಿಸಲು. ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಆಹಾರ ಸಾಗಿಸುವವರು ೫೦ ಪರ್ಸೆಂಟ್ ರಿಕ್ವಿಜಿಷನ್ ಮಾಡಬೇಕೆಂದು ಒಂದು ಆಜ್ಞೆ ಹೊರಡಿಸಿದ್ದೇವೆ ಇದರಿಂದ ನಮ್ಮ ರಾಜ್ಯದಲ್ಲಿ ಒರಟು ಧಾನ್ಯಗಳ ಬೆಲೆಗಳು ಕ್ವಿಂಟಾಲ್ ಒಂದಕ್ಕೆ ೧೫ ರಿಂದ ೨೦ ರೂಪಾಯಿಗಳವರೆಗೆ ಕಡಿಮೆಯಾಗಿರುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು. ಈ ರೀತಿಯಾಗಿ ನಾವು ಬೆಲೆಗಳನ್ನು ಆದಷ್ಟು ನಿಯಂತ್ರಣದಲ್ಲಿಡಬೇಕೆಂದು ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಿದ್ದೇವೆ.

ಇನ್ನು ಮಾನ್ಯ ದೇವೇಗೌಡರು ಮಾತನಾಡುವಾಗ ರೈತರಿಂದ ಒಂದು ಸಲ ಲೆವಿ ವಸೂಲಿ ಮಾಡಿದ ಮೇಲೆ ಪುನಃ ಮಿಲರ್ಸ್ ಲೆವಿ, ಟ್ರಾನ್ಸ್‌ಪೋರ್ಟ್ ಲೆವಿ ಎಂದು ವಸೂಲಿ ಮಾಡಲಾಗುತ್ತಿದೆಯೆಂದು ಹೇಳಿದರು. ಪ್ರೊಡ್ಯೂಸರ್ಸ್ ಮೇಲೆ ಲೆವಿ ಹಾಕಲಾಗುತ್ತದೆಯೇ ಹೊರತು ಮಿಲರ್ಸ್ ಲೆವಿ ಎಂದು ಬೇರೆ ಇಲ್ಲ. ಇನ್ನು ಟ್ರಾನ್ಸ್‌ಪೋರ್ಟ್ ಲೆವಿ ಬಗ್ಗೆ ಹೇಳಬೇಕೆಂದರೆ......... .....

ಶ್ರೀ ಎಸ್. ಬಂಗಾರಪ್ಪ.—ಮಿಲ್ ಮಾಡಿಸಲು ಬತ್ತ ತಂದ ರೈತರು ಲೆವಿ ಕೊಡದಿದ್ದರೆ ಮಿಲ್‌ನವರು ಅದನ್ನು ಅಕ್ಕಿ ಮಾಡಿಕೊಡುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ.—ಲೆವಿ ಕೊಟ್ಟ ರಶೀದಿಯನ್ನು ತೋರಿಸಿದರೆ ಮಿಲ್ ಮಾಡಿ ಕೊಡುತ್ತಾರೆ.

ಶ್ರೀ ಎಸ್ ಬಂಗಾರಪ್ಪ.—ಪ್ರತಿ ರೈಸ್ ಮಿಲ್‌ನಲ್ಲಿಯೂ ಸಹ ರೈತರಿಂದ ಕಡ್ಡಾಯವಾಗಿ ಲೆವಿ ಎಂದು ವಸೂಲಿ ಮಾಡಿದರೆ.

SMT. E. E. VAZ.—There is producers' levy; there is no Miller's levy. You must have alr-adv gone through now we have cxempted some schools and cparitable institutions from transport levy.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ತಮ್ಮ ಭೂಮಿ ಗುಂಡ್ಲುಪೇಟೆಯಲ್ಲಿ ಇದೆ. ಅಲ್ಲಿಂದ ತಮ್ಮ ಮನೆಗೆ ಅಕ್ಕಿ ತರಬೇಕೆಂದರೆ, ಎಷ್ಟು ಲೆವಿ ಕೊಡಬೇಕು ಎಂಬುದನ್ನು ದಯವಿಟ್ಟು ಹೇಳಿ.

ಶ್ರೀಮತಿ ಇ. ಇ. ವಾಜ್.—ಗದಗ--ಬೇಟಗೇರಿ ವಿಷಯ ಹೇಳಿದರು. ಇಲ್ಲಿ ಪೂರ್ಣ ಮಾಹಿತಿ ಇಲ್ಲ. ತಮಗೆ ಮಾಹಿತಿ ಬೇಕಾದರೆ ಆದಷ್ಟು ಜಾಗ್ರತೆ ತಿಳಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾಳೆ ಅಥವಾ ನಾಳಿದ್ದು ಕೊಡುತ್ತೀರಾ ? ಕಳೆದ ಅಧಿವೇಶನದಲ್ಲೂ ಆದಷ್ಟು ಜಾಗ್ರತೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದುದರಿಂದ, ದಯವಿಟ್ಟು ತಾರೀಖು ಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮೂರು ಕೋಟಿ ರೂಪಾಯಿ ಏನಾಯಿತು ?

ಶ್ರೀಮತಿ ಇ. ಇ. ವಾಜ್.—ಇದರ ಬಗ್ಗೆ ಪೂರ್ತಿ ವಿವರ ತಯಾರು ಮಾಡಿಲ್ಲ. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೇಸ್ ಹಾಕಿದ್ದಾರೆ ಎಂಬ ಬಗ್ಗೆ ಅಂಕಿ-ಅಂಶ ಕೊಡುತ್ತೇನೆ.

ಶ್ರೀ ಹೆಚ್. ಡಿ ದೇವೇಗೌಡ.—ಎಷ್ಟು ಕೇಸು ಹಾಕಿದ್ದಾರೆ, ಅವರಿಗೆ ಏನು ಜುಲ್ಮಾನೆ ವಿಧಿಸಿದ್ದೀರಿ, ಎಷ್ಟು ಮಂದಿ ಕಾನೂನಿಗೆ ವಿರುದ್ಧವಾಗಿ ಸ್ಟಾಕ್ ಮಾಡಿದ್ದರೆ ? ತಾವು ಎಷ್ಟು ಕಾನ್ಫಿಸ್ಕೇಟ್ ಮಾಡಿದ್ದೀರಿ ? ಪುಕ್ಕಸಟ್ಟೆ ಬಿಟ್ಟರೆ ಅಥವಾ ದುಡ್ಡು ತೆಗೆದುಕೊಂಡು ಬಿಟ್ಟರೆ ಎಂಬುದನ್ನು ಹೇಳಿ.

ಶ್ರೀಮತಿ ಇ. ಇ. ವಾಜ್.—ಪುಕ್ಕಸಟ್ಟೆ ಯಾರನ್ನೂ ಬಿಡುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹೈಕೋರ್ಟ್ ಡೈರೆಕ್ಷನ್ ಕೊಟ್ಟರೂ ತೀರ್ಪು ಕೊಟ್ಟರೂ ಅದನ್ನು ಏತಕ್ಕೆ ತಾವು ಪರಿಪಾಲನೆ ಮಾಡಿಲ್ಲ ?

SMT E. E. VAZ.—The High Court has decided the case. And has removeded it to Deputy Commissioner The Deputy Commissioner has given another hearing.

ಶ್ರೀ ಹೆಚ್. ಡಿ. ದೇವೇಗೌಡ.— ರಾಜಕೀಯದಲ್ಲಿ ತಮಗೆ ಯಾರು ವಿರೋಧ ಶಕ್ತಿಗಳಿದ್ದಾರೆ ಅವರನ್ನು ದಮನ ಮಾಡುವುದಕ್ಕೋಸ್ಕರ ಈ ರೀತಿ ಅಸ್ತ್ರ ಪ್ರಯೋಗ ಮಾಡುತ್ತಿದ್ದೀರಿ, ಹೈಕೋರ್ಟ್ ನಿರ್ಣಯ ಮಾಡಿ ಇಲ್ಲಿಗೆ ೭—೮ ತಿಂಗಳಾಯಿತು. When the High Court has taken a decision and when the D. C. has ordered. ಡಿ, ಸಿ. ಇನ್ನೊಂದು ಹಿಯರಿಂಗ್ ಕೊಟ್ಟಿದ್ದಾರೆ ಎಂದರೆ ಅರ್ಥವೇನು ?

SMT. E. E. VAZ.—The Deputy Commissioner wanted to come to a compromise.

SRI H. D. DEVE GOWDA —When the High Court has taken a decision thare cannot be a compromise. either it should be fully seized or fully let out. After the decision of the High Court, what has the D C. done ?

SMT. E. E. VAZ.—It has been decided by the D. C. according to the merit of the case.

ಶ್ರೀ ಕೋಣಂದೂರು ಲಿಂಗಪ್ಪ —ಈ ರೀತಿ ಉತ್ತರ ಕೊಡುವುದು ಎಷ್ಟು ಯೋಗ್ಯವೆಂದು ತಾವೇ ಹೇಳಬೇಕು, ಈ ರೀತಿ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಾದರೆ...........

SRI H. D. DEVEGOWDA —I have made specific charges regarding Gangavati affair. ೮೪ ಮಿಲ್‌ಗಳ ಬಗ್ಗೆ ಎಷ್ಟು ಜನರಿಗೆ ಫೈನ್ ಹಾಕಿದ್ದೀರಿ ? ಅಥವಾ ಪಾರ್ಟಿಗೆ ಫಂಡ್ ಎಂದು ತೆಗೆದುಕೊಂಡು ಬಿಟ್ಟಿದ್ದೀರೋ ?

SMT. E. E. VAZ.—If the hon. Member has got individual instances please let me have them and I will furnish all the information. ಪಾರ್ಟಿ ಫಂಡ್‌ಗೆ ತೆಗೆದುಕೊಳ್ಳಲಿಲ್ಲ, ಏನೂ ತೆಗೆದುಕೊಳ್ಳಲಿಲ್ಲ. ಈಗ ಎಷ್ಟು ಕೇಸಸ್ ಹಿಡಿದಿದ್ದಾರೆ ಎನ್ನುವುದರ ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು.—ಹೈಕೋರ್ಟಿನವರು ಡೆಪ್ಯುಟಿ ಕಮಿಷನರವರಿಗೆ ಆದೇಶ ಕೊಟ್ಟಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಹೆಚ್. ಡಿ, ದೇವೇಗೌಡ.—ಟೇಬಲ್ ಕೆಳಗೆ ಕಾಂಪ್ರಮೈಸ್ ಮಾಡಿಕೊಂಡು ಬಿಟ್ಟರು ಎಂದು ಹೇಳುತ್ತಿದ್ದೇನೆ.

ಶ್ರೀಮತಿ ಇ. ಇ. ವಾಜ್ —೧೨ ಸಾವಿರ ಕೇಸಸ್ ಡಿಟೇಲ್ಸ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾಹಿತಿ ಬೇಕಾದರೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ,—ಗಂಗಾವತಿ ಬಗ್ಗೆ ಹೇಳಿ,

ಶ್ರೀಮತಿ ಇ. ಇ. ವಾಜ್.—ಇದರ ಬಗ್ಗೆ ಮಾಹಿತಿಯನ್ನು ಆದಷ್ಟು ಜಾಗ್ರತೆ ಒದಗಿಸಿಕೊಡುತ್ತೇನೆ

ಶ್ರೀ ಕೋಣಂದೂರು ಲಿಂಗಪ್ಪ.—ದಯವಿಟ್ಟು ತಾರೀಖು ಕೊಡಿ. ಅದರಲ್ಲಿ ತಮ್ಮ ಪಾತ್ರ ಇಲ್ಲ. ಅದರಲ್ಲಿ ಬೇರೆಯವರು ಯಾರು ಯಾರು ಇದ್ದಾರೆ ಎನ್ನುವುದು ನಮಗೆ ಗೊತ್ತಿದೆ.

ಶ್ರೀ ಬಿ. ಜಿ. ಬಣಕಾರ್.—It is pending before the Deputy Commissioner ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೈಕೋರ್ಟ್ ಜಡ್ಜಮೆಂಟ್ ಡೆಪ್ಯುಟಿ ಕಮಿಷನವರ ಟೇಬಲ್‌ನಲ್ಲಿ ಇರಂತ್ತದೆಯೇ ?

ಶ್ರೀಮತಿ ಇ. ಇ. ವಾಜ್.—ಜಾಸ್ತಿ ಮಾಹಿತಿ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕಾರವಾರ ಜಿಲ್ಲೆಯಲ್ಲಿ ಮುನಗೋಡು ತಾಲೂಕಿನಲ್ಲಿ ರೈತರುಗಳ ಮನೆಗೆ ನುಗ್ಗಿ ಲೆವಿಯನ್ನು ವಸೂಲು ಮಾಡಿದ್ದಾರೆ. ಒಬ್ಬರ ಮನೆಯಲ್ಲಿ ೪೦-೪೫ ಕ್ವಿಂಟಾಲ್ ಲೆವಿಯನ್ನು ಹಾಕಿದ್ದಾರೆ, ಮತ್ತು ಅವರು ಕೊಟ್ಟುಬಿಟ್ಟಿದ್ದಾರೆ. ಅವರಿಗೆ ಊಟಕ್ಕಿದ್ದ ಭತ್ತವನ್ನೂ ತೆಗೆದುಕೊಂಡು ಬಂದಿದ್ದಾರೆ; ಬೂಟು ಕಾಲಿನಲ್ಲೇ ಮನೆಗೆ ನುಗ್ಗಿ ಲೆವಿ ಭತ್ತವನ್ನು ತಮ್ಮ ಅಧಿಕಾರಿಗಳು ವಸೂಲು ಮಾಡಿದ್ದಾರೆ. ಇಂತಹ ಸಾವಿರಾರು ಕೇಸುಗಳು ಇವೆ. ಎಷ್ಟೋ ಅಪಾದನೆಗಳು ಬಂದಿವೆ. ದಯವಿಟ್ಟು ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಕ್ಷೇತ್ರದಲ್ಲಿ ಲೈಸೆನ್ಸ್ ರಿನ್ಯೂ ಮಾಡುವುದಕ್ಕೆ ಲೆವಿ ಹಾಕ ಬೇಕೆಂದು ಹೇಳಿದ್ದಾರೆ.

ಶ್ರೀಮತಿ ಇ. ಇ. ವಾಜ್.—ತಮ್ಮ ಕಡೆ ಸರಕಾರದವರು ಕಿರುಕುಳ ಕೊಡುತ್ತಾರೆ ಎಂಬುದನ್ನು ನಂಬಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಕೆಲವು ಮಾನ್ಯ ಸದಸ್ಯರು ಹೋಗಿ ಯಾರೂ ಲೆವಿಯನ್ನು ಕೊಡ ಬೇಡಿ ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೆ ಹೇಳಬಾರದು ? ಭದ್ರಾ ಡ್ಯಾಂ ಕಟ್ಟಿದ್ದರು, ನೀರನ್ನು ಆ ಕಡೆ ತಿರುಗಿಸಿದರು; ಶರಾವತಿ ಪ್ರೊಜೆಕ್ಟ್ ಕಟ್ಟಿದ್ದರು ಅದನ್ನು ಇಡೀ ದೇಶಕ್ಕೇ ಕೊಡಬೇಕು: ಇನ್ನು ಗೊಬ್ಬರ ಯಾವುದೂ ಇಲ್ಲ. ಅಂದ ಮೇಲೆ ಏತಕ್ಕೆ ಲೆವಿ ಕೊಡಬೇಕು ? ಏತಕ್ಕೆ ಕೊಡಬಾರದು ಎನ್ನುವುದಕ್ಕೆ ಕಾರಣ ನಮ್ಮ ಹತ್ತಿರ ಬೇಕಾದಷ್ಟು ಇವೆ.

ಶ್ರೀ ಎನ್. ಚಿಕ್ಕೇಗೌಡ.—ಗೊಬ್ಬರ ಕೊಡುವುದಿಲ್ಲ ಎಂದು ಎಲ್ಲಿ ಹೇಳಿದೆ ?

6-30 P.M.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟು ಮುಗಿಸಲಿ.

ಶ್ರೀ ಎಸ್. ಬಂಗಾರಪ್ಪ.—ಈಗ ಮನೆಗೆ ನುಗ್ಗಿ ವಸೂಲು ಮಾಡುವುದನ್ನು ತಪ್ಪಿಸಬೇಕು.

SMT. E. E. VAZ.—On the other hand the Government wants to go to the help of the farmers in providing reasonable amenities like power, water, etc, I hope my friends are convinced with what I have stated,

ಶ್ರೀ ಎಸ್. ಬಂಗಾರಪ್ಪ.—ಈಗ ಮನೆಗೆ ನುಗ್ಗುವ ಕ್ರಮ ಮುಂದುವರೆಸುವುದನ್ನು ನಿಲ್ಲಿಸುತ್ತೀರಾ?

ಶ್ರೀಮತಿ ಇ. ಇ. ವಾಜ್.—ಅವರು ಲೆವಿ ಕೊಡದೇ ಇದ್ದರೆ ಏನು ಮಾಡುವುದು. ಇಷ್ಟೆಲ್ಲ ಟೀಕೆ ಮಾಡಿದ್ದರೂ ಒಮ್ಮತದಿಂದ ಮಂಜೂರು ಮಾಡುತ್ತೀರೆಂದು ಭರವಸೆ ನನಗೆ ಇದೆ. ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ಸದಸ್ಯರು ೭೪ ಕೋಟಿ ೪೯ ಲಕ್ಷ ೨೯ ಸಾವಿರ ರೂಪಾಯಿ ಕೇಳಿದ್ದಾರೆ ಎಂದು ಗಾಬರಿಯಾದರು ಜನರ ಹಣ ತೆಗೆದುಕೊಂಡು ಇಲಾಖೆಯವರು ತಿಂದು ಹಾಕುತ್ತಾರೋ ಎಂದು ಭಯ ಪಡುವುದು ಬೇಡ ನಾನು ಹೇಳಬಯಸುವುದು ಇಷ್ಟೇ. 1 ಕೋಟಿ ೧೨ ಲಕ್ಷದ ೮೦ ಸಾವಿರ ರೂಪಾಯಿ ನಮ್ಮ ಇಲಾಖೆಯ ಖರ್ಚು ಉಳಿದದ್ದು ೭೩ ಕೋಟಿ ೩೬ ಲಕ್ಷದ ೪೮

ಸಾವಿರ ರೂಪಾಯಿ ಫುಡ್ ಕಾರ್ಪೊರೇಷನ್‌ಗೆ ಕೊಡುವ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಡ್ ಹಣ. ಆಹಾರ ಪದಾರ್ಥಗಳು ಮಾರಿದ ತಕ್ಷಣ ಹಣ ವಾಪಸ್ಸು ಟ್ರೆಜರಿಗೆ ಬರುತ್ತದೆ. ಆದ್ದರಿಂದ ಎಲ್ಲರೂ ಪ್ರೀತಿ ವಿಶ್ವಾಸದಿಂದ ಈ ಬೇಡಿಕೆಯನ್ನು ಮಂಜೂರು ಮಾಡಿ, ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI K. PUTTASWAMY.—I cannot speak for the opposition. But, I can speak of my party. We are perfectly satisfied with the reply the Minister has given. I want Clarification on two points. The Hon. Minister was referring to the purchasers levy. Some of us own land in different districts altogether. In fact I own land in Mandya but I ve in Mysore, Am I to give transport levy in addition to purchasers' levy ? The second point is, in Mysore City quite a number of co op rative societies are formed. If I have understood the policy of the Government correctly, the Government wants to encourage consumers' co-operatives to deal with these controlled commodities and foodgrains' But, my impression is, in Mysore City fair price shops whose reputation is not quite high are being encouraged instead of encouraging consumers' co-operative societies. I would like to know what the Hon. Minister has to say on this matter.

SMT. E. E. VAZ.—If a person has lands in one district and lives in another district, he has to show the receipt given for having surrendered the levy. The Deputy Commissioner will then permit him to transport paddy for domestic purpose without any extra levy.

SRI H. D. DEVE GOWDA.—It need not exeactly be for domestic purpose. Once a person gives levy, he should be free to transport his paddy whether it be for domestic purpose or any other purpose. Why should you prevent him ?

SMT. E. E. VAZ.—Yes, with in the district their should be no restriction. He must declare how much he has grown and what quantity is to be tronsported from one district to another.

SRI K PUTTASWAMY.—Perhaps the Hon. Minister understood me to say that the transport of paddy from one district to another is only for consumption. There are persons who live in Mysore but they have lands in Mandya. I think they have a right to transport whatever they grow after surrendering the levy. But instances have come to my notice of demanding transport levy not only for paddynot meant for his own consumption but for paddy needed for his consumption also. Unfortunately the policy of the Government is one but when it is implemented it is different. Kindly see that these things are not done.

SRI KAGODU THIMMAPPA.—Can we not bring paddy from our field after paying the levy ?

SMT. E. E. VAZ.—When it is for domestic purpose, while transporting the paddy from one's own land to another district there is no levy. If it is taken for selling to another district, he has to pay levy.

SRI KAGODU THIMMAPPA.—Why should he pay? Once a clearance certificate is given for having paid the levy, why should their be any restriction ?

SMT. E. E VAZ.—The Government Orders are clear. If paddy is taken out for selling purpose they have to give transport levy.

ಶ್ರೀ ಹೆಚ್.ಡಿ. ದೇವೇಗೌಡ.—ನಾವು ಎಲ್ಲಾ ಲೆವಿ ಕೊಟ್ಟಮೇಲೆ ಕೆಲವು ಭಾಗವನ್ನು ಗೃಹಕೃತ್ಯಕ್ಕೆ ಇಟ್ಟುಕೊಳ್ಳುತ್ತೇವೆ, ಮಿಕ್ಕಿದ್ದನ್ನು ಮಾರುತ್ತೇವೆ.

SMT. E, E. VAZ.—If you sell within that district we will not ask levy.

ಶ್ರೀ ಕಾಗೋಡು ತಿಮ್ಮಪ್ಪ.—೧೫೦ ರೂಪಾಯಿ ಧಾರಣೆ ಇದ್ದರೂ ಕೂಡ ಲೆವಿಗೋಸ್ಕರ ೮೦ ರೂಪಾಯಿಗೆ ಕೊಡುತ್ತೇವೆ, ಕೊಡುವ ಲೆವಿ ಕೊಟ್ಟಮೇಲೂ ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲ ದಿದ್ದರೆ ಲೆವಿ ಏತಕ್ಕೆ ಕೊಡಬೇಕು ?

ಶ್ರೀಮಂತಿ ಇ. ಇ. ವಾಜ್.—ಬೇರೆ ಕಡೆಗೆ ತೆಗೆದುಕೊಂಡು ಹೋದರೆ ಟ್ರಾನ್ಸ್‌ಪೋರ್ಟ್ ಲೆವಿ ಯನ್ನು ಕೊಡಬೇಕಾಗುತ್ತದೆ. ಅದೇ ಜಿಲ್ಲೆಯಲ್ಲಿ ಮಾರುವುದಾದರೆ ಲೆವಿ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಸಾರಿ ಲೆವಿ ಕೊಟ್ಟ ಮೇಲೆ ಮತ್ತೊಂದು ಸಾರಿ ಲೆವಿ ಕೊಡ ಬೇಕಾದ ಅಗತ್ಯ ಇಲ್ಲ. ಕೊಡಬೇಕು ಎಂದು ರೂಲ್ಸ್ ಇದ್ದರೆ ಅದನ್ನು ತಿದ್ದುಪಡಿ ಮಾಡಿ.

ಶ್ರೀಮಂತಿ ಇ.ಇ. ವಾಜ್.—ಈಗ ಈ ರೀತಿ ಇದೆ. ಮುಂದಕ್ಕೆ We shall see how far we could amend it. I will get it examined.

ಶ್ರೀ ಕೆ ಆರ್. ಶ್ರೀನಿವಾಸುಲುನಾಯ್ಡು.—ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಘನ ಉದ್ದೇಶ ದಿಂದ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ತೆಗೆದುಕೊಂಡು ಹೋಗಬೇಕಾದರೆ ಪರ್ಮಿಟ್ ತೆಗೆದು ಕೊಂಡು ಹೋಗಬೇಕು. ಹಾಗೆ ತೆಗೆದುಕೊಂಡು ಹೋದರೆ ಸ್ಮಗಲ್ ಎಂದು ಅರ್ಥವಾಗುತ್ತದೆ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.—ಬೆಂಗಳೂರು ನಾರ್ತ್ ತಾಲ್ಲೂಕು ೪೦ ಹಳ್ಳಿಗಳು ಎಂದರೆ ಉದಾಹರಣೆಗೆ ಬಿ.ಇ.ಎಲ್., ಎಚ್.ಎಂ.ಟಿ., ಪೀಣ್ಯ, ಯಲಹಂಕ ಮುಂತಾದ ಕಡೆಗಳಲ್ಲಿ ಜಮೀನುಗಳನ್ನು ಇಂಡಸ್ಟ್ರೀಸ್‌ಗೆ ಅಕ್ವೈರ್ ಮಾಡಿಕೊಂಡಿದ್ದಾರೆ. ಈಗ ಜಮೀನು ಓನರ್ಸ್‌ಗೆ ಕೆಲಸ ಇಲ್ಲ. ಇನ್‌ಫಾರ್ಮಲ್ ರೇಷನ್ ತರುತ್ತೇವೆ ಎಂದು ಹೇಳಿದರು, ಅಲ್ಲಿ ಇನ್ನೂ ತಂದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರ್ಕಾರ ನಿಗದಿ ಮಾಡಿ ಎಷ್ಟು ಎಕರೆ ಗದ್ದೆ ಇದೆ, ಇಷ್ಟು ಲೆವಿ ಕೊಡಬೇಕಾಗುತ್ತದೆ ಎಂದರೆ ಅಷ್ಟು ಕೊಡಬೇಕಾಗುತ್ತದೆ, ಅಷ್ಟು ಕೊಟ್ಟು ತಮ್ಮಿಂದ ಪೂರ್ಣ ಕ್ಲಿಯ ರೆನ್ಸ್ ತೆಗೆದುಕೊಂಡ ಮೇಲೆ ಉಳಿದ ಪದಾರ್ಥದಿಂದ ಮಕ್ಕಳ ಮದುವೆ ಮಾಡಬೇಕು, ಗೊಬ್ಬರ ತೆಗೆದು ಕೊಳ್ಳಬೇಕು, ಹಬ್ಬ ಹುಣ್ಣಿಮೆ ಮಾಡಬೇಕು ಈ ದುಬಾರಿ ಬೆಲೆಯಲ್ಲಿ ರೈತ ಬೇರೆ ಪದಾರ್ಥ ಕೊಂಡು ಕೊಳ್ಳುವುದಕ್ಕೆ ತಾವು ಬೆಳೆದದ್ದು ಹೆಚ್ಚಿನ ಕಾಸಿಗೆ ಮಾರುವುದು ನ್ಯಾಯಬದ್ಧವಾದ ಹಕ್ಕು. ಸರ್ಕಾರ ನಿಗದಿ ಮಾಡಿದ ಲೆವಿ ಕೊಟ್ಟಮೇಲೆ ಕರ್ನಾಟಕದ ಯಾವ ಭಾಗದಲ್ಲಾದರೂ ಮಾರುವುದಕ್ಕೆ ಅಡ್ಡಿ ಮಾಡುವುದು ದೋಷವಲ್ಲವೇ ?

ಅಧ್ಯಕ್ಷರು.—ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ನಿರ್ಬಂಧ ಇದೆಯಲ್ಲ.

ಶ್ರೀ ಎಚ್.ಡಿ ದೇವೇಗೌಡ.—ಮರ್ಚೆಂಟ್ಸ್ ಮೇಲೆ ಜಿಲ್ಲೆಯಿಂದ ಜಿಲ್ಲೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವಾಗ ಲೆವಿ ಹಾಕುವುದರಲ್ಲಿ ಅರ್ಥ ಇದೆ. ಗ್ರೋಯರ್ಸ್ ತನ್ನ ಜಮೀನಿನಲ್ಲಿ ಬೆಳೆದಂಥ ಪದಾರ್ಥವನ್ನು ಹೊರಗಡೆ ಮಾರಾಟ ಮಾಡಬೇಕು ಎಂದರೆ ಒಂದು ಕಡೆ ಲೆವಿ ತೆಗೆದುಕೊಂಡರೂ ಇಂಟರ್ ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟ್ ಲೆವಿ ಎರಡನೇ ಸಾರಿ ಕೊಡುವುದು ಸರಿಯಲ್ಲ. Even from one district to another except the surplus quantity what I hold as a producer I cannot well it unless I give the transport levy.

ಅಧ್ಯಕ್ಷರು.—ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ರಿಸ್ಟ್ರಿಕ್ಷನ್ ಇದೆ,

ಶ್ರೀ ಎಚ್.ಡಿ ದೇವೇಗೌಡ —ಮಿಲ್‌ನಲ್ಲಿ ಲೆವಿ ಇಲ್ಲ ಎಂದು ಹೇಳಿದ್ದೀರಿ. ಮಿಲ್‌ನಲ್ಲಿ ಹಲ್ ಮಾಡಿಸಿ ಡೊಮೆಸ್ಟಿಕ್ ಕನ್ಸಂಪ್ಷನ್‌ಗೆ ಅಕ್ಕಿ ತೆಗೆದುಕೊಂಡು ಬರುವುದಾದರೆ ಲೆವಿ ಕೊಡಬೇಕಾಗಿಲ್ಲ. ಮಿಲ್‌ನಲ್ಲಿ ಹಲ್ ಮಾಡಿಸಿ ಮಾರಾಟ ಮಾಡುವವರು ಲೆವಿ ಕೊಡುವುದಕ್ಕೆ ತಯಾರಿಲ್ಲ. 28 ಪರ್ಸೆಂಟ್ ಏನು ಫಿಕ್ಸ್ ಮಾಡಿದ್ದೀರಿ, ಲೆವಿ ಹಾಕಿದರೆ ಕೊಂಡುಕೊಳ್ಳುತ್ತಾರೆ ಇಲ್ಲದಿದ್ದರೆ ಕೊಂಡ ಕೊಳ್ಳುವುದಿಲ್ಲ ಎಂದು ಹೇಳುತ್ತಾರೆ Again the producer is going to be harassed. ಹಲ್ ಮಾಡಿಕೊಂಡು ಮನೆಗೆ ತರುತ್ತಾರೆ ಎಂದರೆ ಇಲ್ಲ.

SRI KAGODU THIMMAPPA —This is not the answer we are expecting.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಭತ್ತ ಬೆಳೆದಿದ್ದೇನೆ, ಲೆವಿ ಸರ್ಕಾರದವರು ನಿಗದಿ ಮಾಡಿದಾ ರೆ ಅದನ್ನು ಕೊಡುತ್ತೇನೆ. ಉಳಿದಿದ್ದನ್ನು ನಮ್ಮ ಊರಿನಲ್ಲಿ ಮಿಲ್‌ಗೆ ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಸುತ್ತೇನೆ. ಆಮೇಲೆ ಮಾರಬೇಕು ಎಂದರೆ ಲೆವಿ ಕೊಡಬೇಕು. ಆದುದರಿಂದ ನಾವು ಮಾರುವುದಕ್ಕೆ ಲೆವಿ ಫಿಕ್ಸ್ ಮಾಡಬೇಡಿ ಎಂದು ನಮ್ಮ ಅಗ್ರಹ,

ಶ್ರೀಮತಿ ಇ. ಇ. ವಾಜ್ —ಯಾರಾದರೂ ಲೆವಿ ಕೊಟ್ಟರೆ ಅದು ಬಡ ಜನರಿಗೆ ಹಂಚಲಿಕ್ಕೆ ಹೋಗುತ್ತದೆ. ಎಲ್ಲರೂ ಸಮಾಜಕ್ಕಾಗಿ ದೇಶಕ್ಕಾಗಿ ತ್ಯಾಗಮಾಡಬೇಕು. ಮಾನ್ಯ ಸದಸ್ಯರು ದೊಡ್ಡ ಮನಸ್ಸುಮಾಡಿ ದೇಶಕ್ಕಾಗಿ ಸ್ವಲ್ಪ ತ್ಯಾಗವಮಾಡುವುದು ಉಚಿತ.

ಶ್ರೀ ಕೆ. ಎಚ್. ಹನುಮೇಗೌಡ.—ಮಳೆ ಬೆಳೆ ಹೋದರೆ 2 ತಿಂಗಳು ಸ್ವಲ್ಪ ಸಾಲ ನೀಡುವುದನ್ನು ತಪ್ಪಿಸಿ ಎಂದರೆ ಮನೆಗೆ ನುಗ್ಗಿ ಹರಾಜು ಮಾಡುತ್ತೀರಿ.

ಶ್ರೀಮತಿ ಇ. ಇ. ವಾಜ್.—ಸೋಷಲಿಸ್ಟ್ ಸದಸ್ಯರು ಸ್ವಲ್ಪ ದೊಡ್ಡ ಮನಸ್ಸು ಮಾಡಬೇಕು!

ಶ್ರೀ ಕೆ. ಎನ್. ವೀರಪ್ಪಗೌಡ.—ಫುಡ್ ಮಿನಿಸ್ಟರ್ ಹೇಳಬೇಕು. ರೈತರಿಗೆ ಹೆರಾಸ್‌ಮೆಂಟ್ ಮಾಡುವುದಿಲ್ಲ ಎಂದು ಎಲ್ಲರೂ ಹೇಳಿದ್ದಾರೆ. ರೈತ ಬೆಳೆನು ಕಡಿಮೆ ಬೆಲೆಗೆ ಕೊಟ್ಟಿದ್ದಾನೆ. ಓಪನ್ ಮಾರ್ಕೆಟ್ಟಿನಲ್ಲಿ ಮಾರುವವರು ನಮಗೆ ಕೊಡಿ ಎಂದು ಹೇಳುತ್ತಾರೆ. ಯಾರೋ ವ್ಯಾಪಾರಸ್ಥರು ಬಂದು ಡಿಸ್ಟ್ರಿಕ್ಟ್‌ನೊಳಗೆ ಕಡಿಮೆ ಬೆಲೆಗೆ ತೆಗೆದುಕೊಂಡು ಹೊರಗಡೆ ಹೆಚ್ಚಿನ ಬೆಲೆಗೆ ಮಾರುತ್ತಾರೆ ಎನ್ನುವ ಅಭಿಪ್ರಾಯದಲ್ಲ ಈ ರಿಸ್ಟ್ರಿಕ್ಷನ್ ಹಾಕಿದ್ದು. ಈ ರಿಸ್ಟ್ರಿಕ್ಷನ್ ಹಾಕಿದ್ದು ಮೂವ್‌ಮೆಂಟ್ ಕಂಟ್ರೋಲ್ ಮಾಡುವುದಕ್ಕೋಸ್ಕರ ಎಂದಕೆ ತಿಳಿದುಕೊಳ್ಳಬೇಕು. ರೈತನಿಂದ ಭತ್ತ ಕಿತ್ತುಕೊಳ್ಳುವುದಕ್ಕೆ ಅಲ್ಲ, ರೈತ ತಾನೇ ಬೆಳೆದಿರತಕ್ಕ ಭತ್ತವನ್ನು ಲಾಭ ಬರುವ ರೀತಿಯಲ್ಲಿ ಎಲ್ಲಿಗೆ ತೆಗೆದುಕೊಂಡು ಹೋದರೂ ಪರ್ಮಿಟ್ ತೆಗೆದುಕೊಳ್ಳಬೇಕು ಎನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ ತಿರುಗಿ ಲೆವಿ ಕೊಡಬೇಕು ಎಂದು ಹೇಳುವುದು ಸರಿಯಲ್ಲ, ಇದನ್ನು ಮಾಡಬಾರದು ಎಂದು ನಮ್ಮ ಅಭಿಪ್ರಾಯ.

SMT. E E. VAZ.—It comes under Transport order. It applies to all those who transport for commercial purpose from one district to another. We shall get it examined for future.

MADAM SPEAKER.—I will now put the motion to the vote of the House. The question is:

"That a sum not exceeding Rs 74,49,28,000 be granted to the Government to defray the charges which will come in course of payment during the financial year ending 31st day of March 1975 in respect of Demand No. 43 "Food and Civil Supplies."

The motion was adopted and Sums were granted.

The House now stands adjourned to meet again tomorrow at 1·00 p.m.

The House adjourned at Fifty Minutes past Six of the Clock to meet again at One of the Clock on Friday, the 7th March, 1975.